ಕಾಡುಗೊಲ್ಲರ ಬೆಡಗಿನ ಪದಗಳು

ಸಂಪಾದಕರು

ಶ್ವೇತಾ ಎಂ.ಬಿ.
ಮೋಹನ್ ಕುಮಾರ್ ಎನ್.

ಕಾಡುಗೊಲ್ಲರ ಬೆಡಗಿನ ಪದಗಳು ■ ಶ್ವೇತಾ ಎಂ.ಬಿ., ಮೋಹನ್ ಕುಮಾರ್ ಎನ್.



ಕಾಡುಗೊಲ್ಲರ ಬೆಡಗಿನ ಪದಗಳು

ಸಂಪಾದಕರು

ಶ್ವೇತಾ ಎಂ.ಬಿ.
ಮೋಹನ್ ಕುಮಾರ್ ಎನ್.

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ – ೫೮೧ ೧೯೭

KADUGOLLARA BEDAGINA PADAGALU

By

Shwetha M.B
Assistant Professor
Karnataka Janapada Univerisity, Gotagodi
Mob: 95380 99656 /97420 24953

Mohan Kumar N.
Artist
Karnataka Janapada Univerisity, Gotagodi
Mob: 97430 56053

Published by
Prof. S.C. Ramesh
Director
Centre for Extension and Consultancy
Karantaka Janapada University
Gotagodi - 581 205
Shiggavi Taluk, Haveri Dist, Karnataka
Phone: 0836 - 2255180
Pages: 95 **Price:** 60/-
www.janapadauni.in

First Impression : 2013

ISBN : 978-93-83149-14-8

ಬೆಲೆ : ೬೦ಃ

ಮುಖಪುಟ: **ಕೆ.ಕೆ. ಮಕಾಳಿ**

ಅಕ್ಷರ ಸಂಯೋಜನೆ : **ಸಂದೀಪ ಬಿ.ಆರ್, ವಿಶ್ವ ಗುಜ್ಜರ್**

ಪುಸ್ತಕ ದೊರೆಯುವ ಸ್ಥಳ:

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು, ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ **'ಹೊನ್ನ ಬಿತ್ತೇವು ಹೊಲಕೆಲ್ಲ'** ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ ಅಧ್ಯಯನ,

ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಕರ್ನಾಟಕದಲ್ಲಿ ಹಲವು ಬುಡಕಟ್ಟು ಸಮುದಾಯಗಳಿವೆ. ಪ್ರತಿಯೊಂದು ಬಡುಕಟ್ಟಿಗೂ ತನ್ನದೆಯಾದ ವಿಶಿಷ್ಟ ಸಂಸ್ಕೃತಿ, ಪರಂಪರೆಗಳು ಇರುತ್ತವೆ. ಪ್ರಾದೇಶಿಕವಾಗಿ ವೈವಿಧ್ಯತೆ ಇರುವಂತೆ ಪ್ರತಿಯೊಂದು ಬುಡುಕಟ್ಟುಗಳಲ್ಲಿ ಆಹಾರ, ಆಚಾರ–ವಿಚಾರ, ಉಡುಗೆ–ತೊಡುಗೆ, ನಂಬಿಕೆ–ನಿಷೇಧ, ರೂಢಿ ಪದ್ಧತಿಗಳಲ್ಲೂ ವಿವಿಧತೆ ಕಂಡುಬರುತ್ತದೆ. ಆಧುನಿಕತೆಯ ಪ್ರಭಾವದಿಂದ ಬುಡಕಟ್ಟು ಸಮುದಾಯಗಳ ಬದುಕಿನಲ್ಲಿ ವಿಶಿಷ್ಟ ಬದಲಾವಣೆಗಳಾಗಿವೆ. ಹೀಗಾಗಿ ಆ ಸಮುದಾಯಗಳಲ್ಲಿರುವ ಕಲೆ, ಸಾಹಿತ್ಯ, ಸಾಂಸ್ಕೃತಿಕ ಸಂಗತಿಗಳು ಕಣ್ಮರೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ನಡುವೆಯೂ ಕಾಡಿನ ಸಂಸ್ಕೃತಿ ಮತ್ತು ನಾಡಿನ ಸಂಸ್ಕೃತಿಗಳನ್ನು ಸಮನ್ವಯಗೊಳಿಸಿಕೊಂಡೂ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬರುತ್ತಿರುವ ಅನೇಕ ಬುಡಕಟ್ಟುಗಳಲ್ಲಿ ಕಾಡುಗೊಲ್ಲ ಸಮುದಾಯವೂ ಒಂದಾಗಿದೆ. ಕಾಡುಗೊಲ್ಲ ಸಮುದಾಯಗಳಲ್ಲಿ ಕೆಲವು ಪ್ರತ್ಯೇಕ ಪಂಗಡಗಳಿವೆ. ಪ್ರತಿ ಬೆಡಗುಗಳಲ್ಲೂ ಜಾರಿಯಲ್ಲಿರುವ ವಿಶಿಷ್ಟ ಆಚರಣೆಗಳ ಜೊತೆಗೆ ಮೌಖಿಕ ಸಾಹಿತ್ಯವೂ ಅಪಾರ ಪ್ರಮಾಣದಲ್ಲಿದೆ. ಅದನ್ನು ಸಂಗ್ರಹಿಸುವ, ವಿಶ್ಲೇಷಿಸುವ ಪ್ರಯತ್ನಗಳು ಈವರೆಗೂ ನಡೆದೇ ಇವೆ. ಅಂಥ ಪ್ರಯತ್ನಗಳಲ್ಲಿ ಎಂ.ಬಿ. ಶ್ವೇತಾ ಮತ್ತು ಎನ್. ಮೋಹನಕುಮಾರ್ ಅವರು ಸಂಗ್ರಹಿಸಿದ **'ಕಾಡುಗೊಲ್ಲರ ಬೆಡಗಿನ ಪದಗಳು'** ಗಮನಾರ್ಹವಾದವಾಗಿವೆ. ಸುದೀರ್ಘ ಪ್ರಸ್ತಾವನೆಯಲ್ಲಿ ಕಾಡುಗೊಲ್ಲ ಸಮುದಾಯಗಳ ಪ್ರತ್ಯೇಕ ಪಂಗಡಗಳು, ಅವುಗಳ ನಡುವಿನ ವೈಶಿಷ್ಟ್ಯತೆ ಇತ್ಯಾದಿ ಅಂಶಗಳ ಕುರಿತು ಚರ್ಚಿಸಲಾಗಿದೆ. ಕಾಡುಗೊಲ್ಲ ಬೆಡಗಿನ ಪದಗಳು ಅಧ್ಯಯನಕ್ಕೆ ಯೋಗ್ಯವಾಗಿದ್ದು, ಉತ್ತಮ ಆಕರವಾಗಬಲ್ಲ ಕೃತಿಯನ್ನು ಸಂಪಾದಿಸಿಕೊಟ್ಟ ಎಂ.ಬಿ. ಶ್ವೇತಾ ಮತ್ತು ಶ್ರೀ ಎನ್. ಮೋಹನಕುಮಾರ್ ಅವರು ಅಭಿನಂದನಾರ್ಹರು.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯ ನೂತನವಾದ ಜನಪದ ಸಂಸ್ಕೃತಿಯನ್ನು ಪುನರ್ ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು, ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯ ಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು, ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ – ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟ ಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಕರ್ನಾಟಕದಲ್ಲಿ ಕಂಡುಬರುವ ಬುಡಕಟ್ಟು ಸಮುದಾಯಗಳಲ್ಲೆಲ್ಲ ಕಾಡುಗೊಲ್ಲರದ್ದು ವಿಶಿಷ್ಟ ಪರಂಪರೆ. ಇತರ ಬುಡಕಟ್ಟಿನವರಿಗೂ ಕಾಡುಗೊಲ್ಲರಿಗೂ ಇರುವ ವ್ಯತ್ಯಾಸಗಳನ್ನು ಅಲ್ಲದೆ ಅವರಲ್ಲಿ ಇಂದಿಗೂ ಉಳಿದುಕೊಂಡು ಬಂದಿರುವ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಈ ಪದಗಳಲ್ಲಿ ಕಾಣಬಹುದಾಗಿದೆ. ಅವರ ಬೆಡಗುಗಳು ಅಧ್ಯಯನಯೋಗ್ಯವಾಗಿವೆ. ಈ ಕೃತಿಯಲ್ಲಿನ ಪದಗಳು ಕಾಡುಗೊಲ್ಲರ ಸಮಸ್ತ ಬದುಕಿನ ಸುತ್ತ ಕೇಂದ್ರೀಕರಿಸುವುದು ವಿಶೇಷ. ಸಾಹಿತ್ಯವನ್ನು ಕಾಡುಗೊಲ್ಲ ಕಲಾವಿದರಿಂದಲೇ ಸಂಗ್ರಹಿಸಿರುವುದರಿಂದ ತಿಳಿದುಕೊಳ್ಳಲು ಸಹಾಯಕವಾಗಿದೆ. ಸಮುದಾಯದ ಒಳಗಿರುವ ಹಲವಾರು ಸಾಂಸ್ಕೃತಿಕ ಆಯಾಮಗಳನ್ನು ಕಾಡುಗೊಲ್ಲ ಪರಂಪರೆಯಲ್ಲಿರುವ ಸಾಂಸ್ಕೃತಿಕ ವೀರರ ಕುರಿತಂತೆಯೂ, ಅವರು ಕಟ್ಟಿಕೊಂಡಿರುವ ಕಟ್ಟೆಮನೆಗಳ ಕುರಿತಂತೆಯೂ, ಗುಡಿಕಟ್ಟುಗಳ ನೆಲೆಗಳ ಬಗೆಗೂ ಮಾಹಿತಿ ನೀಡಬಲ್ಲ ಅಪರೂಪದ ಕೃತಿ ಇದಾಗಿದೆ. ಕೃತಿಗೆ ಬರೆಯಲಾದ ದೀರ್ಘವಾದ ಪ್ರಸ್ತಾವನೆಯು ಕಾಡುಗೊಲ್ಲ ಬೆಡಗುಗಳ ಕುರಿತ ಹಲವು ಮೌಲಿಕ ಅಂಶಗಳನ್ನು ತೆರೆದಿಟ್ಟಿದೆ. ಒಟ್ಟಿನಲ್ಲಿ ಈ ಕೃತಿ ಕಾಡುಗೊಲ್ಲ ಸಮುದಾಯದ ಜೀವನ ಕ್ರಮವನ್ನು ಕನ್ನಡಿಸಿದೆ. ಅತ್ಯಂತ ಶ್ರದ್ಧೆ ಹಾಗೂ ಶ್ರಮದಿಂದ ಕೃತಿಯನ್ನು ರಚಿಸಿ ಕೊಟ್ಟಿರುವ ಶ್ವೇತಾ. ಎಂ.ಬಿ. ಹಾಗೂ ಮೋಹನ್ ಕುಮಾರ್ ಎನ್. ಅವರುಗಳು ಅಭಿನಂದನಾರ್ಹರು.

ಪ್ರೊ. ಸ.ಚಿ. ರಮೇಶ

ನಿರ್ದೇಶಕ

ಪರಿವಿಡಿ

ಕೈ ಎರಡು ಜೋಡುಸೆ

ಬುಡಕಟ್ಟು ಸಮುದಾಯಗಳ ಕುರಿತಾದಂಥ ಅಧ್ಯಯನವು ಸಮಾಜ ಹಾಗೂ ಸಂಸ್ಕೃತಿ ಎರಡೂ ನೆಲೆಗಳಿಂದ ಏಕಕಾಲದಲ್ಲಿ ಮುಖ್ಯವೆನಿಸುತ್ತದೆ. ಜಾನಪದೀಯ ದೃಷ್ಟಿಕೋನದಿಂದ ಬುಡಕಟ್ಟು ಅಧ್ಯಯನವನ್ನು ಕೈಗೊಳ್ಳುವ ಸಂದರ್ಭದಲ್ಲಿ ಸಂಸ್ಕೃತಿ ಹಾಗೂ ಸಮಾಜಗಳೆರಡನ್ನೂ ಮಾನ್ಯ ಮಾಡಿಯೇ ಮುಂದುವರೆಯಬೇಕಾಗುತ್ತದೆ. ಕಾಡುಗೊಲ್ಲರು ಕರ್ನಾಟಕದ ಒಂದು ಪ್ರಮುಖ ಬುಡಕಟ್ಟು ಸಮುದಾಯ. ಈ ಸಮುದಾಯದ ಜನರ ಕ್ರಿಯಾತ್ಮಕತೆ ಮಹತ್ತರವಾದುದು. ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಈ ಸಮುದಾಯದ ಕುರಿತಂತೆ ಮಾಹಿತಿಗಳನ್ನು ಸಂಗ್ರಹಿಸುವ ಸಂದರ್ಭದಲ್ಲಿ ಈ ಗೀತ ಸಾಹಿತ್ಯವು ನಮಗೆ ದೊರೆತಿದೆ. ಮಾರನವರ ಗೊಲ್ಲರು ಮತ್ತು ಕರಡಿ ಗೊಲ್ಲರ ಬೆಡಗುಗಳ ಕುರಿತಂತೆ ಇರುವ ಸಂಬಂಧವನ್ನು ನಿರೂಪಿಸುವ ಕಾವ್ಯವು ನಮ್ಮ ಕೈಗೆ ದೊರೆತಿರುವುದು ಈ ಕೃತಿಯನ್ನು ಹೊರತರುವುದರ ಹಿಂದಿನ ಮೂಲ ಪ್ರೇರಣೆ. ಬೆಡಗುಗಳ ಕುರಿತಂತೆ ಬಹಳ ಅಪರೂಪದ ಸಂಗ್ರಹ ಇದಾಗಿದೆ. ಮರೆವಿನ ಹುಳು ಕಲಾವಿದರ ನೆನಪಿನ ಪುಟಗಳನ್ನು ತಿಂದು ಹಾನಿಗೊಳಿಸುವ ಮೊದಲೇ ಸಂಗ್ರಹಣೆ ಕಾರ್ಯನಡೆಯಬೇಕಾಗಿದೆ. ಆ ನಿಟ್ಟಿನಲ್ಲಿ ಈ ನಮ್ಮ ಕೃತಿ ಮುಖ್ಯವಾದುದೆಂದು ನಮ್ಮ ಅಭಿಪ್ರಾಯ. ಈ ಗೀತಸಾಹಿತ್ಯವನ್ನು ಕಲಿಕೆಯ ಉದ್ದೇಶದಿಂದ ಧ್ವನಿಮುದ್ರಿಸಿಕೊಂಡಿದ್ದೇವೆ. ನಮ್ಮ ಅಧ್ಯಯನದ ಮಿತಿಗಳನ್ನು ತಿಳಿದಿದ್ದೂ, ಹೊಸ ಪೀಳಿಗೆಯ ಸಂಶೋಧಕರನ್ನು ಬೆಳೆಸುವ ನಿಟ್ಟಿನಲ್ಲಿ ಈ ಕಿರು ಹೊತ್ತಗೆಯನ್ನು ವಿಶ್ವವಿದ್ಯಾಲಯದಿಂದ ಹೊರತರಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ಅಭಾರಿಯಾಗಿದ್ದೇವೆ. ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ ಹಾಗೂ ವಿಶ್ವವಿದ್ಯಾಲಯದ ಪ್ರಥಮ ಕುಲಸಚಿವರಾಗಿ ಕಾರ್ಯನಿರ್ವಹಿಸಿದ ಪ್ರೊ. ಸಿ.ಎ. ಸೋಮಶೇಖರಪ್ಪ ಅವರಿಗೂ ಕೃತಜ್ಞರಾಗಿದ್ದೇವೆ. ಹಾಗೆಯೇ ವಿಶ್ವವಿದ್ಯಾಲಯಕ್ಕೆ ಕಾಲಿಟ್ಟಲ್ಲಿಂದಲೂ ಮನೆಯ ಹಿರಿಯರು ತಮ್ಮ ಮಕ್ಕಳನ್ನು ಎಚ್ಚರಿಸುವಂತೆ ಎಚ್ಚರಿಸಿ, ತಿದ್ದಿ ನಮ್ಮನ್ನು ಹೆಚ್ಚು ಜವಾಬ್ದಾರಿಯುತರನ್ನಾಗಿ ಮಾಡಿದ ಹಾಗೂ ಈ ಕೃತಿಯನ್ನು ರೂಪುಗೊಳಿಸುವಂತೆ ಸಲಹೆ ನೀಡಿದ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವರಾದ ಪ್ರೊ. ಸ.ಚಿ. ರಮೇಶ್ ಅವರಿಗೆ ಹಾಗೂ ವಿಶ್ವವಿದ್ಯಾಲಯದ ಹಿರಿಯ ಸಂಶೋಧನಾಧಿಕಾರಿಗಳಾಗಿರುವ ಡಾ. ಕೆ. ಪ್ರೇಮಕುಮಾರ ಅವರಿಗೂ ಕೃತಜ್ಞತೆಗಳು. ಬರವಣಿಗೆಯ ಸಂದರ್ಭದಲ್ಲಿ ಮಾರ್ಗದರ್ಶನ ನೀಡಿದ ಡಾ.ಟಿ. ಗೋವಿಂದರಾಜು ಅವರಿಗೆ ಋಣಿಯಾಗಿದ್ದೇವೆ. ಹಾಗೆಯೇ ಬರೆಯುವಂತೆ ಪ್ರೋತ್ಸಾಹಿಸಿದ ಡಾ. ಶಾಂತಿನಾಯಕ ಅವರಿಗೂ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಅವರಿಗೂ ಕೃತಜ್ಞರಾಗಿದ್ದೇವೆ. ಸಾಹಿತ್ಯ ಸಂಗ್ರಹ ಹಾಗೂ ಬರವಣಿಗೆಗೆ ಅಗತ್ಯವಿದ್ದ ಮಾಹಿತಿಗಳನ್ನು ನೀಡಿದ ವಕ್ತೃಗಳಾದ ಶ್ರೀಮತಿ ಕೆಂಗಮ್ಮ, ಶ್ರೀಮತಿ ಚಿತ್ತಮ್ಮ, ಶ್ರೀಮತಿ ದೊಡ್ಡಮ್ಮ, ಶ್ರೀ ನಾಗಪ್ಪ ಪಿ., ಶ್ರೀ ಚಿತ್ತಯ್ಯ, ಶ್ರೀ ಶಿವಣ್ಣ ಪಿ.ಸಿ. ಹಾಗೂ ಗೌಡ ಚಿಕ್ಕಣ್ಣ ಇವರುಗಳಿಗೂ ಕೃತಜ್ಞರಾಗಿದ್ದೇವೆ.

– ಶ್ವೇತಾ ಎಂ.ಬಿ
– ಮೋಹನ್ ಕುಮಾರ್ ಎನ್.

ಪ್ರಸ್ತಾವನೆ

ಕರ್ನಾಟಕದಲ್ಲಿ ಜನಪದ ಸಾಹಿತ್ಯ ಸಂಗ್ರಹ ಕಾರ್ಯ ಬಹಳ ಹಿಂದಿನಿಂದಲೇ ಆರಂಭವಾಗಿರುವುದು ನಮಗೆ ತಿಳಿದು ಬರುತ್ತದೆ. ಇಂಗ್ಲೆಂಡಿನ ವಸಾಹತಿಕರಣಕ್ಕೆ ಭಾರತ ಒಳಗಾದ ಸಂದರ್ಭದಲ್ಲಿಯೇ ಜಾನಪದ ಅಧ್ಯಯನಕ್ಕೆ ಕರ್ನಾಟಕದಲ್ಲಿ ಚಾಲನೆ ದೊರಕಿತು. ಮೆಕಂಜಿ, ಅಬ್ಬೆಡುಬಾಯ್, ಲೇಡನ್, ಮೋಗ್ಲಿಂಗ್, ಮೇರಿಪ್ರೆರೆ, ಗೋವರ್, ಕಿಟೆಲ್, ಫ್ಲೀಟ್, ಮ್ಯಾನರ್, ಬರ್ನೆಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರುಗಳು ಇಲ್ಲಿ ಆರಂಭದ ಅಧ್ಯಯನಗಳನ್ನು ಕೈಗೊಂಡರು. ಪಾಶ್ಚಾತ್ಯರ ಅಧ್ಯಯನ ಕ್ರಮವು ಹಲವು ದೇಶೀ ಚಿಂತಕರುಗಳಲ್ಲೂ ಜನಪದ ಸಾಹಿತ್ಯ ಸಂಗ್ರಹದ ಕುರಿತಾದಂಥ ಆಸಕ್ತಿಯನ್ನು ಕೆರಳಿಸಿತು. ಇಂದು ನಾವು ಜಾನಪದ ಅಧ್ಯಯನದ ಚರಿತ್ರೆಯನ್ನು ಗಮನಿಸಿದರೆ, ಸುದೀರ್ಘವಾದ ದಾರಿಯೊಂದನ್ನು ಕಾಣಬಹುದಾಗಿದೆ. ಅದರಲ್ಲೂ ಕರ್ನಾಟಕದ ಬುಡಕಟ್ಟು ಸಮುದಾಯಗಳು ವಿದ್ವಾಂಸರುಗಳನ್ನು ಬಹುವಾಗಿ ಆಕರ್ಷಿಸಿವೆ. ಇಲ್ಲಿಯ ಬುಡುಕಟ್ಟುಗಳ ಕುರಿತಂತೆ ಈವರೆಗೆ ಹಲವಾರು ಜ್ಞಾನ ಶಿಸ್ತುಗಳ ಹಿನ್ನೆಲೆಯಿಂದ ಅಧ್ಯಯನಗಳನ್ನು ಕೈಗೊಳ್ಳಲಾಗಿದೆ. ಸೋಲಿಗ ಸಂಸ್ಕೃತಿ, ಕಾಡುಗೊಲ್ಲರು, ಮ್ಯಾಸಬೇಡರು, ಗೊಂಡರ ಸಮುದಾಯಗಳಿಗೆ ಸಂಬಂಧಿಸಿದಂತೆ ಹಲವು ಮಹತ್ವದ ಅಧ್ಯಯನಗಳು ನಡೆದಿವೆ. ಕಾಡುಗೊಲ್ಲರು ಕರ್ನಾಟಕದ ಒಂದು ಮುಖ್ಯವಾದ ಬುಡಕಟ್ಟು ಸಮುದಾಯ. ಇವರನ್ನು ಕುರಿತಂತೆ ಹಲವಾರು ದೇಶಿ ಹಾಗೂ ವಿದೇಶಿ ಸಂಶೋಧಕರು, ಸಮಾಜಶಾಸ್ತ್ರಜ್ಞರು, ಮಾನವಶಾಸ್ತ್ರಜ್ಞರು ಅಧ್ಯಯನಗಳನ್ನು ನಡೆಸಿದ್ದಾರೆ. ಎಎಡಿ ಲೂಯಿಸ್ ಅವರು ತಮ್ಮ ಕೃತಿ 'ದಿ ಟ್ರೈಬ್ಸ್ ಆಫ್ ಮೈಸೂರು' ನಲ್ಲಿ ಕಾಡುಗೊಲ್ಲರ ಕುರಿತಂತೆ ಉಲ್ಲೇಖಿಸಿದ್ದಾರೆ. ಪ್ರೊ. ತೀ. ನಂ ಶಂಕರನಾರಾಯಣ ಅವರು 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ಕಾಡುಗೊಲ್ಲರ ಕುರಿತಾದ ಪಿಎಚ್.ಡಿ ಮಹಾಪ್ರಬಂಧದಲ್ಲಿ ಕಾಡುಗೊಲ್ಲರ ಕುರಿತಂತೆ ಸಮಗ್ರ ಅಧ್ಯಯನವನ್ನು ನಡೆಸುವ ಪ್ರಯತ್ನವನ್ನು ಮಾಡಿದ್ದಾರೆ. ಕಾಳೇಗೌಡ ನಾಗವಾರ ಅವರು 'ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ' ಎಂಬ ವಿಷಯದ ಕುರಿತು ಪಿಎಚ್.ಡಿ ಸಂಶೋಧನೆ ನಡೆಸಿದ್ದಾರೆ. ಮೀರಸಾಬಿಹಳ್ಳಿ ಶಿವಣ್ಣ ಅವರ 'ಕಾಡುಗೊಲ್ಲರ ಬುಡಕಟ್ಟು ವೀರರು' ಎಂಬ ಕೃತಿಯೂ ಕಾಡುಗೊಲ್ಲರ ಪರಂಪರೆಯ ಕುರಿತು ಮುಖ್ಯ ಆಕರ ಗ್ರಂಥವಾಗಿದೆ. ಪ್ರೊ. ಅಂಬಳಿಕೆ ಹಿರಿಯಣ್ಣನವರ 'ಕಾಡುಗೊಲ್ಲರ ಜನಪದ ಗೀತೆಗಳು' ಈ ನಿಟ್ಟಿನಲ್ಲಿ ಗಮನಿಸಬೇಕಾದ ಕೃತಿ. ಈ ಬಗೆಯ ಹಲವಾರು ಅಧ್ಯಯನಗಳು ಕಾಡುಗೊಲ್ಲರ ಕುರಿತಂತೆ ನಡೆದಿವೆಯಾದರೂ, ಅನೇಕ ಅಧ್ಯಯನಯೋಗ್ಯ ಅಂಶಗಳು ಇನ್ನೂ ಈ ಸಮುದಾಯದೊಳಗೆ ಸೇರಿಕೊಂಡಿರುವುದನ್ನು ನಾವು ಕಾಣುತ್ತೇವೆ. ಕಾಡುಗೊಲ್ಲರು ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ಹೇರಳವಾಗಿ ಕಂಡುಬರುತ್ತಾರೆ. ಉಳಿದಂತೆ ಬೆಂಗಳೂರು, ರಾಮನಗರ, ಹಾಸನ, ದಾವಣಗೆರೆ, ಬಳ್ಳಾರಿ, ಸುತ್ತಮುತ್ತಲ ಪ್ರದೇಶಗಳಲ್ಲೂ ಅಲ್ಲಲ್ಲಿ ಕಂಡು ಬರುತ್ತಾರೆ. ತಮ್ಮದೆ ಆದ ನೆಲೆಗಳನ್ನು ರೂಪಿಸಿಕೊಂಡು ಬದುಕುವ ಸಮುದಾಯವಿದು. ಇವರು ಸಣ್ಣ ಸಣ್ಣ ಹಟ್ಟಿಗಳನ್ನು ಕಟ್ಟಿಕೊಂಡು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಾರೆ. ತಮ್ಮದೇ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಂಡು ಬಾಳುವ ಕೆಲವೇ ಸಮುದಾಯಗಳಲ್ಲಿ ಕಾಡುಗೊಲ್ಲರದ್ದೂ ಒಂದು. 'ಕಾಡು–ಗೊಲ್ಲ' ಪದದ ನಿಷ್ಪತ್ತಿ ಬಗ್ಗೆ ಗಮನಿಸುವಾಗ 'ಕಾಡು' ಎಂದರೆ 'ಅರಣ್ಯ' (Forest) ಎಂದೂ, 'ಗೊಲ್ಲ' ಎಂದರೆ ಗೋವುಗಳನ್ನು ಕಾಯುವವನು ಎಂದೂ ಅರ್ಥ ಬರುತ್ತದೆ. ಅರಣ್ಯ–ಬೆಟ್ಟಗಳಲ್ಲಿ ಹಟ್ಟಿಗಳನ್ನು ಕಟ್ಟಿ ಬದುಕುವ ಇವರಿಗೆ ಪಶುಪಾಲನೆಯೇ ಮುಖ್ಯ ವೃತ್ತಿ. ಗೋವುಗಳನ್ನು ಸಾಕಿ ಅವುಗಳಿಂದ ಬಂದ ಉತ್ಪನ್ನಗಳನ್ನು ಮಾರಿ ಬದುಕು ಹೊರೆಯುವ ಸಮುದಾಯವಾಗಿ ಕಾಡುಗೊಲ್ಲರು ಕಂಡು ಬರುತ್ತಾರೆ. ಕುರಿಸಾಕಾಣಿಕೆಯಲ್ಲಿಯೂ ಇವರು ನಿಪುಣರಾಗಿದ್ದು, ಮಳೆಗಾಲದಲ್ಲಿ ಕೃಷಿಯನ್ನು ಅವಲಂಬಿಸುತ್ತಾರೆ. ಇವರಲ್ಲಿ 'ಪಡುವ ಹೋಗುವ' ಪದ್ಧತಿಯಿದೆ. ಇದರರ್ಥ ವಲಸೆ ಹೋಗುವುದು ಎಂಬುದಾಗಿದೆ. ಬೇಸಿಗೆಯಲ್ಲಿ ಇವರು ಕುರಿಗಳನ್ನು ಹೊಡೆದುಕೊಂಡು ವಲಸೆ ಹೋಗುತ್ತಾರೆ. ಜಮೀನು ತೋಟಗಳಿರುವವರ ಜಾಗದಲ್ಲಿ ಮಂದೆ ಹಾಕುವುದರಿಂದ ದಿನನಿತ್ಯದ ಊಟ, ಸಾಂಬಾರು ಪದಾರ್ಥಗಳು ತೋಟದ ಮಾಲಿಕರಿಂದಲೇ ದೊರೆಯುತ್ತದೆ. ಹಾಗಾಗಿ ಅಲೆಮಾರಿಗಳಾಗಿಯು ಕಾಡುಗೊಲ್ಲರು ಕಂಡುಬರುತ್ತಾರೆ. ಇವರ ಆಡು ಭಾಷೆ ಕನ್ನಡ. ಪಶುಪಾಲನೆಗೆ ತುಮಕೂರು ಹಾಗೂ ಚಿತ್ರದುರ್ಗ ಪ್ರಶಸ್ತವಾದ ಸ್ಥಳವಾದ್ದರಿಂದ ಕಾಡುಗೊಲ್ಲರು ಈ ಜಿಲ್ಲೆಗಳಲ್ಲಿ ಪ್ರಧಾನವಾಗಿ ನೆಲೆಯಾಗಿರುವುದು ಕಂಡುಬರುತ್ತದೆ.

ಕರ್ನಾಟಕದ ಕಾಡುಗೊಲ್ಲ ಸಮುದಾಯದ ಕುರಿತಂತೆ ಒಂದು ಚರಿತ್ರೆಯನ್ನು ಜನಪದರು ತಮ್ಮ ಮೌಖಿಕ ಸಾಹಿತ್ಯದ ಮುಖಾಂತರ ಕಟ್ಟಿಕೊಟ್ಟಿದ್ದಾರೆ. ಕಾಡುಗೊಲ್ಲ ಮೂಲಪುರುಷರಾದ ಚಿತ್ತಮುತ್ತಿ ಮತ್ತು ಚಂದಮುತ್ತಿ ಎಂಬುವರು ದೆಹಲಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪಶುಪಾಲನೆಯನ್ನು ಮಾಡುತ್ತಿದ್ದರು. ಇವರ ಹೆಣ್ಣುಮಕ್ಕಳು

ಡೆಲ್ಲಿ ಕೋಟೆಯ ಒಳಗೆ ಹಾಲು ಮೊಸರು ಮಾರಲು ಹೋಗುತ್ತಿದ್ದರು. ಇವರು ನೋಡಲು ತುಂಬಾ ಸುಂದರಿಯರಾಗಿದ್ದ ಕಾರಣ ದೆಹಲಿಯ ನವಾಬನು ಇವರಿಗೆ ಮನಸೋತು ಚಿತ್ತಮುತ್ತಿ– ಚಂದಮುತ್ತಿಯರಲ್ಲಿಗೆ ಬಂದು ಅವರ ಹೆಣ್ಣುಮಕ್ಕಳನ್ನು ತನಗೆ ಮದುವೆ ಮಾಡಿಕೊಡುವಂತೆ ಕೇಳುತ್ತಾನೆ. ಚಿತ್ತಮುತ್ತಿ–ಚಂದಮುತ್ತಿ ಇದಕ್ಕೆ ಒಪ್ಪದೆ, ತುರುಕ(ಮುಸ್ಲಿಂ)ರಿಗೆ ನಮ್ಮ ಮಕ್ಕಳನ್ನು ಕೊಟ್ಟು ಹಾಲಿನಂತ ನಮ್ಮ ಕುಲವನ್ನು ಹಾಳು ಮಾಡಿಕೊಳ್ಳಬಾರದೆಂದು ಯೋಚಿಸಿ ದಕ್ಷಿಣಕ್ಕೆ ವಲಸೆ ಬಂದರು ಎಂಬುದು ಈ ಸಮುದಾಯದ ಕುರಿತಾದ ನಂಬಿಕೆ. ಹೀಗೆ ಹಲವಾರು ಮೂಲಗಳು ಕಾಡುಗೊಲ್ಲರು ಮೂಲತ: ಉತ್ತರ ಭಾರತದಿಂದ ವಲಸೆ ಬಂದ ಸಮುದಾಯವೆಂದು ಮಾಹಿತಿಯನ್ನು ನೀಡುತ್ತವೆ. ಅದರಲ್ಲೂ ಸಾಹಿತ್ಯಿಕ ಮೂಲಗಳೂ ಇಂಥ ಆಧಾರಗಳನ್ನು ಒದಗಿಸಿರುವದು ಇಲ್ಲಿ ಪ್ರಮುಖ ಅಂಶ. ಆದರೆ ಕಾಡುಗೊಲ್ಲರ ಮೂಲ ನೆಲೆ ಕುರಿತಂತೆ ಬಹಳಷ್ಟು ಭಿನ್ನಾಭಿಪ್ರಾಯಗಳು ಇವೆ. ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಅವರ 'ಗೊಲ್ಲರ ಇತಿಹಾಸ ಕಥನ'ವು ಈ ಕುರಿತಂತೆ ಹಲವು ಮಹತ್ವದ ಚರ್ಚೆಗಳನ್ನು ಮುಂದಿರಿಸಿದೆ. ಕಾಡುಗೊಲ್ಲರು ಮೂಲತ: ಕರ್ನಾಟಕದವರೇ ಎಂಬುದು ಇವರ ಅಭಿಮತ. ಹಳೆಗನ್ನಡ ಕವಿಗಳಾದ ಶಿವಕೋಟ್ಯಾಚಾರ್ಯ, ಪಂಪ, ಪೊನ್ನ, ನಯಸೇನ, ಶಾಂತಿನಾಥ, ರುದ್ರಭಟ್ಟ, ಬ್ರಹ್ಮಶಿವ, ನೇಮಿಚಂದ್ರ, ಮೊದಲಾದವರ ರಚನೆಗಳಲ್ಲಿ ದೊರೆತಿರುವ ಮಾಹಿತಿಯನ್ನು ಇಟ್ಟುಕೊಂಡು ಕಾಡುಗೊಲ್ಲರು ಮೂಲತಃ ಕರ್ನಾಟಕದವರೇ ಎಂಬ ತಮ್ಮ ವಾದವನ್ನು ಸ್ಪಷ್ಟೀಕರಿಸಿದ್ದಾರೆ. ಇದನ್ನು ಗಮನಿಸಿದಾಗ ಉತ್ತರ ಭಾರತದಿಂದ ಕಾಡುಗೊಲ್ಲರು ದಕ್ಷಿಣಕ್ಕೆ ವಲಸೆ ಬಂದಿದ್ದರೂ ಆ ಮೊದಲೇ ಕರ್ನಾಟಕದಲ್ಲಿ ಗೊಲ್ಲ ಸಮುದಾಯವಿತ್ತು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

"ಹೊತ್ತು ಅಳೆಯಂ ಬೀದಿಯಲಿ ಮಾ
ರುತ್ತ ಕಾಟಕನೆಂಬವಳು ನಡೆ
ವುತ್ತ ಕೊಗ್ಗೆಸರಲ್ಲಿ ಕಾಲ್ಗಳು ಜಾರಿ ನಡುನಡುಗಿ"

"ಭೀಮಕವಿ ತನ್ನ ಬಸವಪುರಾಣದಲ್ಲಿ ಗೊಲ್ಲತಿಯ ಪವಾಡಕ್ಕೆ ೫೭ ಪದ್ಯಗಳ ಒಂದು ಸಂಧಿಯನ್ನೇ ಮೀಸಲಿಟ್ಟಿದ್ದಾನೆ. ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ಗೊಲ್ಲತಿಯ ಹೆಸರು ಕಾಟಕ ಎಂಬುವುದು ಈ ಬುಡಕಟ್ಟಿನ ಸಾಂಪ್ರದಾಯಿಕ ಹೆಸರಾದ ಕಾಟಕ್ಕ, ಕಾಟಮ್ಮ, ಕಾಟವ್ವ ಆಗಿರುವುದಾಗಿದೆ. ಕಾಟಣ್ಣ (ಕಾಟಮಲಿಂಗ) ಚಿತ್ತಯ್ಯ (ಚಿತ್ರಲಿಂಗ)ನ ಅಣ್ಣ, ಯೋಗಿಪುರುಷ. ಕಾಡುಗೊಲ್ಲರ ಚಂದಮುತ್ತಿಕುಲದ ಸನ್ನೋರ ಬೆಡಗಿನ ಮನೆದೇವರು ಎಂಬಂಶವನ್ನು ಗಮನಿಸಬೇಕಾಗಿದೆ."[೧] ಇಂಥ ಹಲವು ಅಂಶಗಳು ಕಾಡುಗೊಲ್ಲರು ಮೊದಲಿನಿಂದಲೂ ಕರ್ನಾಟಕದಲ್ಲಿಯೇ ಇದ್ದವರು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತವೆ.

ಈ ಸಮುದಾಯದಲ್ಲಿ ಪ್ರಚಲಿತವಿರುವ 'ಜುಂಜಪ್ಪನ ಕಾವ್ಯ' ಜಗತ್ತಿನ ಮಹಾಕಾವ್ಯ ಪರಂಪರೆಗೆ ಸೇರಿಕೊಂಡಿರುವ ಒಂದು ಮುಖ್ಯವಾದ ರಚನೆ. ಮಾತ್ರವಲ್ಲ ಇವರಲ್ಲಿ ಹುಟ್ಟಿನಿಂದ ಹಿಡಿದು, ನಾಮಕರಣ, ಋತುಮತಿಯಾಗುವುದು, ಮದುವೆ, ಸೀಮಂತ, ಸಾವು ಹೀಗೆ ಬದುಕಿನ ಪ್ರತೀ ಘಟ್ಟಕ್ಕೂ, ಅನುಗುಣವಾಗಿ ಸಾಹಿತ್ಯ ರಚನೆಗೊಂಡಿರುವುದು ಈ ಜನರ ಪ್ರತಿಭಾಶಕ್ತಿಗೆ ಉತ್ತಮ ಉದಾಹರಣೆ. ಸಾಂಸ್ಕೃತಿಕವಾಗಿ ಶ್ರೀಮಂತಿಕೆಯಿಂದ ಕೂಡಿದ ಕಾಡುಗೊಲ್ಲ ಸಮುದಾಯದ ಜನರು, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ತೀರಾ ಹಿಂದುಳಿದಿರುವುದು ಇವರ ಪಾಲಿನ ದುರಂತ. ಅನಕ್ಷರತೆ, ಬಡತನ, ಮಾತ್ರವಲ್ಲ ಇವರು ರೂಢಿಸಿಕೊಂಡು ಬಂದಿರುವ ಸಮುದಾಯದೊಳಗಿನ ಕಟ್ಟು ಪಾಡುಗಳು, ಸಮಾಜಮುಖಿ ಬೆಳವಣಿಗೆಗಳಿಂದ ಇವರನ್ನು ದೂರವುಳಿಸಿವೆ. ಬುಡಕಟ್ಟು ಸಮುದಾಯದವೊಂದರ ಎಲ್ಲಾ ಲಕ್ಷಣಗಳನ್ನು ಹೊಂದಿರುವ ಕಾಡುಗೊಲ್ಲರು ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿರುವುದು ಇವರ ಮೂಲಭೂತ ಬೆಳವಣಿಗೆ ಕುಂಠಿತವಾಗುವುದಕ್ಕೆ ಮುಖ್ಯ ಕಾರಣ. ಈ ಸಮುದಾಯವು ಶೈಕ್ಷಣಿಕ ಪ್ರಗತಿಯನ್ನು ಸಾಧಿಸಲು ಬೇಕಾದ ಪ್ರೋತ್ಸಾಹವನ್ನು ಒದಗಿಸುವದರಲ್ಲಿ ಸರ್ಕಾರವೂ ಹಿಂದುಳಿದಿರುವುದನ್ನು ಗಮನಿಸಬೇಕಾಗಿದೆ.

ಕೋಲಾಟ ಕಾಡುಗೊಲ್ಲರಲ್ಲಿ ಕಾಣುವ ಮುಖ್ಯವಾದ ಪ್ರದರ್ಶನಾತ್ಮಕ ಕಲೆ. ಇವರ ಹಬ್ಬ, ಜಾತ್ರೆ, ಮದುವೆ, ದೇವರ ಉತ್ಸವಗಳಲ್ಲಿ ಕೋಲಾಟ ಇದ್ದೇ ಇರುತ್ತದೆ. ವಿಶೇಷವೆಂದರೆ, ಇವರು ತಂಡಗಳನ್ನು ಕಟ್ಟಿ ಕೋಲಾಟವಾಡುತ್ತಾರೆ. ಆದರೆ ತಂಡದಲ್ಲಿ ಮಕ್ಕಳು–ನೆಂಟರಾದಿಯಾಗಿ ಹಟ್ಟಿಯವರೆಲ್ಲರೂ ಕಲೆತು, ಇಡೀ ರಾತ್ರಿ ಅವರೊಂದು ಸುತ್ತು ಇವರೊಂದು ಸುತ್ತು ಕೋಲಾಡುತ್ತಾರೆ. ಸಂಬಂಧಗಳ ನಡುವಿನ ಆತ್ಮೀಯತೆ ಇನ್ನೂ ಗಟ್ಟಿಯಾಗಿ ಬೆಳೆಯಲು ಈ ಬಗೆಯ ಬೆರೆಯುವಿಕೆಗಳು ನೆರವಾಗುತ್ತವೆ. ಗಣೆ ಊದುವ ಕಲೆ ಕಾಡುಗೊಲ್ಲರಿಗೆ ಸಿದ್ಧಿಸಿದ ಅಪರೂಪದ ವಿದ್ಯೆ. ಸುಮಾರು ಮೂರು ನಾಲ್ಕು ಅಡಿ ಉದ್ದದ ಬಿದಿರು ಕೋಲಿನಿಂದ ಮಾಡಿದ ಈ ವಾದ್ಯವನ್ನು ಬಳಸಿಕೊಂಡು ತಮ್ಮ ಜನಾಂಗದ ವೀರರನ್ನು ಕುರಿತ ಕಾವ್ಯವನ್ನು ಹಾಡುತ್ತಾರೆ. ಇತರ ಪ್ರದೇಶಗಳಿಗೆ ವಲಸೆ ಹೋದ ಸಂದರ್ಭಗಳಲ್ಲಿ ರಾತ್ರಿ ವೇಳೆ ಕುರಿಮಂದೆ ಕಾಯುವಾಗ ಅವುಗಳನ್ನು ತೋಳಗಳಿಂದ, ಕಳ್ಳರಿಂದ ಕಾಪಾಡಲು

ರಾತ್ರಿಯಿಡೀ ಇವರು ಎಚ್ಚರವಿರಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ಈ ಗೆಣೆ ಊದುವ ಕಲೆ ಇವರಿಗೆ ನೆರವಾಗುತ್ತದೆ. ಇದಲ್ಲದೆ ವರ್ಷಕ್ಕೊಮ್ಮೆ ನಾಟಕವಾಡುವುದು, ಕತೆ ಓದಿಸುವುದು, ಭಜನೆ ಮಾಡಿಸುವುದು, ಮಳೆ ಬರದೆ ಇದ್ದಾಗ ಮಳೆರಾಯನ ಕುರಿತು ಪದ ಹೇಳುತ್ತ ಊರೂರು ಸುತ್ತುವುದು, ಬಿಡುವಿನ ವೇಳೆಯಲ್ಲಿ ಕೃಷಿಗೆ ಬೇಕಾದ ಸಲಕರಣೆಗಳನ್ನು ತಾವೇ ತಯಾರಿಸಿಕೊಳ್ಳುವುದು, ಜಾನುವಾರುಗಳಿಗೆ ಔಷಧಿ ತಯಾರಿಸಿಕೊಳ್ಳುವುದು ಈ ರೀತಿಯ ಅನೇಕ ಕಾರ್ಯಗಳನ್ನು ಕಾಡುಗೊಲ್ಲರಲ್ಲಿ ಕಾಣಬಹುದು. ಈ ಆಚರಣೆ ಮತ್ತು ನಂಬಿಕೆಗಳನ್ನು ಇವರು ತಲೆಮಾರುಗಳಿಂದಲೂ ಮುಂದುವರೆಸಿಕೊಂಡು ಬಂದಿದ್ದಾರೆ. ಇವರಲ್ಲಿ ಕುಲಗೋತ್ರಗಳಿಗೆ ಸಂಬಂಧಿಸಿದಂತೆ ವಿಶೇಷವಾದ ಸ್ಥಾನವಿದೆ. ಕಾಡುಗೊಲ್ಲರಲ್ಲಿ ಮುಖ್ಯವಾಗಿ ಮೂರು ಕುಲಗಳನ್ನು ಕಾಣಬಹುದು. ಅವುಗಳೆಂದರೆ ಚಿತ್ತಮುತ್ತಿ ಕುಲ, ಚಂದಮುತ್ತಿ ಕುಲ, ಹಾಗೂ ರಾಮೇಗೌಡನ ಕುಲ. ಪ್ರತೀ ಕುಲದಲ್ಲಿಯೂ ಉಪ ವಿಭಾಗಗಳಿವೆ. ಈ ವಿಭಾಗಗಳಿಗೆ ಬೆಡಗುಗಳೆಂದು ಕರೆಯಲಾಗಿದೆ. ಪ್ರತೀ ಕುಲ ಹಾಗೂ ಬೆಡಗುಗಳಿಗೆ ಸಂಬಂಧಿಸಿದಂತೆ ಅಪಾರವಾದ ಸಾಹಿತ್ಯ ರಚನೆಗಳು ನಡೆದಿದ್ದು, ಈಗಲೂ ಅವು ಈ ಸಮುದಾಯದ ಜನರ ಬಾಯಿಯಲ್ಲಿ ಹಾಡಲ್ಪಡುತ್ತವೆ. ಕಾಡುಗೊಲ್ಲರು ಅಪಾರವಾದ ಮೌಖಿಕ ಸಾಹಿತ್ಯವನ್ನು ಸೃಷ್ಟಿಸಿರುವುದು ಕಂಡು ಬರುತ್ತದೆ.

ಚಿತ್ತಮುತ್ತಿ ಕುಲದವರಾದ ಕರಡಿಗೊಲ್ಲ ಬೆಡಗಿನ ಹುಟ್ಟಿನ ಕುರಿತಂತೆ ಸಂಗ್ರಹಿಸಿದ ಸಾಹಿತ್ಯವನ್ನು ಈ ಕೃತಿಯಲ್ಲಿ ನೀಡಲಾಗಿದೆ. ಈ ನಿರ್ದಿಷ್ಟ ಬೆಡಗಿನವರಿಗೆ 'ಕರಡಿ ಗೊಲ್ಲ'ರು ಎಂಬ ಹೆಸರು ಬರಲು ಕಾರಣವಾದ ಕಥೆಯನ್ನು ಗೀತ ಸಾಹಿತ್ಯದ ಮೂಲಕ ನೀಡಲಾಗಿದೆ. ಕರಡಿಗೊಲ್ಲ ಬೆಡಗಿನ ಅಣ್ಣತಮ್ಮಂದಿರಿಬ್ಬರು ಒಂದು ನಿರ್ದಿಷ್ಟ ಕಾರಣದಿಂದ ದೂರವಾಗಿ, ಅವರಿಂದ ಮತ್ತೆರಡು ಬೆಡಗುಗಳು ರೂಪುಗೊಂಡಿರುವುದನ್ನು ಕಾಣುತ್ತೇವೆ. ಈ ಬೆಡಗುಗಳನ್ನು 'ತಾಳಿಕಟ್ಟದ ಕರಡಿ ಗೊಲ್ಲರು', ಮತ್ತು 'ತಾಳಿಕಟ್ಟುವ (ಮದುವೆ ಸಂದರ್ಭದಲ್ಲಿ) ಕರಡಿಗೊಲ್ಲ'ರೆಂದು ಕರೆಯಲಾಗುತ್ತದೆ. ತಾಳಿ ಕಟ್ಟುವ ಕರಡಿಗೊಲ್ಲರನ್ನು 'ಮಾರನವರಗೊಲ್ಲ'ರು ಎಂದೂ ಕರೆಯಲಾಗುತ್ತದೆ. ಅಷ್ಟೇ ಅಲ್ಲದೆ, ಈ ಎರಡು ಬೆಡಗುಗಳ ಕಟ್ಟೆಮನೆಗಳನ್ನು ಕುರಿತ ಬಿಡಿಗೀತೆಗಳು ಹಾಗೂ ಕರಡಿಬುಳ್ಳಪ್ಪನ ಕುರಿತ ಕತೆಯನ್ನೊಳಗೊಂಡ ಸಾಹಿತ್ಯವನ್ನು ನೀಡಲಾಗಿದೆ. ಕರಡಿಬುಳ್ಳಪ್ಪನು ಹರತಿಕೋಟೆ ರಾಜನ ಮಗಳಾದ ಕರೀ ಓಬಕ್ಕಳ ಸಂಬಂಧವನ್ನು ಬೆಳೆಸಿ ಅವಳ ಹೆಸರಿನಲ್ಲೊಂದು ಕಟ್ಟೆ ಮನೆಯನ್ನು ರಚಿಸಿದರ ಕುರಿತಾದ ಕಥೆಯನ್ನು ಅನುಬಂಧದಲ್ಲಿ ನೀಡಲಾಗಿದೆ. ಒಟ್ಟಿನಲ್ಲಿ ನಮಗೆ ದೊರಕಿರುವ ಗೀತ ಸಾಹಿತ್ಯವು ಕರಡಿ ಬುಳ್ಳಪ್ಪನ ವಿಸ್ತೃತವಾದ ಚರಿತ್ರೆಯೊಂದನ್ನು ತೆರೆದಿಡುತ್ತದೆ.

ಚಂದಮುತ್ತಿ ವಂಶದ ಹೆಣ್ಣು ಮಗಳಾದ ಕಾಟಮ್ಮ ಹಾಗೂ ಚಿತ್ತಮುತ್ತಿ ಕುಲದವನಾದ ಮ್ಯಾಕೆಮಾರಗೊಂಡ ಇವರು ಕರಡಿಗೊಲ್ಲ ವಂಶದ ಹುಟ್ಟಿಗೆ ಮೂಲ ಕಾರಣ. ಆದರೆ ಈ ಇಬ್ಬರ ನಡುವೆ ಕರಡಿಯೊಂದು ಪ್ರಧಾನ ಪಾತ್ರ ವಹಿಸುವುದನ್ನು ಕಥೆ ನಿರೂಪಿಸುತ್ತದೆ.

ಹೊತ್ಲುಂಟೆ ಎದ್ದು ಕೈಕಾಲು ಮಕುವಾ ತೊಳೆದು
ಬಂದುಲವ ತೊಳೆದು ಕಡೆಗಿರಿಸಿ ಕಾಟಮ್ಮ।
ಕೆಂದಾವಿನ ಮೊಸರ ಕಡೆದಾಳೊ॥

ಎಂದು ಆರಂಭವಾಗುವ ಗೀತೆಯು ಜನಪದರ ಬದುಕಿನ ದಿನನಿತ್ಯದ ಕ್ರಮಗಳನ್ನು ವಿವರಿಸುತ್ತದೆ. ಕಾಡುಗೊಲ್ಲ ಸಮುದಾಯದ ಹೆಣ್ಣುಮಕ್ಕಳ ದಿನಚರಿಯನ್ನು ಈ ಭಾಗ ನಿರೂಪಿಸುತ್ತದೆ. ಬೆಳಿಗ್ಗೆ ಬೇಗನೆ ಎದ್ದು ಹಾಲು ಕರೆಯುವುದು, ಮೊಸರು ಕಡೆಯುವುದು ಈ ಸಮುದಾಯದ ಹೆಣ್ಣುಮಕ್ಕಳ ವಾಡಿಕೆ. ಇಲ್ಲಿ ಕಾಟಮ್ಮಳು ಇವರ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುತ್ತಾಳೆ. ಕಾಟಮ್ಮ ಮೊಸರು ಕಡೆಯುವ ಪ್ರಕ್ರಿಯೆ ಬಹು ಮುಖ್ಯವಾದುದು. 'ವಜ್ರಮಾಣಿಕದ ಕಡಗೋಲ ತಕ್ಕೊಂಡು ಕಾಟಮ್ಮ ಕೆಂದ ಹಸುವಿನ ಮೊಸರನ್ನು ಕಡೆದಳು' ಎಂಬುದು ಜನಪದರ ಅದ್ಭುತ ಕಲ್ಪನೆ.

ಕಾಲಾಡಿ ಕೈಯಾಡಿ ತೋಳಾಡಿ ಭುಜವಾಡಿ
ನಾಗರೆಡೆಯಂಗೆ ನೆಡವಾಡಿ। ಸರಸತಿಯೆ
ಬೆಟ್ಟಾಡಿ ಬೆಣ್ಣೆ ತೆಗೆದಾಳೊ

ಕಾಡುಗೊಲ್ಲ ಮಹಿಳೆಯರು ಹಾಲು ಕರೆಯುವ, ಮೊಸರು ಕಡೆಯುವ, ಬೆಣ್ಣೆ ತಗೆಯುವ ಕೆಲಸಗಳಲ್ಲಿ ನಿಪುಣರು. ಕಾಟಮ್ಮಳು ಮೊಸರು ಕಡೆಯುವ ಕ್ರಿಯೆಯಲ್ಲಿ ತನ್ಮಯಳಾದ ಕ್ರಮವನ್ನು ಈ ಭಾಗ ವಿವರಿಸುತ್ತದೆ. ಮೊಸರನ್ನು ಕಡೆದು ಅದರಿಂದ ಬೆಣ್ಣೆಯನ್ನು ತೆಗೆದು 'ದಿಲ್ಲಿ ಹೊಳೆತನಕ ಹೊತ್ತಾಳು' ಎಂಬುದು ಗಮನಿಸಬೇಕಾದ

ಅಂಶ. ಚಿತ್ರದುರ್ಗ, ತುಮಕೂರು, ಬಳ್ಳಾರಿ ಭಾಗಗಳಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯದ ಹೆಣ್ಣು ಮಗಳೊಬ್ಬಳು ದಿಲ್ಲಿಯವರೆಗೂ ಹಾಲು–ಮೊಸರು ಮಾರಲು ಹೋಗಲು ಸಾಧ್ಯವಿಲ್ಲ. ಆದರೆ ಮೊದಲೇ ತಿಳಿಸಿದಂತೆ, ಕಾಡುಗೊಲ್ಲರ ಕುರಿತಾದ ಪೂರ್ವ ಚರಿತ್ರೆಯನ್ನು ಗಮನಿಸಿದಾಗ ಈ ಸಮುದಾಯದ ಪೂರ್ವಿಕರು ಡೆಲ್ಲಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಇದ್ದರು ಎಂಬ ಅಂಶವನ್ನು ಈ ಕಾವ್ಯ ಭಾಗ ನೆನಪಿಸುತ್ತದೆ. ಸ್ವತ: ಕಾಡುಗೊಲ್ಲರೂ ಈ ಚರಿತ್ರೆಯನ್ನು ನಂಬಿರುವುದು ಈ ಸಾಹಿತ್ಯದಿಂದ ಸ್ಪಷ್ಟವಾಗುತ್ತದೆ. ಕಾಟಮ್ಮಳೂ ಈ ಕಾಲಘಟ್ಟದವಳೇ ಇದ್ದಿರಬಹುದೆಂದು ತಿಳಿಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮುಂದಿನ ಸಾಲುಗಳು ಮುಖ್ಯವಾಗುತ್ತವೆ.

ಮುತ್ತೀನ ಸೆರಗ ಮುರಿದು ಸಿಂಬೆಮಾಡಿ
ಹೊತ್ತಾಳು ದಿಲ್ಲಿ ಹೊಳೆತಂಕ। ಕಾಟಮ್ಮ
ನೆಡುಪ್ಯಾಟೆ ಕೊಡನ ಇಳಿಸ್ಯಾಳೊ

ಕಾಟಮ್ಮ ದಿಲ್ಲಿ ಪಟ್ಟಣದಲ್ಲಿ ವ್ಯಾಪಾರವನ್ನು ಮುಗಿಸಿ ತನ್ನ ಪಟ್ಟಣಕೆ ತಿರುಗಿ ಬರುವಾಗ ದಾರಿ ಮಧ್ಯೆ ದೊಂಬರ ಆಟ ನಡೆಯುತ್ತಿರುತ್ತದೆ. ಆ ಆಟವನ್ನು ನೋಡುತ್ತ ಕಾಟಮ್ಮ ಮೈಮರೆತು ಬಿಡುತ್ತಾಳೆ. ಪರಿಣಾಮವಾಗಿ ಅಲ್ಲಿಯೆ ಸಂಜೆಯಾಗುತ್ತದೆ. ಮನೆಗೆ ಹೋಗಬೇಕೆಂಬುದು ನೆನಪಾಗಿ ಆಕೆ ಆ ದೂಳಸಂಜೆ ಹೊತ್ತಿನಲ್ಲಿಯೇ ಹೊರಡುತ್ತಾಳೆ.

ನೋಡುತಲೆ ಅಲ್ಲಿ ಬೈಗಾಗಿ ಕಾಟಮ್ಮ
ದೂಳಸಂಜೇಲಿ ಹೊರಟಾಳೊ। ಕಾಟಮ್ಮ
ಕಾಣದಗೆಯಾಗೆ ಕುಸಿಬಿದ್ದು.

'ದೂಳಸಂಜೆ' ಎಂಬುದು ಜನಪದರ ಪ್ರಕಾರ ಅವಸರದ ಸಮಯ. ಅಂದರೆ, ಹೊರಗೆ ಹೋಗಿದ್ದ ಮನುಷ್ಯರಾದಿಯಾಗಿ, ಪ್ರಾಣಿ, ಪಕ್ಷಿಗಳೆಲ್ಲವೂ ತಮ್ಮ ನೆಲೆಗಳನ್ನು ಸೇರುವ ಹೊತ್ತು. ಇಂಥ ಹೊತ್ತಿನಲ್ಲಿ ಕಾಟಮ್ಮಳು ನಡೆದು ಬರುವಾಗ ಕಾಣದ ಅಗೇವಿನೊಳಗೆ(ಆಳವಾದ ಗುಂಡಿ) ಕುಸಿದು ಬೀಳುತ್ತಾಳೆ. 'ಕಾರೆಂಬ ಕತ್ತಾಲು ಗೀರೆಂಬ ಗಿಡುದಾಗೆ ಮಾನ್ಯಾರ ಸುಳಿವೇ' ಇಲ್ಲದಂಥ ಸ್ಥಿತಿ ನಿರ್ಮಾಣವಾಗುತ್ತದೆ. ಇಂಥ ಸ್ಥಿತಿಯಲ್ಲಿ ಕಾಟಮ್ಮ ಒಬ್ಬಳೆ ಆಡಾಡಿಕೊಂಡು ಅಳುತ್ತಾಳೆ. ತನ್ನವರು ಯಾರಾದರು ಬಂದು ಕಾಪಾಡಲಿ ಎಂದು ಪರಿತಪಿಸುತ್ತಾಳೆ. ಆದರೆ ಕಾಟಮ್ಮಳ ಬದುಕು ಈ ಸನ್ನಿವೇಶದಿಂದಾಗಿ ಬೇರೆಯದೇ ತಿರುವನ್ನು ಪಡೆದುಕೊಳ್ಳುತ್ತದೆ.

ಗುಡ್ಡಾದ ಕರಡಿ ಉದ್ದಾಮೇಯ್ಯಾಲೋಗಿ
ತನ್ನ ಒಬ್ಬೀಗೆ ತಿರುಗಿನ್ನೋ। ಬರುವಾಗ
ಕಾಟಮ್ಮ ಆಡಾಡಿ ಅಳುತಾಳೊ

ಇಲ್ಲಿ ಕರಡಿಯು ಕಾಟಮ್ಮಳ ಜೊತೆ ನಡೆಸುವ ಸಂವಾದ ಜನಪದರ ಕ್ರೀಯಾಶೀಲತೆಗೆ ಸಾಕ್ಷಿ. 'ಯಾರಮ್ಮ ಅಳುವೋರು ಯಾರಮ್ಮ ಕರೆವೋರು ಯಾರಮ್ಮ ಇಲ್ಲಿ ಇರುವೋರು'? ಎಂಬ ಪ್ರಶ್ನೆಯು ಮನುಷ್ಯನ ಇರುವಿಕೆಯನ್ನು ಕರಡಿಯು ಗುರುತಿಸಿದ ಕ್ರಮವನ್ನು ಸ್ಪಷ್ಟಪಡಿಸುತ್ತದೆ. ಅಳುವ ದನಿ ಮನುಷ್ಯ ಜೀವಿಯದೇ ಎಂಬುದನ್ನು ಕರಡಿಯೊಂದು ಅರಿತುಕೊಳ್ಳುವ ಬಗೆ ಅಚ್ಚರಿ ತರುವಂಥದ್ದು. ಕರಡಿಯ ಪ್ರಶ್ನೆಗೆ ಕಾಟಮ್ಮಳ ಉತ್ತರವೂ ಅಷ್ಟೇ ಮುಖ್ಯವಾಗುತ್ತದೆ.

ಗಾಳಿ ನಾನಲ್ಲ ಪೀಡೆಯು ನಾನಲ್ಲ
ರಾಯಸಂದನೂರ ಮಗಳಯ್ಯ। ಕರಡಯ್ಯ
ಮೇಲಕ್ಕೆ ನನ್ನ ಕರಕೋಳೊ

ಮನುಷ್ಯ ಎಷ್ಟೇ ಬುದ್ದಿವಂತನೆನಿಸಿಕೊಂಡು, ಸ್ವಾವಲಂಬಿ ಬದುಕನ್ನು ಕಂಡುಕೊಂಡರೂ ಅನಿವಾರ್ಯ ಸಂದರ್ಭಗಳಲ್ಲಿ ಆತ ತನ್ನ ಪರಿಸರದ ಇತರೆ ಜೀವಿಗಳೊಡನೆ ಸಹಜೀವನವನ್ನು ನಡೆಸಬೇಕಾಗುತ್ತದೆ. ಕಾಡುಗೊಲ್ಲರದ್ದೂ ಇಂಥದ್ದೇ ಬದುಕು.

ಕಾಟಮ್ಮಗೆ ಎದುರಾದಂತ ಸಂದಿಗ್ಧತೆಗಳು ಇವರ ಬದುಕಿನುದ್ದಕ್ಕೂ ಸಹಜವೆನ್ನುವಷ್ಟು ಘಟಿಸುತ್ತಿರುತ್ತವೆ. ಕರಡಿ ಬುದ್ದಿವಂತ ಪ್ರಾಣಿ. ಕಾಟಮ್ಮಳನ್ನು ಅಗೇವಿನಿಂದ ಮೇಲೆತ್ತಲು ಬಳಸಿದ ತಂತ್ರಗಳು ಇದರ ಜಾಣತನವನ್ನು ಸಾಬೀತುಪಡಿಸುತ್ತವೆ.

ಅಂಗಂದ ಮಾತ ಕೇಳ್ಯಾನೆ ಕರಡಯ್ಯ

ದಾಗೂಡಿ ಬಳ್ಳಿ ದಗುನಾಕೆ। ಅರುದಾವೆ
ಬಾಯಾಗೆ ಬಳ್ಳಿ ಕಡುತಂದ

ಕರಡಿರಾಯನು ದಾಗೂಡಿ ಬಳ್ಳಿಯನ್ನು ಬಾಯಲ್ಲಿ ಹರಿದು ತಂದು ಅದನ್ನು ಹಗ್ಗವನ್ನಾಗಿ ಮಾಡಿ ಅಗೆಯೊಳಗೆ ಇಳಿಬಿಡುತ್ತಾನೆ. ಜನಪದರ ಚಿಂತನೆಗಳಲ್ಲಿ ಪ್ರಾಣಿಗೂ ಮನುಷ್ಯನಿಗೂ ಸಮಾನ ಸ್ಥಾನವಿದೆ. ಜನಪದರು ಕಾಗಕ್ಕ–ಗುಬ್ಬಕ್ಕನ ಕಥೆಯಿಂದ ಹಿಡಿದು ದೀರ್ಘವಾದ ಮಹಾಕಾವ್ಯಗಳವರೆಗೂ ಪ್ರಾಣಿಗಳಿಗೆ ಮಾತಿನ ಶಕ್ತಿಯನ್ನು ಆರೋಪಿಸಿದ್ದಾರೆ. ಈ ಕಾರಣಕ್ಕೇ ಇವರು ತಮ್ಮೊಡನೆ ದಿನನಿತ್ಯ ಜೀವಿಸುವ, ದುಡಿಯುವ ಎತ್ತು, ಎಮ್ಮೆ, ಹಸು, ಕರುಗಳ ಮೇಲೆ ಅಗಾಧವಾದ ಪದಗಳನ್ನು ಕಟ್ಟಿ ಹಾಡುತ್ತಾರೆ. ಕರಡಿರಾಯ ಇಲ್ಲಿ ಕಾಡು ಪ್ರಾಣಿಯಾಗಿದ್ದರೂ ಸಂಪೂರ್ಣ ಮಾನವಸಹಜವಾದ ಗುಣಗಳನ್ನು ಹೊಂದಿದ್ದಾನೆ. ಭಯಗೊಂಡಿರುವ ಕಾಟಮ್ಮನನ್ನು ಅವನು ಸಮಾಧಾನಿಸಿ ಅಗೇವಿನಿಂದ ಹೊರಬರುವಂತೆ ಸೂಚಿಸುವ ಮುಂದಿನ ಸಾಲುಗಳನ್ನು ಗಮನಿಸಬೇಕು.

ಕಣ್ಣೆರಡು ಮುಚ್ಚೆ ಕೈ ಎರಡು ಜೋಡುಸೆ
ಹತ್ತಿ ಬಾರೆ ನನ್ನ ಸಖಿಯೋಳೆ । ಎಲುಕಾಟಿ
ಮರಿ ಮರಿಯೆ ನಿನ್ನ ತವರೂರ

ಕರಡಿರಾಯನು ಕಾಟಮ್ಮಳಿಗೆ ತೋರುವ ಪ್ರೀತಿ ಇಲ್ಲಿ ಮುಖ್ಯವಾದುದು. ಮಾನವ ಸಂಬಂಧಗಳ ನಡುವೆ ಇರಬಹುದಾದಷ್ಟು ಸಹಜ ರೀತಿಯ ನಡವಳಿಕೆಯಿಂದ ಕರಡಿರಾಯ ಕಾಟಮ್ಮಳೊಡನೆ ವ್ಯವಹರಿಸುತ್ತಾನೆ. 'ಕೈಎರಡು ಜೋಡಿಸುವುದು' ದೀನತೆಯ ಸಂಕೇತವಾಗಿದೆ. ಮಾತ್ರವಲ್ಲ ಕೃತಜ್ಞತೆಯ ಸಂಕೇತವೂ ಹೌದು. ಒಂದು ರೀತಿಯಲ್ಲಿ ಪುರುಷಾಧಿಕಾರದ ಲಕ್ಷಣವನ್ನೂ ಈ ಭಾಗ ಸೂಕ್ಷ್ಮವಾಗಿ ಬಿಂಬಿಸುತ್ತದೆ. ಕರಡಿರಾಯನು ತವರು ಮನೆಯನ್ನು ಮರೆಯುವಂತೆ ಕಾಟಮ್ಮಳಿಗೆ ಸೂಚಿಸಿದಾಗ ಕಾಟಮ್ಮಳ ಉತ್ತರ ತವರೂರಿನ ಕುರಿತಾದ ಆಕೆಯ ಅಕ್ಕರೆಯನ್ನು ತಿಳಿಸುತ್ತದೆ. ತವರೂರಿನ ಸುಂದರವಾದ ಚಿತ್ರಣವನ್ನು ಆಕೆ ಇಲ್ಲಿ ನೀಡುತ್ತಾಳೆ. "ಮರಿಮರಿಯೆಂದಾರೆ ನಾನೆಂಗೆ ಮರಿಯಾಲೊ ಬಳ್ಳಾರಿ ನಮ್ಮ ತವರೂರು" ಎನ್ನುತ್ತಾಳೆ. ಇದ್ದಕಿದ್ದಂತೆ ಕಾಟಮ್ಮ ತನ್ನ ತವರೂರು ಎಂದು ಹೇಳಿಕೊಳ್ಳುವ ಬಳ್ಳಾರಿಗೂ ಆರಂಭದಲ್ಲಿ ಆಕೆ ಹೋಗಿ ಮಜ್ಜಿಗೆ ಮಾರುವ 'ಡೆಲ್ಲಿ' ಪಟ್ಟಣಕ್ಕೂ ಇರುವ ಸಂಬಂಧವೇನು ಎಂಬುದು ಇಲ್ಲಿ ಉದ್ಭವಿಸುವ ಪ್ರಶ್ನೆ. "ಬಳ್ಳಾರಿ ನನ್ನ ತವರೂರು ರಾಯಸಂದನೂರ ಮಗಳಯ್ಯ" ಎಂದು ಕಾಟಮ್ಮಳು ಹೇಳಿಕೊಳ್ಳುತ್ತಾಳೆ. ಬಹುಷ: ತಮ್ಮ ಮೂಲ ನೆಲೆಗಳನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದ ಸಂದರ್ಭದಲ್ಲಿ ಕಲಾವಿದರು ಈ ಬಗೆಯ ದ್ವಂದ್ವಗಳಿಗೆ ಒಳಗಾಗಿರಬೇಕು. ಅಥವಾ ತಾವು ನೋಡಿದ, ವಾಸಿಸಿದ ಎಲ್ಲಾ ಪಟ್ಟಣಗಳನ್ನು 'ಡೆಲ್ಲಿ' ಪಟ್ಟಣಕ್ಕೆ ಹೋಲಿಸುವ ಮೂಲಕ ಡೆಲ್ಲಿಯನ್ನು ತಮ್ಮ ಸಾಹಿತ್ಯದಲ್ಲಿ ಜೀವಂತವಾಗಿರಿಸುವ ಕೆಲಸವನ್ನು ಈ ಜನರು ಮಾಡುತ್ತಿರಬೇಕು. ಜನಪದರಿಗೆ ಅದರಲ್ಲೂ ಮುಖ್ಯವಾಗಿ ಹೆಣ್ಣು ಮಕ್ಕಳಿಗೆ ತಮ್ಮ ತವರೂರನ್ನು ಕುರಿತಂತೆ ಇರುವ ಅಪಾರವಾದ ಪ್ರೇಮ ನಮಗೆ ಈ ಬಗೆಯ ಸಾಹಿತ್ಯದಿಂದ ತಿಳಿದು ಬರುತ್ತದೆ. "ಆಲೆ ಆಡುತ್ತಾವೆ। ಗಾಣ ತಿರುಗುತ್ತಾವೆ। ನವಿಲು ಸಾರಂಗ ನಲಿತಾವೆ ಬಳೆಗಾರ। ಅದೇ ಕಾಣೋ ನನ್ನ ತವರೂರು" ಎಂದು ಬಳೆಗಾರನಿಗೆ ತವರೂರನ್ನು ಪರಿಚಯಿಸುವ ಹೆಣ್ಣು, ತನ್ನ ತವರನ್ನು ಸಾಧ್ಯವಾದಷ್ಟು ಔನ್ನತ್ಯಕ್ಕೇರಿಸುವುದನ್ನು ನಾವು ಕಾಣುತ್ತೇವೆ. ಇಲ್ಲಿಯೂ ಕಾಟಮ್ಮ ವಿವರಿಸುವ ತವರೂರು, ಅತ್ಯಂತ ಸಮೃದ್ಧತೆಯಿಂದ ಕೂಡಿರುವುದನ್ನು ಕಾಣುತ್ತೇವೆ.

ಬಳ್ಳಾರಿ ನಮ್ಮ ತವರೂರ ಕೆರೆತುಂಬಿ
ನೆಲ್ಲಾಗದ್ದೀಗೆ ಅರಿದಾವೋ
ನೆಲ್ಲಾಗದ್ದೀಗೆ ಅರಿದು। ಮಿಕ್ಕಾನೀರ
ಅಲ್ಲಿ ಸಾವುರುದ ಗಿಣಿಕುಡಿದು

ಭತ್ತದ ಗದ್ದೆ, ತುಂಬಿದ ಕೆರೆ, ಸಾವಿರ ಹಿಂಡಿನ ಗಿಣಿಗಳು ಸಮೃದ್ಧತೆಯ ಸಂಕೇತವಾದುದರಿಂದ ಕಾಟಮ್ಮಳ ತವರೂರೂ ಇದಕ್ಕೆ ಹೊರತಾದುದಲ್ಲ. ಆದರೆ ಕಾಟಮ್ಮಳ ತವರಿನ ಪ್ರೀತಿಯ ಬಗೆಗೆ ಕರುಣೆಯಾಗಲಿ, ಭಯವಾಗಲಿ ಕರಡಿರಾಯನಿಗೆ ಹುಟ್ಟಲಿಲ್ಲ. 'ಕರಡಯ್ಯ ಹಿಂದಿಂದೆ ಕಾಟಮ್ಮ ಮುಂದೆ ಮುಂದೆ' ಗವಿಯ ಮುಖವಾಗಿ ಹೊರಡುತ್ತಾರೆ. ಮಾತ್ರವಲ್ಲ ಅಗೆವಿನಿಂದ ಕಾಟಮ್ಮಳನ್ನು ಹೊರತೆಗೆಯುವಾಗ ಕರಡಯ್ಯನ ನಡವಳಿಕೆಯಲ್ಲಿ ಕಂಡು ಬಂದ ಮಾನವೀಯತೆ ಅನಂತರದಲ್ಲಿ ಕಾಣಿಸಿಕೊಳ್ಳುವುದಿಲ್ಲ. ಒಂದು ರೀತಿಯಲ್ಲಿ ಕಾಟಮ್ಮಳ ಅಸಹಾಯಕತೆಯನ್ನು ಕರಡಯ್ಯ ಬಹು ಅಮಾನವೀಯತೆಯಿಂದಲೇ ಬಳಸಿಕೊಳ್ಳುತ್ತಾನೆ.

ಸಾರಂಗುದು ಕಾಟಿ ಸೆದುರಂಗದ ಸಂದಾನೂರ

ನಾರೀಯ ಬತುವ ಅಳುದಾನೊ
ಇಕ್ಕಟ್ಟಿನೊಳೆಯಾಗೆ ಸಕ್ಕಂದದ ಬೈಲಾಗೆ
ಸಿಕ್ಕಿದಳಕ್ಕಯ್ಯ ಮಗಳಯ್ಯ। ಕರಡಯ್ಯ
ಸಪ್ಪಾಳೆನಾಕಿ ನಗುತಾನೊ

ಪ್ರಾಣಿಯೊಡನೆ ಮನುಷ್ಯ ದಾಂಪತ್ಯ ಬದುಕನ್ನು ನಡೆಸಬೇಕಾದ ಅನಿರ್ವಾತೆ ಬದುಕಿನ ವಿಷಮತೆಯನ್ನು ಚಿತ್ರಿಸುತ್ತದೆ. ಇದು ಒಂದು ಅಸಂಗತತೆಯೂ ಹೌದು. ಗವಿ ಬದುಕಿನಿಂದ ಈಗಾಗಲೇ ಬಹುದೂರ ಸಾಗಿಬಂದ ಮನುಷ್ಯ ಜೀವಿಗೆ ಗವಿಯೆಂದರೆ 'ಕತ್ತಲೆ ಮನೆ' ಯಾಗಿ ಪರಿಣಮಿಸುವುದು ಸಹಜ. ಅದಕ್ಕಾಗಿ ಕಾಟಿ "ಹಾಳು ಕರಡಿ ಮನೆ ಕತ್ತಾಲು ಗೈದಾವೋ ಮತ್ತೆಂಗೆ ಇರಲೊ ಶಿವ ಶಿವನೆ" ಎಂದು ಹಲುಬುತ್ತಾಳೆ. ಕಾಟಮ್ಮಳನ್ನು ಉಳಿಸಿಕೊಳ್ಳಲು ಕರಡಿರಾಯ ಮಾಡುವ ಕೆಲಸಗಳು ಇಲ್ಲಿ ಗಮನಿಸಬೇಕಾದವು. ಪ್ರಾಣಿ ಸಹಜ ಸ್ವಭಾವವನ್ನು ಈ ಗೀತ ಭಾಗದಲ್ಲಿ ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಸಂತೆಗೆ ಹೋಗುವ ಜನರನ್ನೆಲ್ಲ ಹೆದರಿಸಿ, ಕಾಟಮ್ಮಳಿಗೆ ಅಗತ್ಯವಿರುವ ವಸ್ತುಗಳನ್ನು ತರುತ್ತಾನೆ. ಸಂತೆಗೆ ಹೋಗುವವರನ್ನು ಗರಗುಟ್ಟಲು ಮಾಡಿ ಅಕ್ಕಿಯ ಹೇರು, ಮಡಕೆ ಹೇರು ತರುತ್ತಾನೆ. ಆದರೆ ಇಷ್ಟಕ್ಕೆ ಸಂಸಾರ ನಡೆದೀತೆ? ಕಾಟಮ್ಮಳು, "ಅನ್ನ ಉಂಡು ಆರೆಂಟು ದಿನಗಳೇ ಆಗಿ ಹೋದವು, ಹೊಟ್ಟೆ ಹಸಿಯುತ್ತಿದೆ" ಎಂದು ದು:ಖ ತೋಡಿಕೊಳ್ಳುತ್ತಾಳೆ. ಅದಕ್ಕಾಗಿ ಮತ್ತೆ ಕರಡಯ್ಯ ಸೃಷ್ಟಿಸುವ ಪ್ರಸಂಗಗಳು ಜನಪದರ ಹಾಸ್ಯ ಪ್ರಜ್ಞೆಯನ್ನು ಸೂಚಿಸುತ್ತವೆ.

ಹೊಟ್ಟೆ ಅಸೀತು ಕರಡಯ್ಯ ಅಂದಾರೆ
ಹೋದನು ಜೇನಕಲ್ಲ ಸಂತೇಗೆ
ಹೋದನು ಜೇನಕಲ್ಲ ಸಂತೇಯ ಹಾದೀಲಿ
ಕಾದು ಕುಂತವನೆ ಕರಡಯ್ಯ

ಇಲ್ಲಿ 'ಜೇನಕಲ್ಲು' ಎಂಬ ಇನ್ನೊಂದು ಊರಿನ ಪ್ರಸ್ತಾಪ ಬರುತ್ತದೆ. ಈ ಊರು ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನಲ್ಲಿ ಇದೆ. ಇಲ್ಲಿ 'ಜೇನಕಲ್ಲು ಬೆಟ್ಟ'ವೂ ಇದೆ. ಇಲ್ಲಿಂದ ಸುಮಾರು ಐದಾರು ಮೈಲುಗಳ ದೂರದಲ್ಲಿ 'ಕಾಟಮ್ಮನ ಹಟ್ಟಿ' ಎಂಬ ಗೊಲ್ಲರ ಹಟ್ಟಿ ಇದೆ. ಇಲ್ಲಿ ಕಾಟಮ್ಮ ಎಂಬ ದೇವರ ಗುಡಿಯೂ ಇದೆ ಎಂದು ವಕ್ತೃವೊಬ್ಬರು ಹೇಳಿದ್ದಾರೆ. ಕರಡಿರಾಯನು ಈ ಜೇನಕಲ್ಲ ಸಂತೆಯ ಹಾದಿಯಲ್ಲಿ ಕಾದು ಕುಳಿತು, ಸಂತೆಗೆ ಹೋಗುವವರನ್ನು ಗರಗುಟ್ಟಲು ಮಾಡಿ, ರೊಟ್ಟಿ ಬುತ್ತಿಯನ್ನು ತಂದು ಕಾಟಿಯ ಮುಂದೆ ಎಸೆಯುತ್ತದೆ. ಇದಕ್ಕೆ ಉತ್ತರವಾಗಿ ಕಾಟಿ ಇನ್ನೊಂದು ಬೇಡಿಕೆಯನ್ನು ಮುಂದಿಡುತ್ತಾಳೆ. "ಅಕ್ಕಿನಾದ್ರು ತಂದೆ ಮಡ್ಕೆನಾದ್ರು ತಂದೆ ನೀರಿಲ್ಲವಲ್ಲೋ ಕರಡಯ್ಯ" ಎಂದಾಗ ತೆಂಗಿನ ಚಿಪ್ಪಿನಲ್ಲಿ ನೀರು ತರುತ್ತಾನೆ, ಉರಿಸಲು ಸೌದೆ ತರುತ್ತಾನೆ. ಈಗ ಕಾಟಮ್ಮ ಬೆಂಕಿಯನ್ನು ತರುವಂತೆ ಹೇಳುತ್ತಾಳೆ. ಆಗ ಕರಡಯ್ಯ ಬೆಂಕಿ ತರಲು ಜೋಳದ ಹೊಲದವರು ಇರುವಲ್ಲಿಗೆ ಹೋಗುತ್ತಾನೆ. ಅಲ್ಲಿ ರಾತ್ರಿ ಕಾವಲಿಗೆಂದು ಬೆಂಕಿ ಉರಿಸುತ್ತಾ ಕುಳಿತ ಜನರನ್ನು ಗುರುಗುಟ್ಟಿ ಹೆದರಿಸಿ, ಬಾಯಲ್ಲಿ ಬೆಂಕಿ ಕೊಳ್ಳಿಯನ್ನು ತರುತ್ತಾನೆ. ಆಗ ಮೂಡಲಗಾಳಿ ಬೀಸುತ್ತದೆ. ಕರಡಿರಾಯನ ಮೈ ಮೇಲಿನ ಕೂದಲೆಲ್ಲ ಬಾದೆ ಹುಲ್ಲಿನಂತೆ ಉರಿದು ಹೋಗುತ್ತದೆ. ಇವೆಲ್ಲವು ಕರಡಿರಾಯನ ಸಾಹಸದ ಚಿತ್ರಗಳಾಗಿ ಕಂಡು ಬರುತ್ತವೆ. ಪ್ರಾಣಿ ಹಾಗೂ ಮಾನವರ ನಡುವೆ ಇರುವ ಬದುಕಿನ ಕ್ರಮದ ಭಿನ್ನತೆಗಳನ್ನು ಈ ಕಾವ್ಯ ಭಾಗ ವಿವರಿಸುತ್ತದೆ. ಕರಡಿರಾಯನ ಮೇಲಿನ ಕೋಪವನ್ನು ಜನಪದರು ಕೂದಲು ಉರಿದು ಹೋಗುವ ಶಿಕ್ಷೆಯನ್ನು ವಿಧಿಸುವುದರ ಮೂಲಕ ಪರಿಹರಿಸಿಕೊಳ್ಳುವುದನ್ನು ಕಾಣಬಹುದಾಗಿದೆ.

ಬಾಯಾಗೆ ಬೆಂಕಿ ತರುವಾಗ ಕರಡಯ್ಯ
ಮೂಡಾಲ ಗಾಳಿ ಸುಳುದಾವೊ
ಮೂಡಾಲ ಗಾಳಿ ಸುಳು ಸುಳು ಬೀಸುವಾಗ
ಬಾದೆವುಲ್ಲಾಗಿ ಹುರಿದೋದೆ

ಇಲ್ಲಿ ಕರಡಿರಾಯನಿಗೆ ತನ್ನ ದೇಹದ ಮೇಲಿನ ಕೂದಲು ಸುಟ್ಟು ಹೋದುದ್ದಕ್ಕೆ ದು:ಖವಾಗುತ್ತದೆ. ಅವನು ಕಾಟಮ್ಮಳಿಗಾಗಿ ತಾನು ಮಾಡಿದ ಸಾಹಸಗಳನ್ನು ಅವಳ ಮುಂದೆ ತೋಡಿಕೊಳ್ಳುತ್ತಾನೆ.

ನಿಸ್ತ್ರೀ ನಿನ್ನಿಂದ ಅಂದೀದೆ ಕುಂದೀದೆ
ನಿಂಬೆ ತರಗಾಗಿ ಉರಿದೋದೆ। ಓಬೇನಳ್ಳಿ
ವಜ್ಜುರುವ ಮುಣುಗಿ ಗೆದ್ದುಬಂದೆ

ಅಲ್ಲಿಂದ ಕರಡಿರಾಯನು ಬಡಗಲಸೀಮೆಗೆ ಹೋಗುತ್ತಾನೆ. "ಉದ್ದಿನೇರು, ಕಡ್ಲೆಯೇರು ತರಲೋಗ್ತೀನಿ ಕಾಟಿ ನೀ ಜತುನ, ಗವಿ ಜತುನ" ಎಂದು ಕಾಟಮ್ಮಳನ್ನು ಗವಿಯಲ್ಲಿ ಬಿಟ್ಟು ಬಡಸೀಮೆಗೆ ಹೋಗುತ್ತಾನೆ. ಕರಡಿರಾಯ ಬಡಸೀಮೆಗೆ ಹೋದ ನಂತರ ನಡೆಯುವ ಘಟನೆಗಳು ಇಡೀ ಕಾವ್ಯದ ಮುಖ್ಯವಾದ ತಿರುವು. ಈವರೆಗೂ ಕಾಟಮ್ಮ ಹಾಲು–ಮೊಸರು ಮಾರಲು ಡೆಲ್ಲಿ ಪಟ್ಟಣಕ್ಕೆ ಹೋಗಿದ್ದು, ದೊಂಬರಾಟ ನೋಡುತ್ತ ದೂಳ ಸಂಜೆಯಾದದ್ದು, ದೂಳಸಂಜೇಲಿ ಹೋಗುವಾಗ ಕಾಣದೆ ಅಗೇಯಲ್ಲಿ ಬಿದ್ದುದು, ಅಲ್ಲಿ ಕರಡಿಯ ಕೈಗೆ ಸಿಕ್ಕಿದುದು ಇಂಥ ಚಿತ್ರಗಳು ಕಾಣಿಸಿಕೊಂಡವು. ಕಾಟಮ್ಮ ಕಾಣೆಯಾದಾಗಿನಿಂದ ಆಕೆಯ ಮನೆಯಲ್ಲಿ ಉಂಟಾಗಿರಬಹುದಾದ ತಲ್ಲಣಗಳ ವಿವರಗಳು ಕಾವ್ಯದಲ್ಲಿ ಇಲ್ಲಿಯವರೆಗೂ ಕಂಡು ಬರುವುದಿಲ್ಲ. ಮುಂದಿನ ಭಾಗ ಆ ನಿಟ್ಟಿನಲ್ಲಿ ಮುಖ್ಯವಾದುದು. ತವರಿನ ಸಂಬಂಧ ಮತ್ತೆ ಆಕೆಯನ್ನು ಹುಡುಕಿ ಬರುತ್ತದೆ.

ಮ್ಯಾಕೆ ಮಾರಗೊಂಡ ಮ್ಯಾಕೆ ಮೇಸಲೋಗಿ
ಸಿಕ್ಕಟ್ಟದ ಮ್ಯಾಲೆ ಕೊರಳೂಡಿ। ಊದಲುವಾಗ
ಕಾಟಮ್ಮ ಆಡಾಡಿ ಅಳುತಾಳೊ

ಮ್ಯಾಕೆ ಮಾರಗೊಂಡನೆಂಬುವನು ಕಾಟಮ್ಮಾಳ ಮಾವ. ಮೊದಲೇ ಹೇಳಿದಂತೆ ಚಿತ್ತಮುತ್ತಿ ಕುಲದವನು. ಆಕೆಯನ್ನು ವಿವಾಹವಾಗಬೇಕಾಗಿದ್ದವನು. ಮೇಕೆ ಮೇಯಿಸುವುದು ಈತನ ಕಾಯಕ. ಒಂದು ದಿನ ಕಾಟಮ್ಮ ಇರುವ ಗವಿಯ ಕಡೆಗೆ ಮೇಕೆ ಮೇಯಿಸಲು ಬಂದು ಸಿಕ್ಕುಟ್ಟ (ಚಿಕ್ಕಗುಟ್ಟ)ದ ಮೇಲೆ ಕೊಳಲೂದುತ್ತ ಕೂತಿದ್ದನು. ಆ ಕೊಳಲಿನ ದನಿ ಕಾಟಮ್ಮಳಿಗೆ ಕೇಳಿಸುತ್ತದೆ. ಆಗ ಕಾಟಮ್ಮ ಇದು ಮಾವ ಮ್ಯಾಕೆ ಮಾರಗೊಂಡನದೇ ಎಂದು ತಿಳಿದು ಗಟ್ಟಿಯಾಗಿ ಅಳಲು ಪ್ರಾರಂಭಿಸುತ್ತಾಳೆ. ಅಳುವ ಧ್ವನಿಯನ್ನು ಕೇಳಿಸಿಕೊಂಡ ಮಾರಗೊಂಡ "ಯಾರಮ್ಮ ಅಳುವೋರು ಯಾರಮ್ಮ ಕರೆವೋರು ಯಾರಮ್ಮ ಇಲ್ಲಿ ಇರುವೋರು" ಎಂದು ಪ್ರಶ್ನಿಸುತ್ತಾನೆ. ಆತನ ಪ್ರಶ್ನೆಗೆ ಉತ್ತರವಾಗಿ ಕಾಟಮ್ಮ ಹೀಗೆ ನುಡಿಯುತ್ತಾಳೆ.

ಗಾಳಿಯು ನಾನಲ್ಲ। ಪೀಡೆಯು ನಾನಲ್ಲ
ರಾಯಸಂದನೂರ ಮಗಳಯ್ಯ । ಮಾವಯ್ಯ
ಮೇಲಕ್ಕೆ ನನ್ನ ಕರಕೋಳೊ

ಕಾಟಮ್ಮಳ ಮಾತನ್ನು ಕೇಳಿದ ಮಾರಗೊಂಡ ಇವಳು ತನ್ನ ಕಾಟಿಯೇ ಎಂದು ತಿಳಿದು ಗವಿಯ ಹತ್ತಿರ ಬರುತ್ತಾನೆ. ಅಲ್ಲಿ ಸುತ್ತಲೂ ಬೆಳೆದಿದ್ದ ಮೆಳೆಗಳನ್ನೆಲ್ಲಾ ತುಂಡು ತುಂಡಾಗಿ ಕತ್ತರಿಸಿ ಕಾಟಿಯನ್ನು ಹೊರಗೆ ಕರೆಯುತ್ತಾನೆ. ಗುಹೆಯಲ್ಲಿ ಎರಡು ಕರಡಿ ಮರಿಗಳಿರುತ್ತವೆ. ಅವುಗಳನ್ನು ಗವಿಯಲ್ಲಿಯೇ ಸಾಯಿಸಿ ಕಾಟಮ್ಮಳು, ಮಾವನ ಹಿಂದೆ ಹೊರಟು ಬಿಡುತ್ತಾಳೆ.

ಕರಡಿ ಮಕ್ಕಾಳ ಕಾಲಿಡಿದು ಮೇಲಕ್ಕಟ್ಟಿ
ಸಿರಿಗಂಧದ ಸೌದೆ ಒಲಿಗೂಡಿ। ಕಾಟಮ್ಮ
ಹೊರಟಾಳು ಮಾರಗೊಂಡಾನಿಂದೆ

ಸಿರಿಗಂಧದ ಸೌದೆಯನ್ನು ಒಲೆಗೆ ಹಾಕಿ, ಅದರಮೇಲೆ ಕರಡಿ ಮರಿಗಳನ್ನು ಜೋತು ಬೀಳುವಂತೆ ಕಟ್ಟಿ ಮಾರಗೊಂಡನ ಹಿಂದೆ ಹೊರಟು ಬಿಡುತ್ತಾಳೆ. "ಕಾಡಾಗೆ ಇರುವ ಕರಡೀಯ ಹೆಂಡಾರ ಗೆದ್ದ ಮಾನ್ಯವರೆ ಇವರೀಗ" ಎಂದು ಕಾಟಿಯನ್ನು ಕರಕೊಂಡು ಹೊರಡುವಷ್ಟರಲ್ಲಿ ಸಂಜೆಯಾಗಿರುತ್ತದೆ, ಮಾರಗೊಂಡನ ತಾಯಿಯು ಮಗ ಇನ್ನೂ ಬರಲಿಲ್ಲವಲ್ಲ ಎಂದು ಪರಿತಪಿಸುತ್ತಾಳೆ.

ಹತ್ತು ಸಾವಿರ ಮ್ಯಾಕೆ ಬೆಟ್ಟಾಕೆ ಹೋಗಾವೆ
ಹೊತ್ತೆ ಮುಣುಕಿದರು ಬರಲಿಲ್ಲ । ಅಂಬೂತ
ಅವರ ಹೆತ್ತಮ್ಮ ಆಡಾಡಿ ಅಳುತಾಳೊ

ಅಷ್ಟರಲ್ಲೇ ಹತ್ತು ಸಾವಿರ ಮೇಕೆಗಳನ್ನು ಹೊಡಕೊಂಡು, ಸಿಕ್ಕಿರುವ ಕಾಟಮ್ಮಳನ್ನು ಕರೆದುಕೊಂಡು ಮಾರಗೊಂಡನು ಗಕ್ಕಾನೆ ಹಟ್ಟಿ ಉದಿಯ ಬಾಗಿಲಿಗೆ ಬರುತ್ತಾನೆ. ಸೊಸೆ ಕಾಟಮ್ಮಳಿಗೆ "ತುಪ್ಪ ಅನ್ನವನ್ನು ಇಕ್ಕಿ ಮಾಳೀಗೆ ಮನಿಗೆ ಬಿಡುವಂತೆ" ತನ್ನ ತಾಯಿಗೆ ಹೇಳುತ್ತಾನೆ. ಇಲ್ಲಿ ಕಾಟಮ್ಮಳಿಗೆ ಒದಗಿದ ದುರಂತವನ್ನು ಮಾರಗೊಂಡನು ತನ್ನ ತಾಯಿಗೆ ತಿಳಿಸುವ ವಿವರಣೆ ನೇರವಾಗಿ ಇಲ್ಲ. ಆದರೂ, "ಸಿಕ್ಕಳು ಕಾಟಮ್ಮಗೆ ತುಪ್ಪ ಅನ್ನವನಿಕ್ಕಿ ಕೊಟ್ಟೀಗೆ ಮನಿಗೆ ಬಿಡಿರಣ್ಣ, ಗುಡ್ಡಾದ ಕರಡಿರಾಯ ಬರುತಾನೋ" ಎಂಬುದರಲ್ಲೇ ಈ ಅಂಶವನ್ನು ಅರ್ಥೈಸಿಕೊಳ್ಳಬೇಕಾಗಿದೆ. ಇತ್ತಕಡೆ

ಬಡಸೀಮೆಗೆ ಹೋಗಿದ್ದ ಕರಡಿರಾಯನು ಗವಿಗೆ ಮರಳುತ್ತಾನೆ. ಅಲ್ಲಿ ಕಾಟಮ್ಮಳು ಮರಿಗಳನ್ನು ಸಾಯಿಸಿ ಸಿರಿಗಂಧದ ಸೌಧೆಯನ್ನು ಕೂಡಿ ಗವಿಯೆಲ್ಲ ಹೊಗೆಯಾಡುವಂತೆ ಮಾಡಿ ಹೊರಟು ಹೋಗಿರುವುದು ತಿಳಿದು ಬರುತ್ತದೆ.

ಮಟ ಮಟ ಮದ್ಯಾಂದಾಗ ಅಟ್ಟುತ್ತೇನ್ ಕಾಟಮ್ಮ
ಕೊಟ್ಟೀಗೆಗೆಲ್ಲ ಹೊಗೆ ಬೋಲ । ಕಾಟಮ್ಮ
ಬಾಳಿಗೆ ಸಂಬಾರ ಅರುದಾಳೊ

ತನ್ನ ಮಕ್ಕಳು ಸತ್ತಿರುವುದನ್ನು ಕಂಡು ಕರಡಿರಾಯನಿಗೆ ನೋವಾಗುತ್ತದೆ. ಕಾಟಮ್ಮ ಮೋಸ ಮಾಡಿ ಹೋಗಿರುವ ಅವಳ ಹೆಜ್ಜೆ ಗುರುತನ್ನು ಹಿಡಿದುಕೊಂಡು ಅವನು ಹಟ್ಟಿಯ ಬಳಿಗೆ ಬರುತ್ತಾನೆ. ಅಲ್ಲಿ ಕಾಟಮ್ಮಳಿಗಾಗಿ ಕಾದು ಕೂರುತ್ತಾನೆ.

ಮಾವನ ಹಟ್ಟೀಲಿ ಆರಾಳು ಹೆಣ್ಣುಗಳು
ನಾರಿಯಂತೋರೆ ಬರಲಿಲ್ಲ। ಅಂಬೂತ
ಕರಡಯ್ಯ ಆಡಾಡಿ ಅಳುತಾನೂ

ಎಷ್ಟೇ ಕಾದರೂ ಕಾಟಮ್ಮಳಂಥವರು ಕರಡಿರಾಯನ ಕಣ್ಣಿಗೆ ಬೀಳಲಿಲ್ಲ. ಅವನು ಕಾಟಮ್ಮಳ ದಾರಿ ಕಾದು–ಕಾದು ಕೊನೆಗೆ ಆಕೆ ಬರದಿದ್ದಾಗ, ಕಾಟಮ್ಮಳು ಮೋಸಮಾಡಿದಳೆಂಬುದು ಆತನಿಗೆ ಸ್ಪಷ್ಟವಾಗುತ್ತದೆ. ಇದರಿಂದಾಗಿ ನೊಂದ ಕರಡಿರಾಯನು "ನಿನ್ನ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳು ಕರಡಿ ಮರಿಗಳಾಗಲಿ" ಎಂದು ಶಾಪವನ್ನು ಹಾಕುತ್ತಾನೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ನೊಂದ ಕರಡಿರಾಯನು ಮುಂದೆ ಏನಾದ ಎಂಬ ವಿವರ ಕಾವ್ಯದಲ್ಲಿ ಕಾಣಿಸುವುದಿಲ್ಲ. ಆದರೆ ಮೊದಲೇ ತೀರ್ಮಾನಿಸಿದಂತೆ ಮಾರಗೊಂಡನಿಗೆ ಕಾಟಮ್ಮನನ್ನು ಕೊಟ್ಟು ಮದುವೆ ಮಾಡಲಾಗುತ್ತದೆ. ಒಂದು ವರ್ಷದ ಬಳಿಕ ಕಾಟಮ್ಮಳು ಗರ್ಭ ಧರಿಸುತ್ತಾಳೆ. ಆದರೆ ಆಕೆಯ ಹೊಟ್ಟೆಯಲ್ಲಿ ಕರಡಿ ಮರಿಗಳು ಹುಟ್ಟುತ್ತವೆ. ಗಾಬರಿಗೊಂಡ ಹಿರಿಯರು ಶಾಸ್ತ್ರವನ್ನು ಕೇಳುತ್ತಾರೆ.

ಅಡವೀಯ ಕರಡಿ ಹೊಡೆದ ಕಾರಣದಿಂದ
ಅಡದ ಮಕ್ಕಳಿಗೆ ರುಜುವಿಲ್ಲ। ಮಾರಾಗೊಂಡ
ಕರಡಿ ಬುಳ್ಳನೆಸರ ಕರಿಯೆಂದ

ಕರಡಿಯ ಶಾಪದಿಂದಲೇ ಕಾಟಮ್ಮಳಿಗೆ ಕರಡಿ ಮರಿಗಳು ಜನಿಸಿದವು. "ಮುಂದೆ ಹುಟ್ಟುವ ಮಗುವಿನ ಹೆಸರನ್ನು 'ಕರಡಿ ಬುಳ್ಳಪ್ಪ' ಎಂದು ಕರೆದರೆ ಸಮಸ್ಯೆ ಪರಿಹಾರವಾಗುತ್ತದೆ" ಎಂಬುದನ್ನು ಜೋಯಿಸರು ಹೇಳುತ್ತಾರೆ. ಹೀಗಾಗಿ ಮುಂದೆ ಕಾಟಮ್ಮಳಿಗೆ ಹುಟ್ಟುವ ಮಗುವನ್ನು 'ಕರಡಿ ಬುಳ್ಳಪ್ಪ' ಎಂದು ಕರೆಯಲಾಯಿತು. ಕರಡಿ ಬುಳ್ಳಪ್ಪನ ವಂಶದವರೇ ಮುಂದೆ ಕರಡಿಗೊಲ್ಲರಾಗುತ್ತಾರೆ. ಕರಡಿ ಬುಳಪ್ಪನನ್ನು ಕುರಿತು ಬೇರೆ ಬೇರೆ ಸಂದರ್ಭದಲ್ಲಿ ಹುಟ್ಟಿಕೊಂಡ ಅನೇಕ ಕತೆಗಳು ಮತ್ತು ಅವನ ವಂಶಾವಳಿಗೆ ಸಂಬಂಧಿಸಿದಂತೆ ಐತಿಹ್ಯಗಳು ದೊರೆತಿವೆ.

ಮೊದಲೇ ಹೇಳಿದಂತೆ ಕರಡಿಗೊಲ್ಲ ಬೆಡಗಿನ ಹುಟ್ಟಿನ ಕುರಿತ ಗದ್ಯರೂಪದ ಕಥೆಯನ್ನು ಮೀರಾಸಾಬಿಹಳ್ಳಿ ಶಿವಣ್ಣನವರು ತಮ್ಮ 'ಕಾಡುಗೊಲ್ಲರ ಕಾವ್ಯಗಳು' ಕೃತಿಯಲ್ಲಿ ನೀಡಿದ್ದಾರೆ. ಆದರೆ ಅದರಲ್ಲಿ ಕಾಟಮ್ಮಳು ಚಂದಮುತ್ತಿಯ ಮಗಳೆಂದು ಹೇಳಲಾಗಿದೆ. ಮಾತ್ರವಲ್ಲ ಕಾಟಮ್ಮಳನ್ನು ಹೊತ್ತುಕೊಂಡು ಹೋಗಿರುವುದು ಬಂಟನಗವಿಯ ಕರಡಿಯೆಂದು ಹೇಳಲಾಗಿದೆ. ಕರಡಿಯು ತನ್ನ ಮೈ ಸುಟ್ಟುಕೊಂಡ ನಂತರ ಮಲೆನಾಡಿಗೆ ಹೋಗುವುದಾಗಿಯೂ ಹೇಳಿದ್ದಾರೆ. ಹಾಗೆಯೇ ಇಲ್ಲಿ ಕಾಟಮ್ಮಳು ಗವಿಯಲ್ಲಿರುವುದರ ಸುಳಿವು ಮ್ಯಾಕೆಮಾರಗೊಂಡನಿಗೆ ಮೊದಲೇ ಸಿಕ್ಕಿರುತ್ತದೆ. ಮಲೆನಾಡಿನಿಂದ ಹಿಂದಿರುಗಿದ ಕರಡಿ ತನ್ನ ಮಕ್ಕಳನ್ನು ಕೊಂದ ಸೇಡು ತೀರಿಸಿಕೊಳ್ಳಲು ಬಂದಾಗ ಮ್ಯಾಕೆ ಮಾರಗೊಂಡನ ಕೈಗೆ ಸಿಕ್ಕಿ ಸಾಯುತ್ತದೆ ಎಂದಿದ್ದಾರೆ. ಆದರೆ ಪ್ರಸ್ತುತ ಕೃತಿಯು ಒಳಗೊಂಡಿರುವ ಗೀತಸಾಹಿತ್ಯವು ಕಾಟಮ್ಮಳ ಪೂರ್ವಜರ ಕುರಿತಂತೆ ಯಾವುದೇ ಮಾಹಿತಿಯನ್ನು ನೀಡುವುದಿಲ್ಲ. ಬಂಟನಗವಿಯ ಪ್ರಸ್ತಾಪವೂ ಇದರಲ್ಲಿ ಬರುವುದಿಲ್ಲ. ಮಲೆನಾಡಿನ ಪ್ರಸ್ತಾಪವೂ ಇಲ್ಲಿ ಇಲ್ಲ. ಬದಲಾಗಿ "ಬಡಸೀಮೆಗೋಗಿ ಉದ್ದಿನೇರ ತರುತೀನಿ ಕಾಟಿ ನೀ ಜತುನ ಗವಿ ಜತುನ" ಎಂದು ಕರಡಿಯು ಬಡಸೀಮೆಗೆ ಹೋಯಿತೆಂಬುದಾಗಿದೆ. ಕಾಟಮ್ಮಳು ಗವಿಯಲ್ಲಿ ಸಿಕ್ಕಿ ಹಾಕಿಕೊಂಡ ಯಾವ ಸೂಚನೆಯೂ ಮ್ಯಾಕೆಮಾರಗೊಂಡನಿಗೆ ಇರುವುದಿಲ್ಲ. "ಮ್ಯಾಕೆಮಾರಗೊಂಡ ಮ್ಯಾಕೆ ಮೇಸಾಲೋಗಿ, ಸಿಕ್ಕುಟ್ಟದ ಮ್ಯಾಲೆ ಕೊರಳೂಡಿ ಊದಲುವಾಗ ಕಾಟಮ್ಮ ಆಡ್ಯಾಡಿ ಅಳುತಾಳೊ" ಎನ್ನುವುದರಲ್ಲಿ ಈ ಅಂಶ ಸ್ಪಷ್ಟವಾಗುತ್ತದೆ. ಕಾವ್ಯದ ಕೊನೆಯಲ್ಲಿ ಕರಡಿ ಸಾಯುವ ಪ್ರಸಂಗವಿಲ್ಲ. ಬದಲಾಗಿ ಕರಡಿಯು ಕಾಟಮ್ಮಳ ಮೋಸದಿಂದ ನೊಂದುಕೊಳ್ಳುತ್ತದೆ ಎಂಬ ವಿಷಯವಷ್ಟೇ ಸೇರಿಕೊಂಡಿದೆ.

ತಾಳಿ ಕಟ್ಟದ ಕರಡಿ ಗೊಲ್ಲರು ಮತ್ತು ತಾಳಿ ಕಟ್ಟುವ ಕರಡಿಗೊಲ್ಲರು (ಮಾರನವರ ಗೊಲ್ಲರು)

ಈಗಾಗಲೇ ನಾವು ಕರಡಿಗೊಲ್ಲರ ಬೆಡಗಿನ ಹುಟ್ಟಿನ ಕುರಿತಂತೆ ಹಲವು ವಿಚಾರಗಳನ್ನು ದೊರಕಿರುವ ಸಾಹಿತ್ಯದ ಮುಖಾಂತರ ಗಮನಿಸಿದ್ದೇವೆ. ಕರಡಿ ಗೊಲ್ಲರ ಇಬ್ಬರು ಅಣ್ಣತಮ್ಮಂದಿರು ವಿಭಾಗಗೊಂಡು 'ಮಾರನವರ ಗೊಲ್ಲರು' ಎಂಬ ಮತ್ತೊಂದು ಬೆಡಗು ರೂಪುಗೊಳ್ಳುತ್ತದೆ. ಕಾಡುಗೊಲ್ಲ ಹೆಣ್ಣುಮಗಳಾದ ಕಾಟಮ್ಮಳ ಬದುಕಿನಲ್ಲಿ ಸಂಭವಿಸಿದ ಆಕಸ್ಮಿಕ ಘಟನೆಯೊಂದು ಕರಡಿಗೊಲ್ಲ ಬೆಡಗಿನ ಹುಟ್ಟಿಗೆ ಕಾರಣವಾಯಿತು. ಹಾಗೆಯೇ ಈ ಕರಡಿಗೊಲ್ಲ ಬೆಡಗಿನ ಸೋದರರಿಬ್ಬರ ನಡುವೆ ಮನಸ್ತಾಪವುಂಟಾಗಿ ಅವರು ಪರಸ್ಪರ ಬೇರೆಯಾಗಿ ತಾಳಿಕಟ್ಟುವ ಕರಡಿಗೊಲ್ಲರು ಹಾಗೂ ತಾಳಿ ಕಟ್ಟದ ಕರಡಿಗೊಲ್ಲರು(ಮಾರನವರ ಗೊಲ್ಲರು) ಎಂಬ ಎರಡು ಬೆಡಗುಗಳು ರೂಪುಗೊಂಡವು. ಇವರು ತಮ್ಮದೇ ಆದ ಗುಡಿಕಟ್ಟುಗಳನ್ನೂ ರಚಿಸಿಕೊಂಡರು. ಈ ಕುರಿತ ಕಥೆಯನ್ನು ಒಳಗೊಂಡ ಗೀತಸಾಹಿತ್ಯವನ್ನು ಇಲ್ಲಿ ನೀಡಲಾಗಿದೆ, ಚಿತ್ರದುರ್ಗ ಭಾಗದಲ್ಲಿ ದೊರೆತ ಈ ಗೀತಸಾಹಿತ್ಯವು ಒಂದು ಅಪರೂಪದ ಸಂಗ್ರಹವಾಗಿದೆ. ಈ ಬೆಡಗಿನ ಕುರಿತಂತೆಯೂ ಹಲವಾರು ವಿಚಾರಗಳು ಈವರೆಗೆ ಚರ್ಚಿತವಾಗಿವೆ. ತೀ. ನಂ. ಶಂಕರನಾರಾಯಣ ಅವರು ಈ ಬೆಡಗಿನ ಕುರಿತಂತೆ ಐತಿಹ್ಯವೊಂದನ್ನು ನೀಡಿದ್ದು, ಅದು ಭಿನ್ನ ಕಥೆಯೊಂದನ್ನು ನಿರೂಪಿಸುತ್ತದೆ. ಆ ಐತಿಹ್ಯವನ್ನು ಈ ಕೃತಿಯ ಅನುಬಂಧದಲ್ಲಿ ನೀಡಲಾಗಿದೆ.

ಕಾಟಮ್ಮ ಹಾಗೂ ಮ್ಯಾಕೆ ಮಾರಗೊಂಡರ ವಂಶದಿಂದ ಹುಟ್ಟಿದ ಕರಡಿ ಬುಳ್ಳಪ್ಪನಿಗೆ ಇಬ್ಬರು ಮಕ್ಕಳು.[3] ಒಬ್ಬ ಚಿತ್ತಮುತ್ತಿ ಮತ್ತು ಇನ್ನೊಬ್ಬ ಮಾರಮುತ್ತಿ. ಈ ಇಬ್ಬರು ಅಣ್ಣತಮ್ಮಂದಿರ ನಡುವೆ ಅನ್ಯೋನ್ಯವಾದ ಸಂಬಂಧವಿರುತ್ತದೆ. ಇವರಿಬ್ಬರು ಜೊತೆಯಾಗಿ ಬದುಕುತ್ತಿರುವಾಗ ಆ ಪಟ್ಟಣಕ್ಕೆ ಮುತ್ತಿನ ಶೆಟ್ಟಿಯೊಬ್ಬ ಮುತ್ತು ರತ್ನಗಳನ್ನು ಮಾರಿಕೊಂಡು ಬರುತ್ತಾನೆ. ಮುತ್ತಿನ ಶೆಟ್ಟಿ ಪಟ್ಟಣ ತಲುಪುವಷ್ಟರಲ್ಲಿ ಇದ್ದಕಿದ್ದಂತೆ ಮಾಯದ ಮಳೆಯಾಗುತ್ತದೆ.

"ಚಿತ್ತುಮುತ್ತಿ ಪಟ್ಟಣಕೆ ಬರುವಾಗ ಮುತ್ತಿನಶೆಟ್ಟಿ
ಮಾಯಾದ ಮಳೆಯೆ ಸುರುದಾವೋ
ಮಾಯಾದ ಮಳೆಯೆ ಸುರಿದವು। ಮುತ್ತಿನಶೆಟ್ಟಿ
ಊರುಮುಂದೆ ಏರು ಇಳಿಸೀದ"

ಇಲ್ಲಿ 'ಮಾಯಾದ ಮಳೆ' ಎಂಬುದು ಮುಂದೆ ನಡೆಯುವ ಯಾವುದೋ ಘಟನೆಗೆ ಪೂರ್ವ ಸೂಚನೆಯಾಗಿ ಕಂಡು ಬರುತ್ತದೆ. ಈ ಬಗೆಯ ಮುನ್ನೆಚ್ಚರಿಕೆಗಳನ್ನು ಹಲವು ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಕಾಣುತ್ತೇವೆ. ಕನಸುಗಳು, ಆಕಸ್ಮಿಕ ಘಟನೆಗಳು,

ಪ್ರಕೃತಿ ವಿಕೋಪ ಮೊದಲಾದವುಗಳು ಇಂಥ ಪ್ರಕ್ರಿಯೆಗಳಿಗೆ ಉದಾಹರಣೆಯಾಗಿ ಕಂಡು ಬರುತ್ತದೆ. ಇವುಗಳನ್ನು ಜನಪದರು 'ಶಕುನ'ಗಳೆಂದು ಗುರುತಿಸಿದ್ದಾರೆ. ಇದ್ದಕಿದ್ದಂತೆ ಬಂದ ಮಾಯಾದ ಮಳೆಯಿಂದಾಗಿ ಮುತ್ತಿನ ಶೆಟ್ಟಿಯು ಊರಮುಂದೆಯೇ ಏರನ್ನು ಇಳಿಸಿ, ತಾನೂ ಊರ ಮುಂದಲ ಚಾವಡಿಯಲ್ಲಿ ಮಲಗಿ ನಿದ್ರಿಸುತ್ತಾನೆ. ಈ ಸಮಯದಲ್ಲಿ ಈತನ ಎತ್ತುಗಳ ಸಹಿತ ಮುತ್ತು ರತ್ನಗಳು ಕಳುವಾಗಿ ಬಿಟ್ಟಿರುತ್ತವೆ. ಮಲಗಿದ್ದ ಮುತ್ತಿನ ಶೆಟ್ಟಿಯು ಎಚ್ಚರವಾಗಿ ನೋಡಿದಾಗ ತನ್ನ ಮುತ್ತು ರತ್ನಗಳು ಕಳುವಾಗಿರುವುದು ತಿಳಿದುಬರುತ್ತದೆ. ಅಲ್ಲಿಂದ ಅವನು ಎತ್ತುಗಳನ್ನು, ಮುತ್ತುರತ್ನಗಳನ್ನು ಹುಡುಕಿಕೊಂಡು ಊರೂರು ಅಲೆಯುತ್ತಾನೆ. ಹಾಗೆ ಅಲೆಯುತ್ತಾ ಬಂದಾಗ ಚಿತ್ತುಮುತ್ತಿ ಮನೆಯ ಮುಂದೆ ಮುತ್ತಿನಶೆಟ್ಟಿಯ ಎತ್ತುಗಳು ನಿಂತಿರುತ್ತವೆ. ಇದರಿಂದಾಗಿ ಮುತ್ತು ರತ್ನ ಕದ್ದವರು ಚಿತ್ತುಮುತ್ತಿಯೆ ಎಂಬುದು ಮುತ್ತಿನ ಶೆಟ್ಟಿಗೆ ತಿಳಿಯುತ್ತದೆ. ಚಿತ್ತಮುತ್ತಿ ಮನೆಮುಂದೆ ಎತ್ತುಗಳನ್ನು ನೋಡಿದ ಮುತ್ತಿನ ಶೆಟ್ಟಿಯು ನೇರವಾಗಿ ದೊರೆಯ ಅರಮನೆಗೆ ಹೋಗಿ ದೂರು ಕೊಡುತ್ತಾನೆ.

ಚಿತ್ತುಮುತ್ತಿ ಮನೆಮುಂದೆ ಎತ್ತುಗಳಿದ್ದವು ಸ್ವಾಮಿ
ಮುತ್ತುರತ್ನಾವ ಕದ್ದವರೊ
ಮುತ್ತುರತ್ನಾವ ಕದ್ದವರೊ। ಚಿತ್ತುಮುತ್ತಿ
ನ್ಯಾಯಾಕೆ ದೊರೆಯೇ ಬರಬೇಕು

ಎಂದು ದೊರೆಗೆ ನ್ಯಾಯ ಕೊಡಿಸುವಂತೆ ಕೇಳಿಕೊಳ್ಳುತ್ತಾನೆ. ಇಲ್ಲಿ ಕಾಡುಗೊಲ್ಲರ ನ್ಯಾಯ ತೀರ್ಮಾನದ ವ್ಯವಸ್ಥೆಯನ್ನು ಕಾಣಬಹುದು. ಇವತ್ತಿಗೂ ಕಾಡುಗೊಲ್ಲರ ಹಟ್ಟಿಯಲ್ಲಿ ಯಾವುದೇ ತಪ್ಪು ನಡೆದರೂ ದಂಡ ತೆರುವ ಪದ್ಧತಿಯನ್ನು ಅನುಸರಿಸುತ್ತಾರೆ. ಇಲ್ಲಿಯೂ ಶೆಟ್ಟಿಯ ವಿಚಾರವಾಗಿ ಚಿತ್ತಮುತ್ತಿಯನ್ನು ಕರೆಸಿ ನ್ಯಾಯವನ್ನು ಮಾಡಲಾಗುತ್ತದೆ. ಚಿತ್ತಮುತ್ತಿ ತಾನು ಕಳ್ಳನಲ್ಲವೆಂದು ವಾದಿಸುತ್ತಾನೆ. ಎತ್ತುಗಳು ಗದ್ದೆಯಲ್ಲಿ ಮೇಯುತ್ತಿದ್ದುದರಿಂದ

ನಮ್ಮವರೆ ಹೋಗಿ ಅವುಗಳನ್ನು ಹೊಡಕೊಂಡು ಬಂದಿದ್ದಾರೆ ಎಂದು ಹೇಳುತ್ತಾನೆ. ಅದಕ್ಕೆ ದೊರೆಗಳು "ನಿಮ್ಮವರು ಹೊಡಕೊಂಡು ಬಂದರೆ, ಅವುಗಳನ್ನು ಊರ ಮುಂದೆ ಕಟ್ಟಬೇಕಿತ್ತು" ಎಂದು ಹೇಳುತ್ತಾರೆ.

ನಿಮ್ಮವರು ತಂದಾರೆ ಏನಾತೊ ಚಿತ್ತುಮುತ್ತಿ
ಊರ ಮುಂದಕೆತ್ತ ಕಟ್ಟಬೇಕೊ
ಊರ ಮುಂದಕೆತ್ತ ಕಟ್ಟುಲುತು ಕಾರಣಕಾಗಿ
ದಂಡನಿನು ಮ್ಯಾಲೆ ಬರುತೈತೋ

ಎತ್ತುಗಳನ್ನು ತನ್ನ ಅಂಗಳದಲ್ಲೇ ಇರಿಸಿಕೊಂಡಿದ್ದ ಕಾರಣವಾಗಿ ಚಿತ್ತುಮುತ್ತಿಯನ್ನು ಕಳ್ಳನೆಂದು ಪರಿಗಣಿಸಿ ಪರಿಹಾರವಾಗಿ ಆತ ಸಮತೂಕ ಬಂಗಾರ ಕೊಡಬೇಕು ಎಂದು ತೀರ್ಮಾನವಾಗುತ್ತದೆ. ಕುಲದೊರೆ ಈ ತೀರ್ಮಾನವನ್ನು ಕೊಟ್ಟಾಗ, ಚಿತ್ತಮುತ್ತಿ ತಾನು ಮುತ್ತು ರತ್ನ ಕದ್ದಿಲ್ಲವಾದರೂ ತನ್ನ ಕಡೆಯವರು ಮಾಡಿರುವ ತಪ್ಪಿಗೆ ದಂಡಕ್ಕೆ ಒಳಗಾಗಿ, ಮನೆಯಲ್ಲಿ ಇರುವ ಬೆಳ್ಳಿ ಬಂಗಾರವನ್ನೆಲ್ಲಾ ಶೆಟ್ಟಿಯ ಸಿಂತೋಲೆಗೆ ಹಾಕಿದ. ಆದರೂ ಸಿಂತೋಲು ಸಮತೂಕ ಬರಲಿಲ್ಲ. ಕಡೆಗೆ ಚಿತ್ತಮುತ್ತಿಯು ಕುಲದ ಮಾನ ಕಾಪಾಡಲು, ತಮ್ಮನಾದ ಮಾರಮುತ್ತಿಯಲ್ಲಿ ಹೆಂಡತಿಯ ತಾಳಿಯನ್ನು ಬಿಚ್ಚಿ ಕೊಡುವಂತೆ ಹೇಳುತ್ತಾನೆ. ಆದರೆ ಹೆಂಡತಿಯ ಕೊರಳ ಮಾಂಗಲ್ಯವನ್ನು ಕೊಡಲು ಮಾರಮುತ್ತಿಯು ಒಪ್ಪುವುದಿಲ್ಲ.

ಹೆಂಡರು ಕೊರಳಗುಳ ತಾಳೀಯ ಕೊಡಸಾಕೊ
ಮುತ್ತು ರತ್ನಾವ ಕದಿಲಿಲ್ವೋ
ಮುತ್ತು ರತ್ನಾವ ಕದಿಲಿಲ್ಲ ಹಿರಿಯಣ್ಣ
ಕುರಿಯಟ್ಟಿ ತಾವ ಇರಲಿಲ್ವೋ

"ಹೆಂಡತಿಯ ತಾಳಿ ಕೊಡಿಸುವುದಕ್ಕೆ ನಾನು ಮುತ್ತು ರತ್ನವನ್ನು ಕದ್ದಿಲ್ಲ. ಮಾತ್ರವಲ್ಲ ಈ ಪ್ರಸಂಗ ನಡೆಯುವಾಗ ನಾನು ಕುರಿಯಟ್ಟಿಯ ಬಳಿಯೇ ಇದ್ದೆ." ಎಂದು ತಾಳಿಯನ್ನು ಕೊಡಲು ನಿರಾಕರಿಸುತ್ತಾನೆ. ಇಲ್ಲಿ ಅಣ್ಣ ತಮ್ಮಂದಿರ ನಡುವಿನ ಮಾತು ಬಹಳ ಗಂಭೀರ ತಿರುವನ್ನು ಪಡೆದುಕೊಳ್ಳುತ್ತದೆ. 'ಹುಟ್ಟುತ್ತಾ ಅಣ್ಣತಮ್ಮಂದಿರು ಬೆಳೆಯುತ್ತಾ ದಾಯಾದಿಗಳು' ಎಂಬ ಜನಪದರ ಮಾತು ಚಿತ್ತಮುತ್ತಿ–ಮಾರಮುತ್ತಿಯರ ವಿಷಯದಲ್ಲಿ ನಿಜವಾಗುತ್ತದೆ. ಅಣ್ಣನ ಪಾಲಿನ ತಪ್ಪನ್ನು ಸರಿಪಡಿಸುವುದಕ್ಕಾಗಿ ಸಾವಿರಾರು ಕುಲದ ಜನ, ಸಮಕ್ಷಮದಲ್ಲಿ ಕಟ್ಟಿದ ತಾಳಿಯನ್ನು ಬಿಚ್ಚಿಕೊಡಲು ಮಾರಮುತ್ತಿ ನಿರಾಕರಿಸುತ್ತಾನೆ. ತಾಳಿಕೊಡಸಾಕೆ ಸುಮ್ಮಾನೆ ಮಾತೇನೊ

ಸಾವ್ರ ಕುಲಕೂಡಿ ಸ್ರಬೆಕೂಡಿ
ಸಾವ್ರ ಕುಲಕೂಡಿ ಸ್ರಬೆಗೂಡಿ। ಕಟ್ಟಿದ ತಾಳಿ
ಬಿಚ್ಚಿ ಕೊಡಲಾರೆ ಹಿರಿಯಣ್ಣ

ಚಿತ್ತಮುತ್ತಿಗೆ ತನ್ನ ಕುಲದ ಗೌರವವೇ ಮುಖ್ಯವಾಗಿರುತ್ತದೆ. ತಾಳಿಯ ವಿಚಾರವಾಗಿ ಚಿತ್ತಮುತ್ತಿ ಮಾರಮುತ್ತಿಯರ ನಡುವೆ ದೊಡ್ಡ ಅಂತರ ಮಾರ್ಪಟ್ಟು, ಅಣ್ಣ ತಮ್ಮಂದಿರು ಅಗಲುತ್ತಾರೆ. ತಾಳಿಯನ್ನು ಕೊಡದೇ ಹೊರಟು ಹೋದ ಮಾರಮುತ್ತಿಯನ್ನು ನೋಡಿ, ಚಿತ್ತಮುತ್ತಿಯು ತನ್ನ ಹೆಂಡತಿಯ ಮಾಂಗಲ್ಯವನ್ನು ತೆಗೆದು ಚಿಂತೋಲೆಗೆ ಹಾಕುತ್ತಾನೆ. ತಕ್ಷಣವೇ ಚಿಂತೋಲು ಸಮತೂಕ ಬರುತ್ತದೆ. ಇಲ್ಲಿಂದ ಚಿತ್ತಮುತ್ತಿ ಮಾರಮುತ್ತಿಯರ ನಡುವೆ ದೊಡ್ಡದೊಂದು ಬಿರುಕು ಉಂಟಾಗುತ್ತದೆ. ಆದರೆ ಅಣ್ಣತಮ್ಮಂದಿರುಗಳು ಬೇರೆ ಬೇರೆ ಬಾಳಬಾರದೆಂದು ಮತ್ತೆ ಕುಲದ ನ್ಯಾಯ ಕಲೆಯುತ್ತದೆ. ಈ ಕಥನವು ಒಂದು ಕಾಲದ ನ್ಯಾಯವ್ಯವಸ್ಥೆಯು ಸಾಮಾಜಿಕ ಹಿತದೃಷ್ಟಿಯ ನೆಲೆಯಲ್ಲಿ ವಹಿಸುತಿದ್ದ ಪಾತ್ರವನ್ನು ಒಂದು ಅಲಿಖಿತ ದಾಖಲೆಯಾಗಿ ಕಟ್ಟಿಕೊಡುತ್ತದೆ. ಹಿರಿಯರು ಸೇರಿ ನ್ಯಾಯ ಮಾಡಿ ಇಬ್ಬರು ಒಟ್ಟಿಗೆ ಬಾಳಬೇಕೆಂದು ಚಿತ್ತಮುತ್ತಿಗೆ ಹೇಳಿದಾಗ, ಚಿತ್ತಮುತ್ತಿಯು ಹಿರಿಯರ ಮಾತನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾನೆ.

ಆರು ಸಾವಿರ ಕುರಿಯಗಂಗೆ ಬಿಟ್ಹೋದವನು
ತಿರುಗೋಗಿ ಅವುನ ಕರೆದೀರೋ
ತಿರುಗೋಗಿ ಅವುನ ಕರೆದೀರಿ। ನನ ತಮ್ಮಾನು
ಸಾಲ ದಂಡಾಕೆ ಒರಗಾದ

ಇಲ್ಲಿ ಚಿತ್ತಮುತ್ತಿ ಮಾರಮುತ್ತಿಯರ ನಡುವೆ ಹೊಂದಾಣಿಕೆಯಾಗದೆ, ಮಾರಮುತ್ತಿ ಎರಡು ಗೂಡಿನಲ್ಲಿ, ಒಂದು ಗೂಡಿನ ಕುರಿಯನ್ನು ಹೊಡೆದುಕೊಂಡು, ತನ್ನ ಕುಲದೇವರನ್ನು ತೆಗೆದುಕೊಂಡು ಪಾಲೇನಹಳ್ಳಿಗೆ ಹೋಗುತ್ತಾನೆ. ಇಬ್ಬರನ್ನು ಜೊತೆಗೂಡಿಸುವ ಮಾತು ಸಾಧ್ಯವೇ ಇಲ್ಲ ಎಂಬುದನ್ನು ಸಾಹಿತ್ಯ ಬಹು ಸ್ಪಷ್ಟವಾಗಿ ತೆರೆದಿಡುತ್ತದೆ.

ಅಣ್ಣ ತಮ್ಮಗಳು ಕೂಡಬೇಕಾದಾರೊ
ಸೂರ್ಯ ಚೆಂದುಗಳೆ ಬದಲಾಗಿ
ಸೂರ್ಯ ಚೆಂದುಗಳೆ ಬದಲಾಗಿ। ಹುಟ್ಟಿದರು
ಅಣ್ಣ ತಮ್ಮುಗಳು ಕಲಿಲಿಲ್ಲ

ಸೂರ್ಯ ಚಂದ್ರರುಗಳೇ ತಮ್ಮ ದಿಕ್ಕುಗಳನ್ನು ಬದಲಾಯಿಸಿದರೂ ಸಹೋದರರು ಮಾತ್ರ ಜೊತೆ ಸೇರಲಿಲ್ಲ. ಆದರೆ ಅಗಲಿದ ಅಣ್ಣತಮ್ಮಂದಿರನ್ನು ಹಾಗೆಯೇ ಬಿಡಬಾರದೆಂದು ಹಿರಿಯರು 'ಏಳು ಊರಿನ' ನ್ಯಾಯದ ದೊರೆಗಳನ್ನು ಕರೆಸುತ್ತಾರೆ. ಚಿತ್ತಮುತ್ತಿ ಮಾರಮುತ್ತಿಯರಿಬ್ಬರನ್ನು ಕರೆಸಿ ಇಬ್ಬರಲ್ಲೂ ತಮ್ಮ ಕುರಿಯಟ್ಟಿಯ ಹಾಲನ್ನು ತರಿಸುತ್ತಾರೆ. ಅವರು ತಂದ ಹಾಲನ್ನು ಒಂದು ಕುಂಭದಲ್ಲಿ ಹಾಕಿ ಗುಂಡಿಯನ್ನು ತೋಡಿಸಿ ಕುಂಭವನ್ನು ಗುಂಡಿಯಲ್ಲಿ ಮೂರುತಿಂಗಳವರೆಗೆ ಮುಚ್ಚಿಡುತ್ತಾರೆ. "ಕುಂಭದಲ್ಲಿ ಇರುವ ಹಾಲು ಚೆನ್ನಾಗಿದ್ದರೆ ನೀವು ಒಟ್ಟಿಗೆ ಬಾಳಬೇಕು, ಹಾಲು ಒಡಕಾಗಿದ್ದರೆ ನಿಮಗೆ ಕಲೆಯುವುದಿಲ್ಲ" ಎಂದು ತೀರ್ಮಾನ ಮಾಡುತ್ತಾರೆ.

ಗುಂಡೀಯ ತೋಡಿ ಮಡಿಗ್ಯಾರೊ ಕುಲದೋರು
ಮೂರು ತಿಂಗಳೆ ಬಿಟ್ಟೆ ತಗಿಸ್ಯವರೊ
ಮೂರು ತಿಂಗಳೆ ಬಿಟ್ಟು ತೆಗೆದು। ನೋಡಲುವಾಗ
ಕುಂಬಾದಳಾಲೆ ಒಡಕಾದೊ

ಹೀಗೆ ಗುಂಡಿಯಲ್ಲಿ ಹೂತಿಟ್ಟಿದ್ದ ಕುಂಭವನ್ನು ತೆಗೆಸಿ ನೋಡಿದಾಗ ಕುಂಭಲ್ಲಿರುವ ಹಾಲು ಒಡಕಾಗಿರುತ್ತದೆ, ಆಗ ಕುಲದವರು "ಇನ್ನು ಮುಂದೆ ನೀವಿಬ್ಬರು ಕೂಡಿ ಬಾಳುವುದು ಸಾಧ್ಯವಿಲ್ಲ" ಎಂಬುದಾಗಿ ಹೇಳುತ್ತಾರೆ. ನಂತರ ಮಾರಮುತ್ತಿ ಪಾಲೇನಳ್ಳಿಗೆ ವಾಪಾಸಾಗುತ್ತಾನೆ. ಚಿತ್ತಮುತ್ತಿ ನಂದಿಹಳ್ಳಿಯ ಕಡೆ ಹೊರಡುತ್ತಾನೆ. ತಮ್ಮನಾದ ಮಾರಮುತ್ತಿಯ ಜೊತೆಗೆ ಹೋದ ಚಿತ್ರದೇವರನ್ನು ನೋಡಿ ಚಿತ್ತಮುತ್ತಿಯು ನೊಂದು ಕುಂಭದಲ್ಲಿದ್ದ ಒಡೆದ ಹಾಲನ್ನು ಒಂದು ಮಂಗಾರೆಯ ಗಿಡದ ಬುಡಕ್ಕೆ ಎರಚುತ್ತಾನೆ. ಅಲ್ಲಿ ಇದ್ದಕ್ಕಿದ್ದಂತೆ ನಿಜಲಿಂಗವೊಂದು ಉದ್ಭವಿಸುತ್ತದೆ.

ಕುಂಭಾದಗಿರುವೊ ಒಡದಾಲ ಸಿತ್ತುಮುತ್ತೊ ಮಂಗಾರೆ ಗಿಡುಕೆ
ಎರುದಾನೆ
ಮಂಗಾರೆ ಗಿಡುಕೆ ಎರಸಿ। ನೋಡಲುವಾಗ
ನಿಜಲಿಂಗ ಫಳ ಫಳನೆ ನಗುತಾವೊ

ಚಿತ್ತಮುತ್ತಿಯು ಈ ಆಶ್ಚರ್ಯವನ್ನು ಕಂಡು ಭಕ್ತಿಯಿಂದ ಕೈ ಮುಗಿದು ಆ ಲಿಂಗಕ್ಕೆ 'ಚಿತ್ತಯ್ಯಾ' ಎಂದು ಹೆಸರಿಡುತ್ತಾನೆ. ಈ ದೇವರನ್ನು 'ಮಾಲಿಂಗ' ಎಂದೂ ಕರೆಯಲಾಗುತ್ತದೆ. 'ಮಂಗಾರೆ' ಗಿಡದಲ್ಲಿ ಹುಟ್ಟಿದ್ದಕ್ಕೆ 'ಮಂಗರಾಯ ಚಿತ್ರದೇವರು' ಎಂದೂ ಕರೆಯಲಾಗುತ್ತದೆ. ನಂತರ ಆ ಲಿಂಗವನ್ನು ತಗೆದುಕೊಂಡು ಬಂದು 'ಮದ್ದನಕುಂಟೆ'ಯಲ್ಲಿ ನೆಲೆಮಾಡುತ್ತಾನೆ. 'ಮದ್ದನಕುಂಟೆ'[೪]ಯನ್ನು ಈ ಚಿತ್ರ ದೇವರ ಪೌಳಿಯನ್ನಾಗಿ ಮಾಡಿಕೊಳ್ಳುತ್ತಾನೆ. ಆದರೂ ಅಣ್ಣ ತಮ್ಮಂದಿರ ನಡುವಿನ ಸಮಸ್ಯೆ ಇಲ್ಲಿಗೆ ಬಗೆಹರಿಯುವುದಿಲ್ಲ. ಮಾರಮುತ್ತಿಯು ತಗೆದುಕೊಂಡು ಹೋದ ಚಿತ್ರದೇವರಲ್ಲಿ ನನಗೂ ಭಾಗ ಬರಬೇಕು ಎಂದು ಚಿತ್ತುಮುತ್ತಿಯು ಕಟ್ಟು ಕರಾರು ಬರೆಸುತ್ತಾನೆ. ಇದರಿಂದಾಗಿ ಹೊಸ ಬಗೆಯ ಸಂಪ್ರದಾಯವೊಂದು ರೂಪುಗೊಳ್ಳುತ್ತದೆ. ಮುತ್ತಿನಶೆಟ್ಟಿಗೆ ತನ್ನ ಹೆಂಡತಿಯ ತಾಳಿಯನ್ನು ಕೊಟ್ಟ ಚಿತ್ತುಮುತ್ತಿಯ ಕ್ರಮವನ್ನು ಒಪ್ಪಿದ ಆತನ ಕುಲದವರು ಹಳೆಯ ಪದ್ಧತಿಯನ್ನು ಬಿಟ್ಟು, ತಮ್ಮ ಮದುವೆಯಲ್ಲಿ ತಾಳಿ ಕಟ್ಟುವ ಪ್ರಕ್ರಿಯೆಯನ್ನು ನಿಲ್ಲಿಸಿಬಿಟ್ಟರು. ಹಾಗೂ ತನ್ನ ಕ್ರಮವನ್ನು ಒಪ್ಪಿದ ಮಂದಿಯನ್ನು ತನ್ನ ಕುಲದಲ್ಲಿಯೇ ಉಳಿದುಕೊಳ್ಳಬೇಕೆಂದು ಹೇಳುತ್ತಾನೆ. ಹಾಗೂ ತಾಳಿ ಕಟ್ಟದವರನ್ನು 'ನಂದಿಹಳ್ಳಿ' ಎಂಬ ಗುಡಿಕಟ್ಟಿಗೆ ಕರೆಯುತ್ತಾನೆ.

ಮದುವೆಯಲ್ಲಿ ತಾಳಿಕಟ್ಟಲೇಬೇಕೆಂದು ಬಯಸುವವರು ಮಾರಮುತ್ತಿಯ ಜೊತೆ ಹೋಗಬೇಕೆಂದು ಆಜ್ಞೆ ಹೊರಡಿಸುತ್ತಾನೆ. ಮುತ್ತಿನ ಶೆಟ್ಟಿಗೆ ಹೆಂಡತಿಯ ತಾಳಿಯನ್ನು ಕೊಡದ ಮಾರಮುತ್ತಿ ಹಾಗೂ ಆತನ ಕ್ರಮವನ್ನು ಒಪ್ಪಿದವರು ಮದುವೆ ಸಮಾರಂಭದಲ್ಲಿ ತಾಳಿ ಕಟ್ಟುವ ಸಂಪ್ರದಾಯವನ್ನು ಉಳಿಸಿಕೊಳ್ಳುತ್ತಾರೆ. ಮುಂದೆ ಇದೇ

ಸಂಪ್ರದಾಯವನ್ನು ಈ ಎರಡು ಬೆಡಗಿನವರು ಅನುಸರಿಸುತ್ತಾರೆ. ಕಳ್ಳತನದ ಕಾರಣದಿಂದಾಗಿ ಸಹೋದರರು ಬೇರೆಯಾಗಿ ಹೊಸ ಬೆಡಗೊಂದು ಸೃಷ್ಟಿಯಾದುದು ಈ ಸಾಹಿತ್ಯ ವಿವರಿಸುವ ಮಹತ್ವದ ಸಂಗತಿ. ಮಾತ್ರವಲ್ಲ ಕುಟುಂಬ ವೈಷಮ್ಯವೊಂದು ಸಾಂಪ್ರದಾಯಿಕ ಬದಲಾವಣೆಗಳಿಗೆ ಕಾರಣವಾದ ಬಗೆ ಗಮನಾರ್ಹವಾದುದು ಇಂದಿಗೂ ಕರಡಿ ಗೊಲ್ಲರು ಮದುವೆಯಲ್ಲಿ ತಾಳಿ ಕಟ್ಟುವುದಿಲ್ಲ. ಕೇವಲ ಒಂದು ಹೂವಿನ ಹಾರ ಅಥವಾ ಅರಿಶಿಣದ ಕೊಂಬನ್ನು ಹೆಣ್ಣಿನ ಕೊರಳಿಗೆ ತಾಳಿಯ ಬದಲಿಗೆ ಕಟ್ಟಲಾಗುತ್ತದೆ. ಈಗಲೂ ಮಾರನವರ ಗೊಲ್ಲರಲ್ಲಿ ತಾಳಿಕಟ್ಟುವ ಸಂಪ್ರದಾಯವು ಮುಂದುವರೆದಿದೆ. ಆದರೆ ಗುಡಿಕಟ್ಟಿನ ದೇವರುಗಳಿಗೆ ಎರಡೂ ಬೆಡಗಿನವರು ಹೋಗಿ ಬರುತ್ತಾರೆ. ಮಾರನವರ ಗೊಲ್ಲರ ಬೆಡಗಿನಲ್ಲಿ ಯಾರಾದರು ಸತ್ತರೆ, ಕರಡಿ ಗೊಲ್ಲರು ಅವರ ಕೂಳು ತಿನ್ನುವುದಿಲ್ಲ. ತಾಳಿ ಕಟ್ಟುವ ಕರಡಿಗೊಲ್ಲರಲ್ಲಿ ಯಾರಾದರೂ ಸತ್ತರೆ ಮಾರನವರ ಗೊಲ್ಲರು ಆ ಬೆಡಗಿನವರ ಮನೆಯ ಕೂಳನ್ನು ತಿನ್ನುವುದಿಲ್ಲ. ಹೂಳುವ ಸಂದರ್ಭದಲ್ಲಿ ಮಣ್ಣನ್ನು ಮಾತ್ರ ಹಾಕುತ್ತಾರೆ. ತಾಳಿ ಕಟ್ಟದ ಕರಡಿಗೊಲ್ಲರು ನಂದಿ ಹಳ್ಳಿಯನ್ನು ಗುಡಿಕಟ್ಟನ್ನಾಗಿಸಿಕೊಂಡ ಮೇಲೆ, ರಂಗಪ್ಪನನ್ನು ಆರಾಧಿಸುತ್ತಾರೆ. ಆದರೆ ಚಿತ್ರದೇವರೇ ಇವರಿಗೆ ಅಮಾವಾಸೆ ದೇವರಾಗಿದ್ದಾನೆ. ರಂಗಪ್ಪ ವಿಷ್ಣುವಿನ ಅವತಾರವಾಗಿರುವುದರಿಂದ ಇಡೀ ಕುಲದ ಆರಾಧ್ಯ ದೈವವನ್ನಾಗಿ ರಂಗಪ್ಪನನ್ನೇ ಪೂಜಿಸುತ್ತಾರೆ. ತಿಮ್ಮಪ್ಪ, ಕಂಬದ ರಂಗ, ನಾಮದಯ್ಯ ಎಂಬ ಹೆಸರುಗಳಿಂದಲೂ ಈ ದೇವರನ್ನು ಕರೆಯುತ್ತಾರೆ. ಮಾಯಚಂದ್ರದ ಕರಿಯಮ್ಮ, ಹಟ್ಟಿಲಕ್ಕಮ್ಮ, ಕಾಟಮ್ಮ ಮೊದಲಾದವು ಕಾಡುಗೊಲ್ಲರು ಆರಾಧಿಸುವ ಹೆಣ್ಣು ದೇವತೆಗಳಾಗಿವೆ. ಮಾರನವರ ಗೊಲ್ಲರಿಗೆ ಪಾಲೇನಳ್ಳಿಯೆ ಗುಡಿಕಟ್ಟು, ಮಾತ್ರವಲ್ಲ ಇವರು ಅಮವಾಸೆ ದೇವರಾಗಿ ಚಿತ್ರ ದೇವರನ್ನೇ ಪೂಜಿಸುತ್ತಾರೆ. ಮಾರಮ್ಮನನ್ನು ಹೆಣ್ಣು ದೇವರಾಗಿ ಪೂಜಿಸುತ್ತಾರೆ. ಉಳಿದಂತೆ ಆಯಾ ಪ್ರದೇಶಗಳಿಗನುಗುಣವಾಗಿ ಹೆಸರುಗಳಲ್ಲಿ ವ್ಯತ್ಯಾಸಗಳಾದುದನ್ನು ಕಾಣಬಹುದಾಗಿದೆ. ಉದಾ: ಗೌರಸಂದ್ರದ ಮಾರಕ್ಕ, ಗೊಲ್ಲನ ಕುಂಟೆಯ ಏಳಟ್ಟಿ ಕರಿಯಮ್ಮ, ದೊಡ್ಡೇರಿ ಕರಿಯಮ್ಮ, ಬೇವಿನಳ್ಳಿ ಕರಿಯಮ್ಮ ಈ ರೀತಿಯ ಹೆಸರುಗಳಿಂದಲೂ ಇವರು ಹೆಣ್ಣು ದೇವರುಗಳನ್ನು ಪೂಜಿಸುತ್ತಾರೆ. ಕಾಡುಗೊಲ್ಲರಲ್ಲಿ ಮುಖ್ಯವಾಗಿ ಮೂರು ಕುಲ[೫] ಗಳನ್ನು ಕಾಣಬಹುದಾಗಿದ್ದು ಮೊದಲೇ ಹೇಳಿದಂತೆ ಚಿತ್ತಮುತ್ತಿ ಕುಲ, ಚಂದಮುತ್ತಿ ಕುಲ, ರಾಮೇಗೌಡನ ಕುಲ ಎಂಬುದು ಪ್ರಮುಖವಾದವು. ಚಿತ್ತಮುತ್ತಿ ಕುಲದಲ್ಲಿ ಕರಡಿಗೊಲ್ಲರು (ತಾಳಿ ಕಟ್ಟುವವರು), ಮಾರನವರ ಗೊಲ್ಲರು (ತಾಳಿ ಕಟ್ಟದವರು) ಎಂಬ ಎರಡು ಬೆಡಗುಗಳು ಇರುವುದು ಈಗಾಗಲೇ ನಮ್ಮ ಕೃತಿಯಿಂದ ತಿಳಿದು ಬಂದಿದೆ. ಚಂದಮುತ್ತಿ ಕುಲದಲ್ಲಿ ಸನ್ನರ ಗೊಲ್ಲರು, ಸೋಮನವರ ಗೊಲ್ಲರು, ಬೊಮ್ಮನವರ ಗೊಲ್ಲರು, ಕೋಣನವರ ಗೊಲ್ಲರು, ಪೋಲನವರ ಗೊಲ್ಲರು, ಎಗಡಿನವರ ಗೊಲ್ಲರು ಹಾಗೂ ಅಜ್ಜಿಯವರ ಗೊಲ್ಲರು ಎಂಬ ಬೆಡಗುಗಳು ರೂಪುಗೊಂಡಿರುವುದನ್ನು ಕಾಣಬಹುದು. ಹಾಗೆಯೇ ರಾಮೇಗೌಡನ ಕುಲದಲ್ಲಿ ಆರೇನವರ ಗೊಲ್ಲರು, ಮೇರೇನವರ ಗೊಲ್ಲರು, ಕಂಬಿಯವರ ಗೊಲ್ಲರು, ಕಹಳೆಯವರ ಗೊಲ್ಲರು, ಒಡೆಯರ ಗೊಲ್ಲರು, ಒನಕೆಯರ ಗೊಲ್ಲರು, ಚೀರನವರ ಗೊಲ್ಲರು ಹಾಗೂ ಮಾಸಿನವರ ಗೊಲ್ಲರು ಎಂಬ ಬೆಡಗುಗಳು ರೂಪುಗೊಂಡಿವೆ. ಒಟ್ಟಿನಲ್ಲಿ ಈ ಕೃತಿಯ ಮೂಲಕ ಕಾಡುಗೊಲ್ಲ ಸಮುದಾಯದ ಕೆಲವು ಅಪರೂಪದ ಮಾಹಿತಿಗಳನ್ನು ನೀಡುವ ಪ್ರಯತ್ನ ಮಾಡಿದ್ದೇವೆ.

ಅಡಿಟಪ್ಪಣಿಗಳು

೧. 'ಗೊಲ್ಲರ ಇತಿಹಾಸ ಕಥನ' ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ. ಮಂಟಪ ಮಾಲೆ *೨೫೬* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ.೨೦೧೧ ಪುಟ ೧೪.

೨. (ಡೆಲ್ಲಿಯಲ್ಲಿ ಕಾಡುಗೊಲ್ಲ ಹೆಣ್ಣು ಮಕ್ಕಳು ಹಾಲು ಮೊಸರು ಮಾರುವಾಗ ದೆಹಲಿ ನವಾಬನ ದೃಷ್ಟಿ ಇವರ ಮೇಲೆ ಬಿದ್ದಿತು ಎಂಬ ಐತಿಹ್ಯವನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.)

೩. ವಕ್ತೃವುಬ್ಬರ ಪ್ರಕಾರ ಕರಡಿಬುಳ್ಳಪ್ಪನಿಗೆ ಇಬ್ಬರು ಹೆಂಡತಿಯರು. ಅವರಲ್ಲಿ ಹಿರಿಯವಳು ಬಾಲಮ್ಮ, ಕಿರಿಯವಳು ನಾಗಮ್ಮ. ಹಿರಿಯವಳಾದ ಬಾಲಮ್ಮನಿಗೆ ಚಿತ್ತುಮುತ್ತಿ ಮಾರಮುತ್ತಿ ಹುಟ್ಟಿದರು ಎಂದೂ ಹೇಳಲಾಗುತ್ತದೆ.

೪. ಮದ್ದನಕುಂಟೆಯು ಮಡಕ ಶಿರಾ ತಾಲೂಕಿನ ಅಮರಾಪುರದ ಹತ್ತಿರ ಬರುತ್ತದೆ.

೫. ಸ.ಚಿ.ರಮೇಶ್, *ದಕ್ಷಿಣ ಭಾರತೀಯ ಜಾನಪದ ಕೋಶ –ಸಂಪುಟ –೧,* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೧

ಕರಡಿಗೊಲ್ಲ ಬೆಡಗಿನ ಪದ

ಹೊತ್ಲುಂಟೆ ಎದ್ದು ಕೈಕಾಲು ಮಕುವಾತೊಳೆದು
ಬಂದುಲುವ ತೊಳೆದು ಕಡೆಗಿರಿಸಿ
ಬಂದುಲುವ ತೊಳೆದು ಕಡೆಗಿರಿಸಿ। ಕಾಟಮ್ಮ
ಕೆಂದಾವಿನ ಮೊಸರ ಸುರಿದಾಳೊ

ಕೆಂದಾವಿನ ಮೊಸರ ಸುರಿದಾಳೆ ಕಾಟಮ್ಮ
ವಜ್ರಮಾಣಿಕದ ಕಡಗೋಲು
ವಜ್ರಮಾಣಿಕದ ಕಡಗೋಲ। ತಕ್ಕೊಂಡು
ಕೆಂದಾವಿನ ಮೊಸರ ಕಡೆದಾಳೊ

ಕೆಂದಾವಿನ ಮೊಸರ ಕಡೆದಾಳೊ ಕಾಟಮ್ಮ
ಗುಜ್ಜರಿ ಮಾಣುಕದ ಗುದಿಯಗ್ಗ
ಗುಜ್ಜರಿ ಮಾಣುಕದ ಗುದಿಯಗ್ಗ। ತಕ್ಕೊಂಡು
ರೆಟ್ಟಾಡಿ ಮೊಸರ ಕಡೆದಾಳೊ

ಕಾಲಾಡಿ ಕೈಯಾಡಿ ತೋಳಾಡಿ ಬುಜವಾಡಿ
ನಾಗರೆಡೆಯಂಗೆ ನೆಡವಾಡಿ
ನಾಗರೆಡೆಯಂಗೆ ನೆಡವಾಡಿ। ಸರಸತಿಯೆ
ಬೆಟ್ಟಾಡಿ ಬೆಣ್ಣೆ ತೆಗೆದಾಳೊ

ಬೆಟ್ಟಾಡಿ ಬೆಣ್ಣೆ ತೆಗೆದಾಳೊ ಕಾಟಮ್ಮ
ಮುತ್ತೀನ ಸೆರಗ ಮುರಿದಾಳೊ
ಮುತ್ತೀನ ಸೆರಗ ಮುರಿದು। ಸಿಂಬೆಮಾಡಿ
ಹೊತ್ತಾಳೊ ದಿಲ್ಲಿ ಹೊಳೆತಂಕ

ಹೊತ್ತಾಳೊ ದಿಲ್ಲಿ ಹೊಳೆತಂಕ ಕಾಟಮ್ಮ
ನೆಡುಪ್ಯಾಟೆ ಕೊಡನ ಇಳಿಸ್ಯಾಳೊ

ಅಡವೀಗೆ ಆರುಯ್ದು ಹೊನ್ನೀಗೆ ಮೂರುಯ್ದು
ಮಿಕ್ಕ ಮಜ್ಜೀಗೆ ಕೊಡಕೋಯ್ದು
ಮಿಕ್ಕಾ ಮಜ್ಜೀಗೆ ಕೊಡಕೋಯ್ದು। ಕಾಟಮ್ಮ
ತನ್ನ ಪಟ್ಟಣಕೆ ತಿರುಗ್ಯಾಳೊ

ತನ್ನ ಪಟ್ಟಣಕೆ ತಿರುಗಿನ್ನ ಬರುವಾಗ
ಆಳ ದಂಬೋರು ಗಣೆನೆತ್ತಿ
ಆಳ ದಂಬೋರು ಗಣನೆತ್ತಿ ।ಆಡಲುವಾಗ
ನೋಡುತಲೆ ಅಲ್ಲಿ ಬೈಗಾಗಿ

ನೋಡುತಲೆ ಅಲ್ಲಿ ಬೈಗಾಗಿ ಕಾಟಮ್ಮ
ದೂಳಸಂಜೇಲಿ ಹೊರಟಾಳೊ
ದೂಳಸಂಜೇಲಿ ಹೊರಟಾಳೊ। ಕಾಟಮ್ಮ

ಕಾಣದಗೆಯಾಗೆ ಕುಸಿಬಿದ್ದು

ಕಾಣದಗೆಯಾಗೆ ಕುಸಿಬಿದ್ದು ಕಾಟಮ್ಮ
ಆಡಾಡಿಕೊಂಡು ಅಳುತಾಳೊ
ಕಾರೆಂಬ ಕತ್ತಾಲು ಗೀರೆಂಬ। ಗಿಡುದಾಗೆ
ಮಾನ್ಯಾರ ಸುಳಿವೆ ಮೊದಲಿಲ್ಲ

ಗುಡ್ಡಾದ ಕರಡಿ ಉದ್ದಾಮೇಯ್ಯಾಲೋಗಿ
ತನ್ನ ಒಬ್ಬೀಗೆ ತಿರುಗೀತೊ
ತನ್ನ ಒಬ್ಬೀಗೆ ತಿರುಗಿನ್ನ। ಬರುವಾಗ
ಕಾಟಮ್ಮ ಆಡಾಡಿ ಅಳುತಾಳೊ

ಯಾರಮ್ಮ ಅಳುವೋರು ಯಾರಮ್ಮ ಕರೆವೋರು
ಯಾರಮ್ಮ ಇಲ್ಲಿ ಇರುವೋರು
ಗಾಳಿ ನಾನಲ್ಲ ಪೀಡೆಯು ನಾನಲ್ಲ
ರಾಯಸಂದನೂರ ಮಗಳಯ್ಯ
ರಾಯ್‌ಸಂದನೂರ ಮಗಳಯ್ಯ। ಕರಡಯ್ಯ
ಮೇಲಕ್ಕೆ ನನ್ನ ಕರುಕೋಳೊ

ಅಂಗಂದ ಮಾತ ಕೇಳ್ಯಾನೆ ಕರಡಯ್ಯ
ದಾಗೂಡಿ ಬಳ್ಳಿ ದಗುನಾಕೊ
ದಾಗೂಡಿ ಬಳ್ಳಿ ದಗುನಾಕೆ ।ಅರುದಾವೆ
ಬಾಯಾಗೆ ಬಳ್ಳಿ ಕಡುಕೊಂಡು
ಬಾಯಾಗೆ ಬಳ್ಳಿ ಕಡಕೊಂಡು ಹಗ್ಗಾನುಡಿದು
ಬಿಟ್ಟಾನು ಅಗೆಯಾದ ಬಳೆಬಳೆಗೊ

ಕಣ್ಣೆರಡು ಮುಚ್ಚೆ ಕೈ ಎರಡು ಜೋಡುಸೆ
ಹತ್ತಿ ಬಾರೆ ನನ್ನ ಸಖಿಯೋಳೆ
ಹತ್ತಿ ಬಾರೆ ನನ್ನ ಸಖಿಯೋಳೆ। ಎಲುಕಾಟಿ
ಮರಿ ಮರಿಯೆ ನಿನ್ನ ತವರೂರ

ಮರಿ ಮರಿಯೆಂದಾರೆ ನಾನೆಂಗೆ ಮರಿಯಾಲೊ
ಬಳ್ಳಾರಿ ನಮ್ಮ ತವರೂರು
ಬಳ್ಳಾರಿ ನಮ್ಮ ತವರೂರ। ಕರೆತುಂಬಿ
ನೆಲ್ಲಾ ಗದ್ದೀಗೆ ಅರಿದಾವೊ

ನೆಲ್ಲಾ ಗದ್ದೀಗೆ ಅರಿದು ಮಿಕ್ಕಾನೀರ
ಅಲ್ಲೀ ಸಾವುರುದ ಗಿಣಿ ಕುಡಿದು
ಅಲ್ಲಿ ಸಾವುರುದ ಗಿಣಿಕುಡಿದು ಮಿಕ್ಕಾನೀರ
ಅಲ್ಲಿ ದಲ್ಲಾಳಿ ಮಕತೋಳೆದು
ಅಲ್ಲಿ ದಲ್ಲಾಳಿ ಮಕತೋಳೆದು। ಮಿಕ್ಕಾನೀರ
ಅರಿಯಾಣು ಚಂದುರುಕೆ ಅರಿಬೀಡೊ

ಕರಡಯ್ಯ ಹಿಂದಿಂದೆ ಕಾಟಮ್ಮ ಮುಂದೆ ಮುಂದೆ

ಹೋದಾರು ಗವಿಯ ಮಕನಾಗಿ

ಕಾಟೀಯ ಸ್ಯಾಲೆ ನುಚ್ಚು ನೂರಾಮಾಡಿ
ಸಕ್ಕಸಂದದ ಕಾಟಿ ಸೆದುರಂಗ
ಸಕ್ಕಸಂದದ ಕಾಟಿ ಸೆದುರಂಗ। ಸಂದಾನೂರ
ನಿಸ್ತ್ರೇಯ ಬತುವ ಅಳುದಾನೊ

ಕಾಟೀಯ ಸ್ಯಾಲೆ ನೂಲು ನೂಲಾಮಾಡಿ
ಸಾರಂಗುದು ಕಾಟಿ ಸೆದುರಂಗ
ಸಾರಂಗುದು ಕಾಟಿ ಸೆದುರಂಗದ। ಸಂದಾನೂರ
ನಾರೀಯ ಬತುವ ಅಳುದಾನೂ

ಇಕ್ಕಟ್ಟಿನೊಳೆಯಾಗೆ ಸಕ್ಕಂದದ ಬೈಲಾಗೆ
ಸಿಕ್ಕಿದಳಕ್ಕಯ್ಯ ಮಗಳಯ್ಯ
ಸಿಕ್ಕಿದಳಕ್ಕಯ್ಯಾ ಮಗಳಯ್ಯ। ಕರುಡಯ್ಯ
ಸಪ್ಪಾಳೆನಾಕಿ ನಗುತಾನೂ

ಆಳು ಕರಡಿ ಮಾನೆ ಕತ್ತಾಲು ಗೈದಾವೊ
ನಾನೆಂಗೆ ಇರಲೊ ಶಿವ ಶಿವನೆ
ನಾನೆಂಗೆ ಇರಲೊ ಶಿವ ಶಿವು। ಸಂದಾನೂರ
ಮಿಸ್ತ್ರೇ ಮಗನಿಕ್ಕಿ ಅಳುತಾಳೊ
ಕೆಟ್ಟ ಕರಡಿ ಮಾನೆ ಕತ್ತಾಲು ಗೈದಾವೊ
ಮತ್ತೆಂಗೆ ಇರಲೊ ಶಿವ ಶಿವನೆ

ಆ ಮಾತ ಕೇಳಿ ಹೋದಾನೆ ಕರಡಯ್ಯ
ಸಂತೇಗೋಗರುನ ಗರಗುಟ್ಟಿ
ಸಂತೇಗೋಗರುನ। ಗರಗುಟ್ಟಲುಮಾಡಿ
ಅಕ್ಕೀಯ ಹೇರ ವಡಕೊಂಡು

ಅಕ್ಕೀಯ ಹೇರ ವಡತಂದು ಕರಡಯ್ಯ
ಮಡಕೇಯ ಹೇರು ವಡತಂದು
ಅನ್ನಾವ ಉಂಡು ಆರೆಂಟೆ। ದಿನವಾತು
ಹೊಟ್ಟೆ ಅಸೀತು ಕರಡಯ್ಯ

ಹೊಟ್ಟೆ ಅಸೀತು ಕರಡಯ್ಯ ಅಂದಾರೆ
ಹೋದನು ಜೇನಕಲ್ಲ ಸಂತೇಗೆ
ಹೋದನು ಜೇನಕಲ್ಲ । ಸಂತೇಯ ಹಾದೀಲಿ
ಕಾದು ಕುಂತವನೆ ಕರಡಯ್ಯ

ಕಾದುಕುಂತವನೆ ಕರಡಯ್ಯ ಹಾದೀಲಿ
ಸಂತೆಗೋಗುರುನ ಗುರಗುಟ್ಟಿ
ಸಂತೆಗೋಗರುನ ।ಗರಗುಟ್ಟಲು ಮಾಡಿ

ರೊಟ್ಟಿ ಬುತ್ತೀಯ ಕಸಕೊಂಡ

ರೊಟ್ಟಿ ಬುತ್ತೀಯ ಕಸಕೊಂಡ ಕರಡಯ್ಯ
ಬಾಯಾಗೆ ಬುತ್ತಿ ತರುತಾನೆ
ಬಾಯಾಗೆ ಬುತ್ತಿ ತರುತಾನೆ। ಕರಡಯ್ಯ
ಕಾಟೀಯ ಮಕ್ಕೆ ಎಸೆದಾನೊ

ಅಕ್ಕಿನಾದ್ರು ತಂದೆ ಮಡ್ಕೇನಾದರು ತಂದೆ
ನೀರಿಲ್ಲವಲ್ಲೊ ಕರಡಯ್ಯ
ನೀರಿಲ್ಲವಲ್ಲೊ ಕರಡಯ್ಯ। ಅಂದಾರೆ
ತೆಂಗಿನ ಬುಲ್ಡೇಗು ನೀರು ತರುತಾನೊ

ನೀರನಾದ್ರು ತಂದೆ ಸೌದೇನಾದರು ತಂದೆ
ಬೆಂಕಿಲ್ಲವಲ್ಲೊ ಕರಡಯ್ಯ
ಬೆಂಕಿಲ್ಲವಲ್ಲೊ ಕರಡಯ್ಯ। ಅಂದಾರೆ
ಜ್ವಾಳದೊಲದರುನ ಗರಗುಟ್ಟಲೊ
ಜ್ವಳಾದೊಲದರುನ ಗರಗುಟ್ಟಲು ಮಾಡಿ
ಬಾಯಾಗೆ ಬೆಂಕಿ ತರುತಾನೊ
ಬಾಯಾಗೆ ಬೆಂಕಿ ತರುವಾಗ। ಕರಡಯ್ಯ
ಮೂಡಾಲ ಗಾಳಿ ಸುಳಿದಾವೊ

ಮೂಡಾಲ ಗಾಳಿ ಸುಳುಸುಳು ಬೀಸುವಾಗ
ಬಾದೆ ವುಲ್ಲಾಗಿ ಹುರಿದೋದ

ಬಾಲೆ ನಿನ್ನಿಂದ ಬಾಳೀದೆ ಬದುಕೀದೆ
ಬಾದೆ ವುಲ್ಲಾಗಿ ಹುರಿದೋದೆ
ಬಾದೆ ವುಲ್ಲಾಗಿ ಹುರಿದೋದೆ। ಓಬೇನಳ್ಳಿ
ಬಾವೀಯ ಮುಳುಗಿ ಗೆದ್ದುಬಂದೆ

ನಿಸ್ತ್ರೇ ನಿನ್ನಿಂದ ಅಂದೀದೆ ಕುಂದೀದೆ
ನಿಂಬೆ ತರಗಾಗಿ ಹುರಿದೋದೆ
ನಿಂಬೆ ತರಗಾಗಿ ಹುರಿದೋದೆ। ಓಬೇನಳ್ಳಿ
ವಜ್ಜುರುವ ಮುಣುಗಿ ಗೆದ್ದುಬಂದೆ

ಬಡಸೀಮೆಗೋಗಿ ಉದ್ದಿನೇರ ತರುತೀನಿ
ಕಾಟಿ ನೀ ಜತುನ ಗವಿ ಜತುನ

ಮ್ಯಾಕೆ ಮಾರಗೊಂಡ ಮ್ಯಾಕೆ ಮೇಸಲೋಗಿ
ಸಿಕ್ಕುಟ್ಟದ ಮೇಲೆ ಕೊರಳೂಡಿ
ಸಿಕ್ಕುಟ್ಟದ ಮೇಲೆ ಕೊರಳೂಡಿ। ಊದುಲುವಾಗ
ಕಾಟಮ್ಮ ಆಡಾಡಿ ಅಳುತಾಳೊ

ಯಾರಮ್ಮ ಅಳುವೋದು ಯಾರಮ್ಮ ಕರೆವೋದು
ಯಾರಮ್ಮ ಇಲ್ಲಿ ಇರುವೋದು
ಗಾಳಿ ನಾನಲ್ಲ ಪೀಡೇಯು ನಾನಲ್ಲ
ರಾಯಸಂದನೂರ ಮಗಳಯ್ಯ
ರಾಯಸಂದನೂರ ಮಗಳಯ್ಯ। ಮಾವಯ್ಯ
ಮೇಲಕ್ಕೆ ನನ್ನ ಕರಕಾಳೊ

ಹಬ್ಬೀದ ಮೆಳೆಯ ತುಂಡು ತುಂಡಾಗೊಯ್ದು
ರೆಂಬೆ ಈಸೀಗೆ ಕರಕೊಂಡ
ರೆಂಬೆ ಈಸೀಗೆ ಕರಕೊಂಡ। ಮಾರಗೊಂಡ
ತನ್ನ ಹಟ್ಟೀಗೆ ನಡಿಯೆಂದ

ಮ್ಯಾಕೆ ಮರಗೊಂಡ ಮ್ಯಾಕೆ ಮೇಸಲೋಗಿ
ತೋಪಿನಲ್ಲಿ ಕಂಡ ಪೊದಮೇಯ
ತೋಪಿನಲ್ಲಿ ಕಂಡ ಪೊದಮೇಲಿ। ಕಾಟಮ್ಮಾನ
ಅಂಜುದಲೆ ಗೆದ್ದ ದೊರೆರಾಯ

ಹಿಂಡಿನ ಮರಗೊಂಡ ಹಿಂಡ ಮೇಸಲೋಗಿ
ಗುಂಡಿನಲ್ಲಿ ಕಂಡ ಪೊದಮೇಯ
ಗೊಂಡಿನಲ್ಲಿ ಕಂಡ ಪೊದಮೇಲಿ। ಕಾಟಮ್ಮಾನ
ಅಂಜುದಲೆ ಗೆದ್ದ ದೊರೆರಾಯ

ಕರಡಿ ಮಕ್ಕಾಳ ಕಾಲಿಡಿದು ಮೇಲಕ್ಕಟ್ಟಿ
ಸಿರಿಗಂಧದ ಸೌದೆ ಒಲೆಗೂಡಿ
ಸಿರಿಗಂಧದ ಸೌದೆ ಒಲೆಗೂಡಿ। ಕಾಟಮ್ಮ
ಹೊರಟಾಳು ಮಾರಗೊಂಡನಿಂದೆ

ಕಾಡಾಗೆ ಇರುವೋ ಕರಡೀಯ ಹೆಂಡಾರ
ಗೆದ್ದ ಮಾನ್ಯವರೆ ಇವರೀಗ
ಅಡವೀಲಿ ಇರುವೋ ಕರಡೀಯ ಹೆಂಡಾರ
ಆಳ್ದ ಮಾನ್ಯವರೆ ಇವರೀಗ

ಹತ್ತು ಸಾವುರ ಮ್ಯಾಕೆ ಬೆಟ್ಟಾಕೆ ಹೋಗಾವೆ
ಹೊತ್ತೆ ಮುಣುಕಿದರು ಬರಲಿಲ್ಲ
ಹೊತ್ತೆ ಮುಣುಕಿದರು ಬರಲಿಲ್ಲ। ಅಂಬೂತ
ಅವರ ಹೆತ್ತಮ್ಮ ಆಡಾಡಿ ಅಳುತಾಳೊ

ಆರು ಸಾವುರ ಮ್ಯಾಕೆ ಮೆಯ್ಯಾಕೆ ಹೋಗ್ಯಾವೆ
ಸೂರಿದ ಮುಣುಕಿದರೆ ಬರಲಿಲ್ಲ
ಸೂರಿದ ಮುಣುಕಿದರೆ ಬರಲಿಲ್ಲ। ಅಂಬೂತ
ತಾಯಮ್ಮ ಆಡಾಡಿ ಅಳುತಾಳೆ

ಹತ್ತು ಸಾವುರ ಮ್ಯಾಕೆ ಗಕ್ಕಾನೆ ವಡಕೊಂಡು

ಸಿಕ್ಕಳು ಕಾಟಮ್ಮನ ಕರಕಂಡು
ಸಿಕ್ಕಳು ಕಾಟಮ್ಮನ ಕರಕೊಂಡು। ಮಾರಗೂಂಡ
ಗಕ್ಕಾನೆ ಉದಿಗೆ ವದಗ್ಯಾನೊ
ಆರು ಸಾವಿರ ಮ್ಯಾಕೆ ಗಕ್ಕಾನೆ ವಡಕೊಂಡು
ಹಿರಿಯಳು ಕಾಟಮ್ಮನ ಕರಕೊಂಡು
ಹಿರಿಯಳು ಕಾಟಮ್ಮನ ಕರಕೊಂಡು। ಮಾರಗೊಂಡ
ಬೇಗಾನೆ ಉದಿಗೆ ವದಗ್ಯಾನೊ

ಸಿಕ್ಕಳು ಕಾಟಮ್ಮಗೆ ತುಪ್ಪ ಅನ್ನಾವನಿಕ್ಕಿ
ಕೊಟ್ಟೀಗೆ ಮನೆಗೆ ಬಿಡಿರಣ್ಣ
ಕೊಟ್ಟೀಗೆ ಮನೆಗೆ ಬಿಡಿರಣ್ಣ। ಗುಡ್ಡಾದ
ಕರಡಿಮಾರಾಯ ಬರುತಾನೊ

ಹಿರಿಯಳು ಕಾಟಮ್ಮಾಗೆ ಹಾಲು ಆರಾರಿಕ್ಕಿ
ಮಾಳೀಗೆ ಮನೆಗೆ ಬಿಡಿರಣ್ಣ
ಮಾಳೀಗೆ ಮನೆಗೆ ಬಿಡಿರಣ್ಣ। ಗುಡ್ಡಾದ
ಕರಡಿಮಾರಾಯ ಬರುತಾನೊ

ಅತ್ತೆ ಹಟ್ಟೀಲಿ ಹತ್ತಾಳು ಹೆಣ್ಣುಗಳು
ನಾರಿಯಂತೋರೆ ಬರಲಿಲ್ಲ
ನಾರಿಯಂತಾರೆ ಬರಲಿಲ್ಲ। ಕರಡಯ್ಯ
ಮಾನ್ಯಳಾ ಸುಳಿವೇ ಮೊದಲಿಲ್ಲ

ಮಾವನಟ್ಟೀಲಿ ಆರಾಳು ಹೆಣ್ಣಗಳು
ನಾರಿಯಂತೋರೆ ಬರಲಿಲ್ಲ
ನಾರಿಯಂತಾರೆ ಬರಲಿಲ್ಲ। ಅಂಬೂತ
ಕರಡಯ್ಯ ಆಡ್ಯಾಡಿ ಅಳುತಾನೆ

ಅಡವೀಯ ಕರಡಿ ಹೊಡೆದ ಕಾರುಣುದಿಂದ
ಅಡದ ಮಕ್ಕಳಿಗೆ ರುಜವಿಲ್ಲ
ಅಡದ ಮಕ್ಕಳಿಗೆ ರುಜವಿಲ್ಲ। ಮಾರಗೊಂಡ
ಕರಡಿಬುಳ್ಳನೆಸರ ಕರಿಯೆಂದ

ಗುಡ್ಡಾದ ಕರಡಿ ಹೊಡೆದ ಕಾರುಣುದಿಂದ
ಹುಟ್ಟಿದ ಮಕ್ಕಳಿಗೆ ರುಜವಿಲ್ಲ
ಹುಟ್ಟಿದ ಮಕ್ಕಳಿಗೆ ರುಜವಿಲ್ಲ । ಮಾರಗೊಂಡ
ರಾಯ್ ಬುಳ್ಳನೆಸರ ಕರಿಯೆಂದ

ತಾಳಿಕಟ್ಟದ ಕರಡಿ ಗೊಲ್ಲರು ಮತ್ತು ತಾಳಿಕಟ್ಟುವ ಕರಡಿ ಗೊಲ್ಲರ ಪದ

ಸಿತ್ತುಮುತ್ತಿ ಮಾರುಮುತ್ತಿ ಹೊಂದಾಗಿ ಬಾಳುಲುವಾಗ
ಮುತ್ತುರತ್ನಾವ ಏರಿಕೊಂಡು
ಮುತ್ತುರತ್ನಾವ ಏರಿಕೊಂಡು। ಮುತ್ತಿನ ಶೆಟ್ಟಿ
ಸಿತ್ತುಮುತ್ತಿ ಪಟ್ಟುಣುಕೆ ಬರುತಾನೊ

ಸಿತ್ತುಮುತ್ತಿ ಪಟ್ಟುಣುಕೆ ಬರುವಾಗ ಮುತ್ತಿನ ಶೆಟ್ಟಿ
ಮಾಯಾದ ಮಳೆಯೆ ಸುರುದಾವೋ
ಮಾಯಾದ ಮಳೆಯೆ ಸುರುದವು। ಮುತ್ತಿನ ಶೆಟ್ಟಿ
ಊರುಮುಂದೆ ಏರು ಇಳಿಸೀದ

ಊರುಮುಂದೆ ಏರು ಇಳಿಸಿದ ಮುತ್ತಿನ ಶೆಟ್ಟಿ
ಊರುಮುಂದಲು ಸಾವುಡ್ಯಾಗೆ ಮಲಗಿದನೋ
ಊರುಮುಂದಲು ಸಾವುಡ್ಯಾಗೆ ಮಲಗಿದನೊ।
ಮುತ್ತಿನ ಶೆಟ್ಟಿ ಮುತ್ತು ರತ್ನಗಳು ಕಳವಾದೊ

ಮನಗಿದು ಮುತ್ತಿನ ಶೆಟ್ಟಿ ಎದ್ದು ನೋಡಲುವಾಗ
ಮುತ್ತರತ್ನಾವೆ ಕಳವಾದೋ
ಮುತ್ತುರತ್ನಾವೆ ಕಳವಾಗಿ। ಹೋಗಲುವಾಗ
ಎತ್ತುಗಳುಡಿಕೊಂಡು ಹೊರಟಾನೊ

ಎತ್ತುಗಳುಡಿಕೊಂಡೆ ಹೊರಟನು ಮುತ್ತಿನು ಶೆಟ್ಟಿ
ಸಿತ್ತಿಮುತ್ತಿ ಮನೆಮುಂದೆ ಎತ್ತು ನೋಡಿ
ಸಿತ್ತಮುತ್ತಿ ಮನೆಮುಂದೆ। ಎತ್ತುಗಳನೋಡಿದಾನೊ
ದೊರೆಗಳ ಪಟ್ಟಣುಕೆ ಹೊರಟಾನೊ

ದೊರೆಗಳ ಪಟ್ಟುಣುಕೆ ಹೊರಟನು ಮುತ್ತಿನ ಶೆಟ್ಟಿ
ದೊರೆಗಳರುಮನೆಗೆ ಹೋಗುತಾನೋ
ದೊರೆಗಳರುಮನೆಗೆ ಹೋಗುತಾನೊ। ಮುತ್ತಿನು ಶೆಟ್ಟಿ
ದೊರೆಗಳಿಗೆ ದೂರು ಕೊಡುತಾನೊ

ಸಿತ್ತುಮುತ್ತಿ ಮನೆಮುಂದೆ ಎತ್ತುಗಳಿದ್ದವು ಸ್ವಾಮಿ
ಮುತ್ತುರತ್ನಾವ ಕದ್ದವರೊ
ಮುತ್ತುರತ್ನಾವ ಕದ್ದವರೊ। ಸಿತ್ತುಮುತ್ತಿ
ನ್ಯಾಯಕೆ ದೊರೆಯೆ ಬರಬೇಕು

ದೊರೆಗಳು ಬಂದಾರೊ ನ್ಯಾಯಕೆ ಕುಂತವರೊ
ಸಿತ್ತಮುತ್ತೀಯ ಕರೆಸವರೋ
ಸಿತ್ತಮುತ್ತೀಯ ಕರೆಸಿ। ನ್ಯಾಯಾಮಾಡಿ
ಸಮತೂಕ ಬಂಗಾರ ಕೊಡಬೇಕು

ಸಮತೂಕ ಬಂಗಾರ ಕೊಡಬೇಕು ಎಂದಾರೊ
ಗದ್ದೆಗೆತ್ತುಗಳೆ ಮೇಯ್ತಿದ್ವು
ಗದ್ದೆಗೆತ್ತುಗಳೆ ಮೇಯ್ತಿದ್ವು ದೊರೆಗಳಿರಾ
ನಮ್ಮೋರೆ ಹೋಗಿ ಹೊಡತಂದ್ರು

ನಿಮ್ಮವರು ತಂದಾರೆ ಏನಾತೊ ಸಿತ್ತುಮುತ್ತೋ
ಊರಮುಂದಕೆತ್ತ ಕಟ್ಟಬೇಕೋ
ಊರಮುಂದಕೆತ್ತ ಕಟ್ಟುಲುತು। ಕಾರಣಕಾಗಿ
ದಂಡನಿನು ಮ್ಯಾಲೆ ಬರುತೈತೊ

ದಂಡ ನಿನು ಮ್ಯಾಲೆ ಬರುತೈತೆ ಎಂಬೂತ
ಕುಲುದೋರೆ ನ್ಯಾಯ ಹೇಳುವಾಗ
ಕುಲುದೋರೆ ನ್ಯಾಯ ಹೇಳುವಾಗ। ಸಿತ್ತುಮುತ್ತಿ
ಸಾಲದಂಡಾಕೆ ಒಳಗಾದ

ಸಾಲದಂಡಾಕೆ ಒಳಗಾದ ಸಿತ್ತುಮುತ್ತೊ
ಮುತ್ತುರತ್ನಗಳ ಸುರುದಾರೋ
ಮುತ್ತುರತ್ನಗಳ ಸುರುದು। ನೋಡಲುವಾಗ
ಸಮತುಕು ಸಿಂತೋಲು ಬರಲಿಲ್ಲ

ಸಮತೂಕು ಸಿಂತೋಲು ಬರಲಿಲ್ಲ ಎಂಬೂತ
ಮಾರಮುತ್ತೀನು ಕರೆಸ್ಯಾನೋ
ಮಾರಮುತ್ತೀಯ ಕರೆಸಿ। ಏನೆಂದವನೊ
ಹೆಂಡರು ಕೊರಳಗುಳ ಮಾಂಗಲ್ಯ

ಹೆಂಡರು ಕೊರಳಗುಳ ಮಾಂಗಲ್ಯ ಕೊಟ್ಟಾರೊ
ಚಿಂತೋಲೆಗೂ ತಾಳಿ ಇಡಬೇಕೋ
ಚಿಂತೋಲೆಗು ತಾಳಿ ಹಾಕಬೇಕು। ಎಂಬೂತ
ಸಿತ್ತಮುತ್ತಿ ತಮ್ಮಾನು ಹೇಳುತಾನೊ

ಹೆಂಡುರು ಕೊರಳಗುಳ ತಾಳೀಯ ಕೊಡಸಾಕೊ
ಮುತ್ತುರತ್ನಾವ ಕದಿಲಿಲ್ವೋ
ಮುತ್ತುರತ್ನಾವ ಕದಿಲಿಲ್ಲ। ಪಿರಿಯಣ್ಣ
ಕುರಿಯಟ್ಟಿ ತಾವ ಇರಲಿಲ್ವೋ

ಕುರಿಯಟ್ಟಿ ತಾವ ಇದ್ದಾರೆ ಏನಾತೋ
ನನಿಗು ಬಂದುಕಷ್ಟ ನಿನಗೇಯ
ನನಿಗೂ ಬಂದುಕಷ್ಟ ನಿನಿಗೇಯ। ನನತಮ್ಮ

ಹೆಂಡಾತಿ ತಾಳಿ ಕೊಡುಸಪ್ಪ

ತಾಳಿ ಕೊಡಸಾಕೆ ಸುಮ್ಮಾನೆ ಮಾತೇನೊ
ಸಾವ್ರ ಕುಲಕೂಡಿ ಸಬೆಕೂಡಿ
ಸಾವ್ರ ಕುಲಕೂಡಿ ಸಬೆಕೂಡಿ। ಕಟ್ಟಿದ ತಾಳಿ
ಬಿಚ್ಚಿಕೊಡುಲಾರೆ ಹಿರಿಯಣ್ಣ

ಮುತ್ತುರತ್ನಾದ ಬಾಳೆತ್ತಿನ ದಂಡ ಕೊಡದಂಗೊ
ಅವರು ಅಣ್ಣ ತಮ್ಮಗಳನಗಲವರೊ
ಅಣ್ಣ ತಮ್ಮಗಳೆ ಅಗಲಿದರು। ಮಾರುಮುತ್ತಿ
ತಾಳಿಕೊಡದಂಗೆ ಹೊರಟೋದ

ತಾಳಿ ಕೊಡದಂಗೆ ಓಡೋದ ತಮ್ಮನ ನೋಡಿ
ಹೆಂಡತಿ ಕೊರಳಗಳ ಮಾಂಗಲ್ಯವೊ
ಹೆಂಡತಿ ಕೊರಳಗಳ ಮಾಂಗಲ್ಯ। ತಗುದಾಕುಲುವಾಗ
ಸಮತೂಕ ಸಿಂತೋಲು ಎದ್ದಾವು

ಸಮತೂಕ ಸಿಂತೋಲು ಎದ್ದಾವು ಎಂಬೂತ
ಮಾರುತ್ತೀಯ ಮರೆತಾನೊ
ಮಾರಮುತ್ತೀಯ ಮರೆತನು। ಸಿತ್ತುಮುತ್ತಿ
ಬ್ಯಾರೆ ಬ್ಯಾರೆ ಅವರು ಬಾಳುವಾಗ

ಅಣ್ಣ ತಮ್ಮಗಳು ಬ್ಯಾರೆ ಬ್ಯಾರೆ ಬಾಳಲುವಾಗೊ
ಕುಲುದ ನ್ಯಾಯಗಳೆ ಕಲೆತಾವೋ
ಕುಲುದ ನ್ಯಾಯಗಳೆ ಕಲೆತವು। ಸಿತ್ತುಮುತ್ತಿ
ನ್ಯಾಯಾಕೆ ದೊರೆಯೇ ಬರಬೇಕು

ಅಣ್ಣ ತಮ್ಮಗಳ ಕೂಡಿಸಬೇಕೆಂದು
ನ್ಯಾಯಕು ಸಿತ್ತುಮುತ್ತಿ ಕರೆಸವರೋ
ನ್ಯಾಯಕು ಸಿತ್ತುಮುತ್ತಿ ಕರೆಸವರೆ। ಅಪ್ಪುಗುಳು
ಸಿತ್ತುಮುತ್ತಿ ಏನೆಂದೆ ಹೇಳುತಾನೊ

ಆರು ಸಾವುರ ಕುರಿಯಗಂಗೆ ಬಿಟ್ಟೋದವನ
ಮತ್ತೋಗಿ ಅವುನ ಕರೆದೀರೋ
ಮತ್ತೋಗಿ ಅವನ ಕರೆದಿರೊ। ನನು ತಮ್ಮಾನು
ಸಾಲ ದಂಡಾಕು ಒರಗಾದ

ಹತ್ತು ಸಾವುರ ಕುರಿಯ ಕುರಿಯಟ್ಟೆಗು ಬಿಟ್ಟೋದವನು
ತಿರುಗೋಗಿ ಅವುನ ಕರೆದೀರೋ
ತಿರುಗೋಗಿ ಅವುನ ಕರೆದೀರೊ। ನನ ತಮ್ಮಾನು

ಬಾಳೆತ್ತಿನ ದಂಡಾಕು ಒರಗಾದ

ಎಲ್ಡುಗೂಡಿನ ಕುರಿಯಟ್ಯಾಗೆ ಒಂದುಗೂಡಿನ ಕುರಿವಡ್ಕೊಂಡು
ಸಾವ್ರ ಕುಲದೇವ್ರ ಹೊತ್ತುಗೊಂಡು
ಸಾವ್ರ ಕುಲದೇವ್ರ ಹೊತ್ತುಗೊಂಡ। ನನ ತಮ್ಮ
ಪಾಲೇನಳ್ಳೀಗೆ ಹೊರಟೋದ

ಅಣ್ಣ ತಮ್ಮಗಳು ಕೂಡಬೇಕಾದಾರೂ
ಸೂರ್ಯ ಚೆಂದುಗಳೆ ಬದಲಾಗ್ಯೊ
ಸೊರ್ಯ ಚೆಂದುಗಳೆ ಬದಲಾಗಿ। ಹುಟ್ಟಿದುರು
ಅಣ್ಣ ತಮ್ಮುಗಳು ಕಲಿಲಿಲ್ಲ

ಅಗಲಿದು ತಮ್ಮಾನಂಗಂಗೆ ಬಿಡುಬಾರುದೆಂದೊ
ಏಳೂರಿನ ನ್ಯಾಯ ಕರಿಸೆವರೋ
ಏಳೂರಿನ ನ್ಯಾಯ ಕರಿಸೆವರೆ। ಅಪ್ಪುಗಳು
ಎಲ್ಡುಗೂಡಿನಾಲು ತರಿಸವರೊ

ಎಲ್ಡು ಕುರಿಯಟ್ಯಾಗಿನಾಲ ತರಿಸವರೊ ಕುಲುದಾರು
ಅಣ್ಣ ತಮ್ಮಗಳಾಲ ಒಂದುಗೂಡಿ
ಅಣ್ಣ ತಮ್ಮಗಳಾಲ ಒಂದುಗೂಡಿ। ಕುಂಬಾಕೊಯ್ದು
ಗುಂಡಿಯ ತೋಡಿ ಮಡಿಗ್ಯಾರೊ

ಗುಂಡಿಯ ತೋಡಿ ಮಡಿಗ್ಯಾರೊ ಕುಲುದಾರು
ಮೂರು ತಿಂಗಳೆ ಬಿಟ್ಟೆ ತಗಿಸ್ಯವರೋ
ಮೂರು ತಿಂಗಳೆ ಬಿಟ್ಟೆ ತಗೆದು। ನೋಡಲುವಾಗ
ಕುಂಬಾದಳಾಲೆ ಒಡಕಾದೊ

ಕುಂಬಾದಳಾಲೆ ಒಡೆದು ಹೋಗಲುವಾಗ
ಕುಲುದರೇನೆಂದೆ ಹೇಳುತಾರೋ
ಕುಲುದರೇನೆಂದೆ ಹೇಳುತಾರೊ। ಸಿತ್ತುಮುತ್ತಿ
ಅಣ್ಣ ತಮ್ಮಗಳಿಗೆ ಕಲಿಯಲ್ಲ

ಅಣ್ಣ ತಮ್ಮಗಳಿಗೆ ಕಲಿಯಲ್ಲ ಎಂಬೂತ
ಪಾಲೇನಳ್ಳೀಗು ತಮ್ಮ ಹೊರಟೋದ
ಪಾಲೇನಳ್ಳೀಗು ಹೊರಟೋದ। ಅವರಣ್ಣ
ನಂದಿಹಳ್ಳಿಗೂ ನಡೆದಾನೊ

ತಮ್ಮುನುಕೂಟೋದ ಮನೆಸ್ವಾಮಿ ಸಿತ್ತಯ್ಯಾನು
ಹಿಂದಾಕೆ ನಾನು ಬರಲಾರೋ
ಹಿಂದಾಕೆ ನಾನು ಬರಲಾರೆ। ಎಂಬೂತ

ಕುಂಬಾದಗಿರುವ ಒಡದಾಲು

ಕುಂಬಾದಗಿರುವೊ ಒಡದಾಲ ಸಿತ್ತುಮುತ್ತೊ
ಮಂಗಾರೆ ಗಿಡುಕೆ ಎರುದಾನೊ
ಮಂಗಾರೆ ಗಿಡುಕೆ ಎರಸಿ। ನೋಡಲುವಾಗ
ನಿಜಲಿಂಗ ಪಳ ಪಳನೆ ನಗುತಾವೊ

ನಿಜಲಿಂಗ ಪಳ ಪಳನೆ ನಗುತಾವೊ ಸಿತ್ತುಮುತ್ತೊ
ಮದ್ದನಕುಂಟೆಂಬ ಪೌಳೀಯಾ
ಮದ್ದನಕುಂಟೆಂಬ ಪೌಳೀಯ। ನಲೆಮಾಡಿ
ಸಿತ್ತಯ್ಯನೆಂದು ಹೆಸರಿಟ್ಟ

ಸಿತ್ತಯ್ಯನೆಂದು ಹೆಸರಿಟ್ಟ ಸಿತ್ತಮುತ್ತೊ
ಮಾಲಿಂಗಗಾಲ ಎರುದಾನೊ
ಮಾಲಿಂಗಗಾಲ ಎರುದಾನೊ। ಸಿತ್ತುಮುತ್ತಿ
ಕಾಯೊಡದೆ ಕಯ್ಯಾ ಮುಗಿದಾನೊ

ಕಾಯೊಡದೆ ಕಯ್ಯಾ ಮುಗಿದಾನೊ ಸಿತ್ತುಮುತ್ತೊ
ಎತ್ತೀನಗಾಳಿ ಇಡಿಸ್ಯಾನೋ
ಎತ್ತೀನಗಾಳಿ ಇಡಿಸ್ಯಾನೊ। ಸಿತ್ತಮುತ್ತಿ
ಮನೆಸ್ವಾಮಿ ಸಿತ್ತಯ್ಯ ನೆಲೆಗೊಂಡ
ಮಾರಮುತ್ತಿಕೂಟೋದ ಸಿತ್ತುರುದೇವರಾಗೊ
ಸಿತ್ತುಮುತ್ತಿಗೆ ಭಾಗ ಬರಬೇಕೋ
ಸಿತುಮುತ್ತಿಗು ಭಾಗ ಬರಬೇಕು। ಎಂಬೂತ
ಕಟ್ಟು ಕರಾರು ಬರೆಸವನೊ

ಕಟ್ಟು ಕರಾರು ಬರೆಸವನೊ ಸಿತ್ತುಮುತ್ತೊ
ಮದ್ದುನುಕುಂಟೆಂಬ ನೆಲೆಮಾಡೋ
ಮದ್ದುನುಕುಂಟೆಂಬ ನೆಲೆಮಾಡಿ। ಸಿತ್ತಯ್ಯಾಗೆ
ತಾಳಿ ಇಲ್ಲದೋರು ಬರಬೇಕು

ತಾಳಿ ಇಲ್ದೋರು ಬರಬೇಕು ಎಂಬೂತ
ನಾಡಿನೊಕ್ಕಾಲ ಕರೆಸವನೋ
ನಾಡಿನೊಕ್ಕಾಲ ಕರೆಸವನೊ। ಸಿತ್ತುಮುತ್ತಿ
ಮಾಲಿಂಗನು ತೇರನರಿಸ್ಯವನೊ

ಮಾಲಿಂಗನ ತೇರ ಅರಿಸಿದನೊ ಸಿತ್ತುಮುತ್ತೊ
ಶಾಸ ವಡಿಸಿದನೊ ಪೌಳ್ಯಾಗೋ
ಶಾಸ ವಡಿಸಿದನೊ ಪೌಳ್ಯಾಗು। ಸಿತ್ತಾಯ್ಯಾಗೆ
ಸುತ್ತಲೊಕ್ಕಾಲು ಬರಬೇಕು

ಸುತ್ತಲೊಕ್ಕಾಲ ಕರೆಸಿದನೊ ಸಿತ್ತಮುತ್ತೊ

ನಂದಿಹಳ್ಳೆಂಬ ಗುಡಿಕಟ್ಟು
ನಂದಿಹಳ್ಳೆಂಬ ಗುಡಿಕಟ್ಟು। ಮದ್ದನಕುಂಟೆ
ಸಿತ್ತಯ್ಯಗು ನೀವೆ ಬರಬೇಕು

ಸಿತ್ತಯ್ಯಗು ನೀವೆ ಬರಬೇಕು ಎಂಬೂತ
ಸುತ್ತಲೊಕ್ಕಾಲ ಕರಿಸ್ಯಾನೋ
ಸುತ್ತಲೊಕ್ಕಾಲ ಕರಿಸ್ಯಾನೊ। ಸಿತ್ತಮುತ್ತಿ
ಪಾಲೆನಳ್ಳೀಗೆ ಓಗುದೀರಿ
ಪಾಲೆನಳ್ಳೀಗೆ ಓಗುದಿರಿ ನನ ತಮ್ಮಾನು
ತಾಳಿ ಕಟ್ಟರುನ ಕರಿಯಾಲಿ
ತಾಳಿ ಕಟ್ಟರುನ ಕರಿಯಾಲಿ। ನನ ತಮ್ಮಾ
ತಾಳಿ ಇಲ್ಡೋರು ನನಗಿರಲಿ

ತಾಳಿ ಇಲ್ಡೋರು ನನಗಿರಲಿ ಎಂಬೂತ
ವಾದ ಪಂಥಾವೆ ನಡೆದಾವೋ
ವಾದ ಪಂಥಾವೆ ನಡೆದವೆ। ಮದ್ದನಕುಂಟೆ
ಮಂಗಾರಿ ಗಿಡುದ ಶಿವನೀಗೆ

ಬೆಡಗುಗಳು ರಚನೆಯಾದ ನಂತರದ ದಿನಗಳಲ್ಲಿ ಅವುಗಳನ್ನು ಕುರಿತ ಬಿಡಿಗೀತೆಗಳು ಆಯಾ ಬೆಡಗುಗಳ ಮೇಲೆ, ಕಟ್ಟೆ ಮನೆಗಳ ಮೇಲೆ, ತಮ್ಮ ತಮ್ಮ ದೇವರುಗಳ ಮೇಲೆ ರಚಿತವಾಗಿರುವುದನ್ನು ಕಾಣುತ್ತೇವೆ. ಅವುಗಳಲ್ಲಿ ದೊರಕಿದ ಕೆಲವು ಪದಗಳನ್ನು ಇಲ್ಲಿ ಕೊಡಲಾಗಿದೆ.

ನಂದಿಹಳ್ಳಿ ಗುಡಿಕಟ್ಟಿನ ಮೇಲೆ ಹಾಡುವ ಪದ

ಬಾಳೆ ಹಣ್ಣಿಗು ಬಂದ ಜೇನು ತುಪ್ಪುಕು ಬಂದ
ಹಿಂಬುನೋಡಿ ಬಂದ ದೊರೆ ಸಾಲು
ಹಿಂಬುನೋಡಿ ಬಂದ ದೊರೆಸಾಲು। ನಂದೀಹಳ್ಳಿ
ತಾವೊಳ್ಳೆದೆಂದು ನೆಲೆಗೊಂಡ

ನಿಂಬೇ ಹಣ್ಣಿಗು ಬಂದ ತುಂಬೆ ತುಪ್ಪುಕು ಬಂದ
ಹಿಂಬುನೋಡಿ ಬಂದ ದೊರೆ ಸಾಲು
ಹಿಂಬುನೋಡಿ ಬಂದ ದೊರೆಸಾಲು। ನಂದೀಹಳ್ಳಿ
ತಾವೊಳ್ಳೆದೆಂದೆ ನೆಲೆಗೊಂಡ

ಅಣ್ಣಾನ ಸೆಲುವರಿಕೆ ಅಣ್ಣಿಗಿರಿಯಾದವೊಂದು
ಸ್ವಾಮಿ ರಂಗಯ್ಗೆ ಅನುಮಾನೊ
ಸ್ವಾಮಿ ರಂಗಯ್ಗೆ ಅನುಮಾನ। ಬಂದೂ
ಪಂಚುವಾಳರುನು ತನ್ನ ಬಾಗಿಲಿಗೆ ಕಡಿಸ್ಯಾನೊ

ಅಪ್ಪಾನ ಸೆಲುವರಿಕೆ ಮತ್ಯಾರಿಗಾದವೊಂದು
ಅಪ್ಪ ರಂಗಯ್ಗೆ ಅನುಮಾನೊ
ಅಪ್ಪ ರಂಗಯ್ಗೆ ಅನುಮಾನ। ಬಂದೂ
ಪಂಚವಾಳರುನ ತನ್ನ ಬಾಗಿಲಿಗೆ ಕಡಿಸ್ಯಾನೊ

ಆಗಾಳಕಾಯಂಗೆ ಹಣೆಯ ಮ್ಯಾಗುಳು ನಾಮ
ಪಂಚವಾಳರ ನೆಡುವೆ ಬರುವೋನು
ಪಂಚವಾಳರ ನೆಡುವೆ ಬರುವೋನು। ರಂಗಯ್ಯಾನ
ವಂಚಿನೋಡವಳೊ ಸ್ರೀಲಕ್ಷೀ

ವಂಚೀನೆ ನೋಡಾಕೆ ಕದ್ದು ಕಳ್ಳಾನೇನೆ
ಕಬ್ಬುಣದ ಕದುವ ಮುರುಕೊಂಡು
ಕಬ್ಬುಣುದ ಕದುವ ಮುರಕೊಂಡು। ರಂಗಯ್ಯ
ಇದ್ದ ಸೂಳೇರ ಮನಿಯಾಗೆ

ಅಂಚೀ ಕಡ್ಡೀಯಂಗೆ ಹಣೆಯ ಮ್ಯಾಗುಳು ನಾಮ
ಆರೂರ ನೆಡುವೆ ಬರುವೋನ
ಆರೂರ ನೆಡುವೆ ಬರುವೋನ। ರಂಗಯ್ಯಾನ
ಅರಸಿ ನೋಡವಳೆ ತ್ರುಣಿಸಮ್ಮ

ಅರಸೀನೆ ನೋಡಾಕೆ ಕದ್ದು ಕಳ್ಳಾನಲ್ಲ
ಕಬ್ಬುಣದ ಕದವ ಮುರುಕೊಂಡು
ಕಬ್ಬುಣದ ಕದವ ಮುರುಕೊಂಡು। ರಂಗಯ್ಯಾ
ಇದ್ದ ಸೂಳೇರ ಮನಿಯಾಗೆ

ಕರೇಓಬೇನಳ್ಳಿ ಕಟ್ಟೆಮನೆಯನ್ನು ಕುರಿತ ಪದ:

ಸಿಕ್ಕಾ ಒಬೇನಳ್ಳಿ ಸತ್ಯವ್ನ ಗುಡಿಮುಂದೆ
ಮುಚ್ಚೀದ ಕಡತ ತಗೆಸ್ಯಾರೊ
ಮುಚ್ಚೀದ ಕಡತ। ತಗೆಸೀ ಓದೀಸ್ಯಾರೊ
ಸಿಕ್ಕದು ಗೌಡೀಕೆ ನಮದೆಂದು

ರಾಯಾ ಓಬೇನಳ್ಳಿ ತಾಯವ್ನ ಗುಡಿಮುಂದೆ
ಕೆತ್ತೀದ ಕಡತ ತಗೆಸ್ಯಾರೊ
ಕೆತ್ತೀದ ಕಡತ। ತಗೆಸೀ ಓದೀಸ್ಯಾರೊ
ಸಿಕ್ಕದು ಗೌಡೀಕೆ ನಮದೆಂದು

ಒಂಟೆ ಕಾಲೀಗೆ ಗಂಟೇ ಸರಪಾಣಾಕಿ
ಸುಂಟಿ ಬೆಳೆಯಾಲೊ ಕೆರೆಯಾಗೊ
ಸುಂಟಿ ಬೆಳೆಯಾಲೊ ಕರೆಯಾಗೊ। ಕರಡೇರು
ಬಂಟ ಹುಟ್ಟ್ಯವನೊ ಕುಲುದಾಗೆ

ಆನೇ ಕಾಲೀಗೆ ಕೀಲ ಸರಪಾಣಾಕಿ
ಜೂಲಂಗಿ ಬೆಳೆಯಾಲೊ ಕರೆಯಾಗೊ
ಜೂಲಂಗಿ ಬೆಳೆಯಾಲೊ ಕರೆಯಾಗು। ಸಂದಾನೂರ
ಬಾಲ ಹುಟ್ಟ್ಯವನೊ ಕುಲುದಾಗೆ

ಯಾವುದಮ್ಮ ಬಿತ್ತಾದು ಯಾವುದಮ್ಮಾ ಬೆಳುವೋದು
ಯಾವ್ದಮ್ಮಾ ಬಿತ್ತಿ ಬೆಳೆವೋದು
ಯಾವ್ದಮ್ಮಾ ಬಿತ್ತಿ ಬೆಳೆವೋದು। ಓಬೇನಳ್ಳಿ
ಸಂಪನ್ನುನು ಕೊಟ್ಟ ಬೆಳೆಬೀಜ

ಅವ್ರೆ ಬಿತ್ತೋರು ಅವ್ರೆ ನಮ್ ಅಣ್ಣುಗಳು
ಅವ್ರೆ ಸಾಲಾಗೆ ಅಳಸೆಂಡೊ
ಅವ್ರೆ ಸಾಲಾಗೆ ಅಳಸೆಂಡೆ। ಬಿತ್ತೋರು
ಅವ್ರೋಬೇನಳ್ಳಿ ಗೌಡಾರು

ಉದ್ದು ಬಿತ್ತೋರು ಉದ್ದೇ ನಮ್ ಅಣ್ಣುಗಳು
ಉದ್ದಿನು ಸಾಲಾಗೆ ಅಳಸೆಂಡೊ
ಉದ್ದಿನು ಸಾಲಾಗೆ ಅಳಸೆಂಡೆ। ಬಿತ್ತೋರು
ಮುದ್ದೋಬೇನಳ್ಳಿ ಗೌಡಾರು

ಬಿತ್ತಾ ಕೂರಿಗು ಮುಂದ ಬೀಜದರವಿ ಮುಂದೊ
ಹಟ್ಟಿ ಮಾದಿಗನ ಮಿಣಿ ಮುಂದೋ
ಹಟ್ಟಿ ಮಾದಿಗನ ಮಣಿ ಮುಂದೋ। ಓಬೇನಳ್ಳಿ
ಪಟ್ಟುಣು ಮಾನ್ಯವುಕೆ ಬಿಡಿರಣ್ಣ

ಅವುಳುದು ಕೂರೀಗೆ ದಗನ ಮುಟ್ಟವು ಸೆಡ್ಡೆ
ರಘುರಾಮನೆಂಬ ಎರಡೆತ್ತೊ
ರಘುರಾಮಾ ನೆಂಬ ಎರಡೆತ್ತೂ। ಊಡಿಕೊಂಡು
ಅಸನಾಗಿ ಹೊಡೆಯೊ ಹೊಲಮಾನಿ

ಮುಚ್ಚುದು ಕೂರೀಗೆ ಹಟ್ಟ್ಯಾಗೆ ನಿಲ್ಲೀಸಿ
ಹೆತ್ತು ತುಪ್ಪುದುಲೆ ಮಕತೊಳೆದು
ಹೆತ್ತು ತುಪ್ಪುದುಲೆ ಮಕತೊಳೆದೊ। ಓಬೇನಳ್ಳಿ
ಪಟ್ಟುಣು ಮಾನ್ಯವುಕೆ ಬಿಡಿರಣ್ಣ

ಅವಳದ ಕೂರೀಗೆ ಓಣ್ಯಾಗೆ ನಿಲ್ಲೀಸಿ
ಆಲು ತುಪ್ಪುದಲೆ ಮಕತೊಳೆದು
ಆಲು ತುಪ್ಪುದಲೆ ಮಕತೊಳೆದೊ। ಓಬೇನಳ್ಳಿ
ಮ್ಯಾಗಳು ಮಾನ್ಯವುಕೆ ಬಿಡಿರಣ್ಣ

ಸಿಕ್ಕಾ ಒಬೇನಳ್ಳಿ ಸತ್ಯವ್ನ ಗುಡಿಮುಂದೆ
ಶೆಟ್ಟೆರು ಶೆಟ್ಟರಿಗೆ ವೈಜಗುಳೊ
ಶೆಟ್ಟರು ಶೆಟ್ಟರಿಗೆ ವೈಜಗುಳ। ಆದಾರೆ
ಅಕ್ಕ ಕಾಟಮ್ಮ ಕೈಮುಗಿದು

ಅಕ್ಕಾ ಕಾಟಮ್ಮ ಕೈ ಮುಗಿದೇನೆಂದಾಳೊ
ಸಿಕ್ಕೋಬೇನಳ್ಳಿ ಗೌಡೀಕೆ
ಸಿಕ್ಕೋಬೇನಳ್ಳಿ ಗೌಡಿಕೆ। ನಮಗಾದಾರೆ
ಅಕ್ಕ ಮಾರಕುಗೆ ವಡಗಾಯಿ

ರಾಯಾ ಒಬೇನಳ್ಳಿ ತಾಯವ್ನ ಗುಡಿಮುಂದೆ
ರಾಯ ರಾಯರಿಗೆ ವೈಜಗುಳೊ
ರಾಯ ರಾಯರಿಗೆ ವೈಜಗುಳ। ಆದಾರೆ
ತಾಯಿ ಕಾಟಮ್ಮ ಕೈಮುಗಿದು

ತಾಯಿ ಕಾಟಮ್ಮ ಕೈ ಮುಗಿದೇನೆಂದಾಳೊ
ರಾಯೋಬೇನಳ್ಳಿ ಗೌಡೀಕೆ
ರಾಯೋಬೇನಳ್ಳಿ ಗೌಡಿಕೆ। ನಮಗಾದಾರೆ
ತಾಯಿ ಮಾರಕುಗೆ ಹಿಡಿದೂಪ

ಸಿಕ್ಕ ಒಬೇನಳ್ಳಿ ಸತ್ಯವ್ನ ಗುಡಿಮುಂದೆ
ಸಿತ್ತಣ್ಣೇರಿದನೊ ಕುದುರೀಯೊ
ಸಿತ್ತಣ್ಣೇರಿದನೊ ಕುದುರೆ। ಪಾಲೇನಳ್ಳಿ
ಪಟ್ಟುಣುಕೆ ದಾಳು ಅರಿದಾವೊ
ರಾಯ ಒಬೇನಳ್ಳಿ ತಾಯವ್ನ ಗುಡಿಮುಂದೆ

ಮಾಲಿಂಗೇರಿದನೊ ಕುದುರೀಯೊ
ಮಾಲಿಂಗೇರಿದನೊ ಕುದುರೆ। ಪಾಲೇನಳ್ಳಿ
ಊರಿಗೆ ದಾರಿ ಅಳದಾನೊ

ಹಟ್ಟಿಸುತ್ತಿ ಬರುವಾಗ ಇಪ್ಪೆ ಹೂವಿನ ನಾತ
ಶೆಟ್ಟೆಪ್ಪು ಕುದುರೇನೊ ಇವನ್ಯಾರೊ
ಶೆಟ್ಟೆಪ್ಪು ಕುದುರೇನು ಇವನ್ಯಾರು। ಪಾಲೇನಳ್ಳಿ
ಪಟ್ಟುಣುವೆ ಇಳ್ದೆ ಹೊರಟಾನು

ಊರುಸುತ್ತಿ ಬರುವಾಗ ಜೀರ್ಗೆ ಹೂವಿನ ನಾತ
ನೀಲಪ್ಪು ಕುದುರೇನೆ ಇವನ್ಯಾರೊ
ನೀಲಪ್ಪು ಕುದುರೇನು ಇವನ್ಯಾರು। ಪಾಲೇನಳ್ಳಿ
ಊರುಸುತ್ತಿ ಕುದುರೆ ಇಳಿದಾನು

ಹಟ್ಟೀ ಅನ್ನಲುದೀರೊ ಪಟ್ಟಣು ಪಾಲೇನಳ್ಳಿ
ಹುಟ್ಟಾ ಮಲ್ಲೀಗೆ ಎಲೆದೋಟ
ಹುಟ್ಟಾಮಲ್ಲೀಗೆ ಎಲೆದೋಟದ। ತನುವೀಗೆ
ಅಪ್ಪಾ ಸಿತ್ತಣ್ಣ ನೆಲೆಗೊಂಡ

ಹಳ್ಳಿ ಅನ್ನಲುದೀರೊ ಒಳ್ಳೆದು ಮದ್ದನುಕುಂಟೆ
ಬಳ್ಳಿ ಮಲ್ಲೀಗೆ ಎಲೆದೋಟ
ಬಳ್ಳಿ ಮಲ್ಲೀಗೆ ಎಲೆದೋಟದು। ತನುವೀಗೆ
ಅಲ್ಲಿ ಮಾಲಿಂಗ ನೆಲೆಗೊಂಡ

ಪಾಲೇನಳ್ಳಿ ಅಪ್ಪ ಐದಾನೊ ಇಲ್ಲಾವೊ
ಬೋರಾಡಿ ಸಂಕೆ ಅರಿದಾವೊ
ಬೋರಾಡಿ ಸಂಕೆ ಅರಿದಾವು। ಪಾಲೇನಳ್ಳಿ
ಐಯ್ದನು ಸಂಪಂಗಿ ವನದಾಗೆ
ಮದ್ದನು ಕುಂಟೆ ಅಪ್ಪ ಇದ್ದಾನೊ ಇಲ್ಲಾವೊ
ಗದ್ದಲಿಸಿ ಗಣೆಯೆ ಅರಿದಾವೊ
ಗದ್ದಲಿಸಿ ಗಣೆಯೆ ಅರಿದಾವು। ಮದ್ದನಕುಂಟೆ
ಇದ್ದನು ಸಂಪಂಗಿ ವನದಾಗೆ

ಸಿತ್ತಣ್ಣಿರುವೋದು ಸಿಕ್ಕ ತುಗ್ಗಲಿ ತೋಪು
ಸಿತ್ತಾರ ಬರೆದ ಎಳಗಾವೆ
ಸಿತ್ತಾರ ಬರೆದ ಎಳಗಾವೆ। ಮರದಡಿಯ
ಸಿತ್ತಣ್ಣನ ಪೂಜೆ ಅಸನಾಗಿ

ಮಾಲಿಂಗಿರುವೋದು ರಾಯ ತುಗ್ಗಲಿ ತೋಪು
ರೂವಾರ ಬರೆದ ಎಳಗಾವೆ
ರೂವಾರ ಬರೆದ ಎಳಗಾವೆ। ಮರದಡಿಯ
ಮಾಲಿಂಗನು ಪೂಜೆ ಅಸನಾಗಿ

ಲಿಂಗ ನೀನಿರುವ ಇಂಬು ಕಂಡೋರಿಲ್ಲ
ಗಂಗೀಯ ಗಡ್ಡೆ ನೆಡವಾಲೊ
ಗಂಗೀಯ ಗಡ್ಡೆ ನೆಡವಾಲ। ಮರದಡಿಯ
ಕೆಂದಾವಿನಾಲೆ ಕರೆದಾನೊ

ದೇವರು ನೀನಿರುವ ತಾವು ಕಂಡೋರಿಲ್ಲ
ಬೀಗಿಯ ಗಡ್ಡೆ ನೆಡುವಾಲೊ
ಬೀಗಿಯಾ ಗಡ್ಡೆ ನೆಡುವಾಲ। ಉತ್ತಾಕೆ
ಕಾಳಾವಿನಾಲ ಕರೆದಾನೊ

ಕರಡಿಗೊಲ್ಲರನ್ನು ಜರಿಯುವ ಪದ

ಶೆಟ್ಟಿ ಕರಡೇರು ಹುಟ್ಟು ಕಳ್ಳರುಕಾಣೊ
ಶೆಟ್ಟೆರಂಗಾಡಿ ಮಳಿಗ್ಯಾಗೋ
ಶೆಟ್ಟೆರಂಗಾಡಿ ಮಳಿಗ್ಯಾಗು। ಸೀಲಾಕದ್ದು
ಹೆಂಡಾರ ತಾಳಿ ಕಳಕೊಂಡ

ರಾಯ ಕರಡೇರು ನಾಡಿನು ಕಳ್ಳರುಕಾಣೊ
ರಾಯರಂಗಾಡಿ ಮಳಿಗ್ಯಾಗೊ
ರಾಯರಂಗಾಡಿ ಮಳಿಗ್ಯಾಗು। ಸೀಲಾಕದ್ದು
ಹೆಂಡಾರ ತಾಳಿ ಕಳಕೊಂಡ

ಮಾವ ಕರಡೇರು ನಾಡಿನು ಕಳ್ಳರುಕಾಣೊ
ಬಾಳೆತ್ತಿನ ಚೀಲ ಮನೆಗೇರೋ
ಬಾಳೆತ್ತಿ ಚೀಲ ಮನೆಗೇರಿ। ನಮ್ ಮಾವುಗಳು
ನಮ್ ಅತ್ತೇರ ತಾಳಿ ಕಳುದಾನೊ

ಅಜ್ಜ ಕರಡೇರು ಹೆಚ್ಚಿನ ಕಳ್ಳರುಕಾಣೊ
ಮುತ್ತೀನ ಚೀಲ ಮನಗೇರೋ
ಮುತ್ತೀನ ಚೀಲ ಮನೆಗೇರಿ। ನಮ್ ಮಾವುಗಳು
ನಮ್ ಅತ್ತೇರ ತಾಳಿ ಕಳುದಾನೊ

ಅತ್ತೇರ ತಾಳಿ ಕಳಕೊಂಡೆ ಮಾವುಗಳು
ದಿಳ್ಳಿ ದೊರೆಗಳನ ಕರೆಸ್ಯವರೋ
ದಿಳ್ಳಿ ದೊರೆಗಳನ ಕರೆಸಿ ಏನೆಂದವರೊ
ಸಿಂತೋಲೆಗು ತಾಳಿ ಇಡಿಸ್ಯವರೊ

ಸಿಂತೋಲೆಗು ತಾಳಿ ಇಡಿಸಿ ಏನೆಂದವರೊ
ಮುತ್ತುರತ್ನಾದ ಕಳುವೀಗೋ
ಮುತ್ತುರತ್ನಾದ ಕಳುವಿಗು। ನಮ್ ಮಾವುಗಳು
ಸಿಂತೋಲಿಗು ತಾಳಿ ಇಡಿಸ್ಯವರೊ

ಸಿಂತೋಲಿಗು ತಾಳಿ ಇಡಿಸಿ ಏನೆಂದವರೊ
ಕರಿಓೀಬಿ ಮಾಡಿಸಿದ ಕಳುತಾನೋ
ಕರಿಓೀಬಿ ಮಾಡಿಸಿದ ಕಳುತಾನ। ಎಂಬೂತ
ಕಟ್ಟು ಕರಾರು ಬರೆಸ್ಯಾರೊ

ಕರಡಿ ಬುಳ್ಳಪ್ಪನ ಕುರಿತ ಪದ

ಅರೆರಾಮ ಮೆರೆರಾಮ ಅಳ್ಳಗುಂಟ ಹೋಗುವಾಗ
ಕರಡಿ ಬುಳ್ಳಪ್ಪ ಎದುರಾಗಿ
ಕರಡಿಬುಳ್ಳಪ್ಪ ಎದುರಾಗಿ। ಬಂದಾರೆ
ಹೆಣ್ಣಕೊಡಬೇಕು ನಮಗೊಂದ

ಹೆಣ್ಣು ಕೊಟ್ಟೇನು ಹೊನ್ನುಗಳ ಕೊಟ್ಟೇನು
ಹನ್ನೊಂದೂರೀನ ಗೌಡೀಕೆ
ಹನ್ನೊಂದೂರೀನ ಗೌಡೀಕೆ। ಬುಳ್ಳಪ್ಪ
ಸಣ್ಣ ಅಳಿಯರಿಗೆ ಬರಕೊಟ್ಟ

ಅನುಬಂಧ

ಕರಡಿ ಬುಳ್ಳಪ್ಪನು ಕರೇಓಬೇನಳ್ಳಿಯನ್ನು ಕಟ್ಟೆಮನೆ ಮಾಡಿಕೊಂಡ ಕಥೆ:

ಹರತಿಕೋಟೆ[೧] ರಾಜನಿಗೆ 'ಕರೀ ಓಬಕ್ಕ' ಎನ್ನುವ ಮಗಳಿದ್ದಳು. ಇವಳು ಮಹಾ ಸತ್ಯವಂತೆ ಹಾಗೂ ಮಹಾ ಬುದ್ಧಿವಂತೆಯಾಗಿದ್ದಳು. ಆದ ಕಾರಣ ಅಷ್ಟು ಸುಲಭವಾಗಿ ಯಾರೂ ಇವಳನ್ನು ಮದುವೆಯಾಗಲಾಗಲಿಲ್ಲ. ಇವಳು ಕೆಲವು ಒಡಪುಗಳನ್ನು ಬರೆಯಿಸಿ, "ಈ ಒಡಪುಗಳನ್ನು ಬಿಡಿಸಿದವನಿಗೆ ಇಡೀ ನನ್ನ ಸಾಮ್ರಾಜ್ಯವನ್ನು ಕೊಟ್ಟು ಅವನನ್ನು ಮದುವೆಯಾಗುತ್ತೇನೆ" ಎಂಬುದಾಗಿ ತನ್ನ ಅರಮನೆಯ ಮುಂದೆ ಬರೆಸಿರುತ್ತಾಳೆ. ಮಾತ್ರವಲ್ಲ ಅಲ್ಲೇ ಒಂದು ನಗಾರಿಯನ್ನು ಇರಿಸುವಂತೆ ಸೇವಕರಿಗೆ ಆದೇಶಿಸಿರುತ್ತಾಳೆ. "ಒಡಪುಗಳನ್ನು ಬಿಡಿಸಲು ಇಚ್ಛಿಸುವವರು ಆ ನಗಾರಿಯನ್ನು ಬಡಿಯಬೇಕು. ಒಂದು ಹೊಡೆತಕ್ಕೆ ಒಂದು ನೂರು ರೂಪಾಯಿ ಕಪ್ಪವನ್ನು ಕಟ್ಟಿ ಅರಮನೆಯ ಒಳಗೆ ಬರಬೇಕಾಗಿರುತ್ತದೆ" ಎಂದೂ ಬರೆಸಿರುತ್ತಾಳೆ. ಇದನ್ನು ನೋಡಿದ ಅನೇಕ ಹಣವಂತರು, ರಾಜಮನೆತನದವರು ಬಂದು ಅವುಗಳನ್ನು ಬಿಡಿಸಲಾಗದೆ ಸೋತು ಕಪ್ಪವನ್ನು ಕಟ್ಟಿ ಹೋಗುತ್ತಿದ್ದರು. ಒಂದು ದಿನ ಕುರುಬರ ಯರಗಾನಿ ಎಂಬುವವನು ಕರಡಿ ಬುಳ್ಳಪ್ಪನ ಕುರಿಯ ತುಪ್ಪಟವನ್ನು ಕತ್ತರಿಸಲು ಹರತಿಕೋಟೆ ಕಡೆಯಿಂದ ಬಾಲೇನಳ್ಳಿ ಕಡೆಗೆ ಹೋಗುವಾಗ ಈ ವಿಚಾರವನ್ನು ತಿಳಿಯುತ್ತಾನೆ. ಆತ ಆಸೆಯಿಂದ ನಾನು ಆ ಒಡಪನ್ನು ಬಿಡಿಸಬೇಕೆಂದು ಬಯಸಿ ಕುರಿ ತುಪ್ಪಟವನ್ನು ಕತ್ತರಿಸಲೆಂದು ತಂದಿದ್ದ ಕತ್ತರಿಯನ್ನು ಅಲ್ಲಿಯೇ ಬಿಸಾಕಿ, ಅರಮನೆಯ ಮುಂದಿದ್ದ ನಗಾರಿಯನ್ನು ಮನಬಂದತೆ ಬಡಿಯುತ್ತಾನೆ. ಅಲ್ಲಿದ್ದ ಕಾವಲುಗಾರರು ಅವನು ನಗಾರಿಯನ್ನು ಬಡಿದ ರೀತಿಯನ್ನು ನೋಡಿ "ಇವನು ಯಾರೋ ದೊಡ್ಡ ಮನುಷ್ಯನಾಗಿರಬೇಕು. ಮಾತ್ರವಲ್ಲ ಆನೆ, ಒಂಟೆಯ ಮೇಲೆ ಹಣವನ್ನು ಹೇರಿಕೊಂಡು ಬಂದಿರಬೇಕು" ಎಂದು ತಿಳಿದು ಅವನನ್ನು ನೇರವಾಗಿ ಅರಮನೆಯೊಳಗೆ ಹೋಗಲು ಬಿಡುತ್ತಾರೆ. ಕುರುಬರ ಯರಗಾನಿ ಅರಮನೆಯ ಒಳಗೆ ಬಂದವನೇ ಒಡಪುಗಳು ಏನೆಂದು ನೋಡುತ್ತಾನೆ.

೧ ನಾಲ್ಕು ಕಾಲಿನ ಕೊಕ್ಕರೆ ಅಂದರೆ ಏನು?
೨ ಏಳು ಕೊಂಬಿನ ಮ್ಯಾಕೆ ಹೋತ ಅಂದರೆ ಏನು?
೩ ತಲೆಗೆ ಮೆತ್ತಂದ ಕಲ್ಲು ಅಂದರೆ ಏನು?
೪ ಬಿಸಿಲಿಗೆ ಬಾಡದ ಹೂ ಅಂದರೆ ಏನು?
೫ ನಾಲ್ಕು ಏಣಿನ ಹಸಿರು ಕಂಬ ಅಂದರೆ ಏನು?
೬ ಕಪ್ಪೆ ಕಲಕದ ನೀರು ಅಂದರೆ ಏನು?
೭ ಬೆಂಕಿ ಮುಟ್ಟದ ತುಪ್ಪ ಅಂದರೆ ಏನು?
೮ ಹಾದಿ ಬೀದಿಯಲಿ ಉರುಳಾಡುವ ಹುಚ್ಚು ಕೋಣ ಅಂದರೆ ಏನು?

ಈ ಒಡಪುಗಳನ್ನು ಓದಿದ ಯರಗಾನಿಗೆ ಅವುಗಳೇನೆಂಬುದು ಒಂದಿಷ್ಟೂ ಅರ್ಥವಾಗಲಿಲ್ಲ. ಅರಮನೆಯಿಂದ ಹೊರಬಂದು ತಲೆಗೆ ಮೆತ್ತಂದ ಕಲ್ಲು ಯಾವುದಿರಬಹುದೆಂದು ಬಹಳವಾಗಿ ಯೋಚಿಸಿದ. ಉತ್ತರ ದೊರಕದಿದ್ದಾಗ ಅಲ್ಲಿಯೇ

೧. ಹರತಿಕೋಟೆ ರಾಜನ ಚರಿತ್ರೆಯನ್ನು ಅಧ್ಯಯನಕ್ಕೊಳಪಡಿಸಬೇಕಾದ ಅಗತ್ಯವಿದೆ. ಚರಿತ್ರೆಯಲ್ಲಿ ಈ ರಾಜನ ಸುಳಿವುಗಳು ಬಂದಿವೆಯೇ ಎಂಬುದನ್ನು ಮುಂದಿನ ಅಧ್ಯಯನಕಾರರು ಕಂಡುಕೊಳ್ಳಬೇಕಾಗಿದೆ.

ಹೊಲದಲ್ಲಿರುವ ಕಲ್ಲನ್ನು ತಗೆದುಕೊಂಡು ತಲೆಗೆ ಜೋರಾಗಿ ಚಚ್ಚಿಕೊಂಡ. ಹೀಗೆ ಸುಮಾರು ಮೂರು ತಿಂಗಳ ಕಾಲ ಒಡಪುಗಳಿಗೆ ಉತ್ತರ ಹುಡುಕಲು ಹೆಣಗಾಡಿ ಸೋತು ಹೋಗುತ್ತಾನೆ. ಕೊನೆಗೆ ಅಲ್ಲಿಂದ ಕರಡಿ ಬುಳ್ಳಪ್ಪ ಇರುವಂಥ ಬಾಲೇನಳ್ಳಿ ಕಡೆಗೆ ಹೊರಡುತ್ತಾನೆ. ಬಾಲೇನಳ್ಳಿ ಕೆರೆಯ ಏರಿಮೇಲೆ ಯರಗಾನಿ ಬರುವುದು ಅಲ್ಲಿಯೇ ಕುರಿ ಮೇಯಿಸುತ್ತಿದ್ದ ಕರಡಿ ಬುಳ್ಳಪ್ಪನಿಗೆ ಕಾಣಿಸುತ್ತದೆ. ಮೂರು ತಿಂಗಳಿಗೊಮ್ಮೆ ಬರಬೇಕಾಗಿದ್ದ ಕುರುಬಣ್ಣ ಆರು ತಿಂಗಳಾದ ಮೇಲೆ ಬಂದಿರುತ್ತಾನೆ. ಕರಡಿ ಬುಳ್ಳಪ್ಪನ ಬಳಿಗೆ ಬಂದ ಯರಗಾನಿ ಅವನ ಕಾಲುಗಳನ್ನು ಹಿಡಿದುಕೊಂಡು ತನಗೆ ಒಂದು ಗೊಂದಲ ಎದುರಾಗಿದೆಯೆಂದೂ ಅದನ್ನು ಪರಿಹರಿಸಬೇಕೆಂದು ಬೇಡಿಕೊಳ್ಳುತ್ತಾನೆ. ಅದಕ್ಕೆ ಕರಡಿ ಬುಳ್ಳಪ್ಪನು ಒಪ್ಪಿ, ಸಮಸ್ಯೆ ಏನೆಂದು ಕೇಳುತ್ತಾನೆ. ಯರಗಾನಿಯು ಕರೀ ಓಬಕ್ಕ ಹೇಳಿದ ಒಡಪುಗಳನ್ನು ಕರಡಿ ಬುಳ್ಳಪ್ಪನಿಗೆ ವಿವರಿಸಿ ತಾನು ಆ ಒಡಪುಗಳನ್ನು ಬಿಡಿಸಿ ಅವಳನ್ನು ಮದುವೆಯಾಗುವ ಬಯಕೆಯನ್ನು ವ್ಯಕ್ತಪಡಿಸುತ್ತಾನೆ. ಆದರೆ ಕರಡಿ ಬುಳ್ಳಪ್ಪನು, "ಕರೀಓಬವ್ವಳು ಹರತಿಕೋಟೆಯ ರಾಜನ ಮಗಳು, ಅವಳ ಸಹವಾಸ ನಿನಗೆ ಬೇಡ"ವೆಂದು ಯರಗಾನಿಗೆ

ಬುದ್ದಿಹೇಳುತ್ತಾನೆ. ಆದರೆ ಯರಗಾನಿ, ಆತನ ಮಾತನ್ನು ಕೇಳದೇ ತನಗೆ ಒಡಪುಗಳನ್ನು ಬಿಡಿಸಲು ಸಹಕರಿಸಬೇಕೆಂದು ಒತ್ತಾಯಿಸುತ್ತಾನೆ. "ಒಡಪುಗಳನ್ನು ನಾನೇ ಬಿಡಿಸಿದ್ದು ಎಂದು ಅವಳಿಗೆ ಗೊತ್ತಾದರೆ, ನಿನ್ನ ಮೂಗಿಗೆ ಕವಡೆ ಹಾಕಿ ತೂತು ಜರಡೆಯನ್ನು ಕೊಟ್ಟು ಅವರ ಮನೆಯ ಹೂವಿನ ಗಿಡಗಳಿಗೆ ನೀರು ಹೊಯ್ಯುವ ಕೆಲಸಕ್ಕೆ ಇಡುತ್ತಾಳೆ" ಎಂದು ಹೇಳುತ್ತಾನೆ. ಆದರೂ ಯರಗಾನಿ, ಬುಳ್ಳಪ್ಪನ ಮಾತನ್ನು ಕೇಳದೇ ಕರೀಓಬವ್ವಳನ್ನು ತಾನು ಮದುವೆಯಾಗಲೇಬೇಕು ಎಂದು ಹಠ ಹಿಡಿದು ಬಲವಂತ ಮಾಡುತ್ತಾನೆ. ಆಗ ಕರಡಿಬುಳ್ಳಪ್ಪ ಕತೆಯನ್ನು ಬಿಡಿಸಲು ಒಪ್ಪುತ್ತಾನೆ. ಒಡಪುಗಳ ಉತ್ತರವನ್ನು ಕರಡಿ ಬುಳ್ಳಪ್ಪ ಹೀಗೆ ಬಿಡಿಸುತ್ತಾನೆ.

೧ ನಾಲ್ಕು ಕಾಲಿನ ಕೊಕ್ಕರೆ ಅಂದರೆ– ಮಂಚ
೨ ಏಳು ಕೊಂಬಿನ ಮ್ಯಾಕೆ ಹೋತ ಅಂದರೆ– ಕೋಳಿಹುಂಜ
೩ ತಲೆಗೆ ಮೆತ್ತಂದ ಕಲ್ಲು ಅಂದರೆ– ಕೈ ತೋಳು
೪ ಬಿಸಿಲಿಗೆ ಬಾಡದ ಹೂ ಅಂದರೆ– ಪಿಕಳಕ್ಕಿ ಗರಿ (ನವಿಲುಗರಿ)
೫ ನಾಲ್ಕು ಏಣಿನ ಹಸಿರು ಕಂಬ ಅಂದರೆ– ಮುಂಗರ ಬಳ್ಳಿ
೬ ಕಪ್ಪೆ ಕಲಕದ ನೀರು ಅಂದರೆ– ತೆಂಗಿನ ಕಾಯಿ
೭ ಹಾದಿ ಬೀದಿಯಲಿ ಉರುಳಾಡುವ ಹುಚ್ಚು ಕೋಣ ಅಂದರೆ– ಕುಂಬಳಕಾಯಿ
೮ ಬೆಂಕಿ ಮುಟ್ಟದ ತುಪ್ಪ ಅಂದರೆ– ಜೇನುತುಪ್ಪ

ಕರಡಿಬುಳ್ಳಪ್ಪನು, ಕರೀ ಓಬಕ್ಕನ ಒಡಪುಗಳಿಗೆ ಸರಿಯಾದ ಉತ್ತರವನ್ನು ಹೇಳುತ್ತಾನೆ. ಕುರುಬರ ಯರಗಾನಿಯು, ಉತ್ತರವನ್ನು ಪಡೆದುಕೊಂಡು ತಕ್ಷಣವೇ ಕರಡಿ ಬುಳ್ಳಪ್ಪನಿಂದ ತನಗೆ ಅಗತ್ಯವಿದ್ದ ಹಣವನ್ನೂ ಪಡೆದುಕೊಂಡು, ಹೊಸ ಬಟ್ಟೆಯನ್ನು ತೊಟ್ಟುಕೊಂಡು, ಕರೀ ಓಬಕ್ಕನ ಅರಮನೆಯ ಮುಂದಿನ ನಗಾರಿಯನ್ನು ಬಡಿಯುತ್ತಾನೆ. ಈ ಬಾರಿಯೂ ಕಾವಲುಗಾರರು ಇವನಿಂದ ಯಾವ ಹಣವನ್ನೂ ಕೇಳದೆ ಅರಮನೆಯ ಒಳಗೆ ಹೋಗಲು ಅನುಮತಿ ನೀಡುತ್ತಾರೆ. ಯರಗಾನಿಯು ಕೋಳಿ ಕೂಗುವ ಹೊತ್ತಿಗೆ ಸರಿಯಾಗಿ "ಏಳುಕೊಂಬಿನ ಮ್ಯಾಕೆ ಹೋತ ಅಂದರೆ ಕೋಳಿ ಹುಂಜ" ಎಂದು ಕೂಗುತ್ತಾನೆ. ಅದನ್ನು ಕೇಳಿದ ಕರೀ ಓಬಿಯು ನಗಾರಿಯನ್ನು ಭಾರಿಸಿದವನು ಕುರುಬರ ಯರಗಾನಿ ಎಂಬುದನ್ನು ತಿಳಿಯುತ್ತಾಳೆ. ಆದರೆ ಯರಗಾನಿಯು ಕತೆಯನ್ನು ಬಿಡಿಸಲು ಮೂರುತಿಂಗಳ ಕಾಲ ತಗೆದುಕೊಂಡಿದ್ದರಿಂದ ಕರೀಓಬಕ್ಕಳಿಗೆ ಆತನ ಮೇಲೆ ಸಂಶಯವುಂಟಾಗುತ್ತದೆ. ಅದಕ್ಕಾಗಿ ತನ್ನ ಸೇವಕಿಯರನ್ನು ಕರೆದು "ಯರಗಾನಿಯು ಒಗಟಿಗೆ ಯಾವ ರೀತಿಯಾಗಿ ಉತ್ತರವನ್ನು ಹುಡುಕಿದ್ದಾನೆ ಎಂಬುದನ್ನು ತಿಳಿಯಬೇಕು. ಅದಕ್ಕಾಗಿ ನೀವು ಅವನನ್ನು ಕರೆದು ಪರೀಕ್ಷಿಸಿ" ಎಂದು ಹೇಳುತ್ತಾಳೆ. ಕೂಡಲೆ ಸೇವಕಿಯರು ಯರಗಾನಿಯನ್ನು ಕರೆದು "ಸ್ವಾಮೀ, ತಾವು ಮೊದಲು ಮಡಿಯಾಗಿ ಬನ್ನಿ. ನಂತರ ಅಮ್ಮನವರ ಮುಖವನ್ನು ನೋಡಬಹುದು" ಎಂದು ಹೇಳುತ್ತಾರೆ. ಅದಕ್ಕೆ ಯರಗಾನಿಯು ತಾನು ಈಗಾಗಲೇ ಸ್ನಾನಾದಿ ಕಾರ್ಯಗಳನ್ನು ಮುಗಿಸಿಕೊಂಡು ಬಂದಿರುವುದಾಗಿ ಹೇಳುತ್ತಾನೆ. ದಾಸಿಯರು, "ತಾವು ಇಲ್ಲಿಗೆ ಹೊರಗಿನಿಂದ ಬಂದವರು. ಹಾಗಾಗಿ ನಮ್ಮ ಅರಮನೆಯಲ್ಲಿ ಮಡಿಯಾಗಲೇಬೇಕಾಗಿದೆ" ಎಂದು ಹೇಳಿ ಸ್ನಾನದ ಮನೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಯರಗಾನಿಯು ಉಟ್ಟಿರುವ ಬಟ್ಟೆಗಳನ್ನು ಬಿಚ್ಚಿ ನೋಡಿದಾಗ ಆತನ ತಲೆಗೆ ಗಾಯವಾಗಿರುವ, ಮೈ ತರೆಚಿಕೊಂಡಿರುವ ಕಲೆಗಳು ಕಾಣಿಸುತ್ತದೆ. ಕೂಡಲೆ ದಾಸಿಯರು ಕರೀಓಬಿಗೆ ವಿಷಯವನ್ನು ತಿಳಿಸುತ್ತಾರೆ. ಆಗ ಕರೀಓಬಿಯ ಸಂಶಯ ಮತ್ತಷ್ಟು ಬಲವಾಗುತ್ತದೆ. ಅವಳು ಯರಗಾನಿಯನ್ನು ಕರೆತರುವಂತೆ ದಾಸಿಯರಿಗೆ ಆದೇಶಿಸುತ್ತಾಳೆ. ತಲೆಯಲ್ಲಿ ಆಗಿರುವ ಗಾಯವೇನೆಂದು ವಿಚಾರಿಸುತ್ತಾಳೆ. ಯರಗಾನಿಯು "ಕರಡಿಬುಳ್ಳಪ್ಪನ ಕುರಿಯ ತುಪ್ಪಟ ಕತ್ತರಿಸುವಾಗ ಟಗರು ಗುದ್ದಿ ಹೀಗಾಯಿತು" ಎಂದು ಹೇಳುತ್ತಾನೆ. ಕರೀ ಓಬಿಗೆ ಅನುಮಾನ ಬಂದು ತನ್ನ ಮುಖದ ಮೇಲಿನ ಸೆರಗನ್ನು ತೆಗೆದು "ಈ ಕತೆಗಳನ್ನು ಬಿಡಿಸಿದವರು ಯಾರು? ಇದನ್ನು ನೀನೇ ಬಿಡಿಸಿದಿಯಾದರೆ ಅದಕ್ಕೆ ನಿನಗೆ ಮೂರು ತಿಂಗಳ ಕಾಲ ಬೇಕಿರಲಿಲ್ಲ. ಇದನ್ನು ಬಿಡಿಸಿದವನು ಯಾರೋ ಬುದ್ದಿವಂತನೇ ಇರಬೇಕು. ಆದರೂ ಈ ಕತೆಗಳನ್ನು ನನ್ನ ಮುಂದೆ ಬಿಡಿಸಿದವನು ನೀನೆ ಆದ ಕಾರಣ, ಇಂದಿನಿಂದ ನೀನು ನನ್ನ ಗಂಡ ನಾನು ನಿನ್ನ ಹೆಂಡತಿ. ಆದರೂ ಹೇಳು, ಈ ಕತೆಗಳನ್ನು ನಿನಗೆ ಬಿಡಿಸಿಕೊಟ್ಟವರು ಯಾರು? ಎಂದು ಉಪಾಯದಿಂದ ಕೇಳುತ್ತಾಳೆ. ಅವಳ ಮಾತನ್ನು ನಂಬಿದ ಯರಗಾನಿ ಅವಳ ರೂಪಕ್ಕೆ ಸೋತು, "ಕರಡಿ ಬುಳ್ಳಪ್ಪನು ಈ ಕತೆಗಳನ್ನು ಬಿಡಿಸಿಕೊಟ್ಟವನು" ಎಂದು ನಿಜವನ್ನು ಹೇಳುತ್ತಾನೆ. ತಕ್ಷಣ ಕರೀಓಬಿ ಅಲ್ಲಿಯೇ ಅವನನ್ನು ಕಾಲಿನಿಂದ ಜಾಡಿಸಿ ಒದ್ದು, ಅವನ ಮೂಗಿಗೆ ಕವಡೆಯನ್ನು

ತೊಡಿಸಿ, ತೂತು ಜರಡೆಯನ್ನು ಕೊಟ್ಟು, ಹೂವಿನ ಗಿಡಗಳಿಗೆ ನೀರಾಕುವ ಕೆಲಸಕ್ಕೆ ಇರಿಸುತ್ತಾಳೆ. ನಂತರ ದಾಸಿಯರನ್ನು ಕರೆದು, ಕರಡಿ ಬುಳ್ಳಪ್ಪನನ್ನು ಕರೆದುಕೊಂಡು ಬರಲು ಹೇಳುತ್ತಾಳೆ. ಕರಡಿ ಬುಳ್ಳಪ್ಪ ಬಾಲೇನಳ್ಳಿ ಕೆರೆಯಲ್ಲಿ ಕುರಿಮೇಯಿಸಿಕೊಂಡು ಕೂತಿರುತ್ತಾನೆ. ದಾಸಿಯರು ಬಂದು "ನಿಮ್ಮನ್ನು ದೊರೆಸ್ವಾಮಿ ಕರೆಯುತ್ತಿದ್ದಾಳೆ. ಅರಮನೆಗೆ ಬನ್ನಿ" ಎಂದು ಹೇಳುತ್ತಾರೆ. "ಇನ್ನೂ ಹುಲ್ಲುಬಂದಿ[೨] ಕಟ್ಟಿ ಇನ್ನೂ ಮೂರು ತಿಂಗಳಾಗಿಲ್ಲ, ಮತ್ತೇಕೆ ನನ್ನನ್ನು ಕರೆಯುತ್ತಿದ್ದಾರೆ? ನಾನು ಬರಲಾಗುವುದಿಲ್ಲ" ಎಂದು ಅವರನ್ನು ಹಿಂದಕ್ಕೆ ಕಳುಹಿಸುತ್ತಾನೆ. ಸೇವಕಿಯರು ಕರಡಿಬುಳ್ಳಪ್ಪನು ಬರಲು ನಿರಾಕರಿಸಿದ್ದನ್ನು ಕರೀಓಬಿಗೆ ತಿಳಿಸುತ್ತಾರೆ. ಅದಕ್ಕೆ ಕರೀಓಬಿಯೇ ಕುದುರೆಗಳನ್ನು ಹೇರಿಕೊಂಡು ಕರಡಿ ಬುಳ್ಳಪ್ಪ ಇರುವಲ್ಲಿಗೆ ಬರುತ್ತಾಳೆ. "ನಾನು ಹುಟ್ಟಿ ಇಲ್ಲಿಗೆ ಮೂವತ್ತು ವರುಷಗಳಾದರೂ, ಇನ್ನೂ ಕನ್ನೆಯಾಗಿಯೇ ಉಳಿದಿದ್ದೇನೆ. ಇಡೀ ಪ್ರಪಂಚದಲ್ಲೇ ನಾನು ಒಡ್ಡಿದ ಒಡಪುಗಳನ್ನು ಬಿಡಿಸಲು ಯಾರಿಂದಲೂ ಸಾಧ್ಯವಾಗಿರಲಿಲ್ಲ. ಈ ಕತೆಗಳನ್ನು ಬಿಡಿಸಿದವನು ನೀನೊಬ್ಬನೇ. ಅದಕ್ಕಾಗಿ ನೀನೇ ನನ್ನ ಗಂಡ. ನಾನೇ ನಿನ್ನ ಹೆಂಡತಿ ಬಾ ಹೋಗೋಣ" ಎಂದು ಕರೆಯುತ್ತಾಳೆ. ಅದಕ್ಕೆ ಕರಡಿ ಬುಳ್ಳಪ್ಪನು ನಾನು ಬೇರೆ ಹೆಣ್ಣಿನ ಸಹವಾಸ ಮಾಡಲಾಗುವುದಿಲ್ಲವೆಂದೂ, ಅದಕ್ಕಾಗಿ ನಾನು ಬರಲಾಗುವುದಿಲ್ಲ ಎಂದೂ ಹೇಳುತ್ತಾನೆ.

೨. ಹರತಿಕೋಟೆ ಸುತ್ತಮುತ್ತ ಕಾಡುಗೊಲ್ಲರು ತಮ್ಮ ಜಾನುವಾರುಗಳನ್ನು ಮೇಯಿಸುತ್ತಿದ್ದ ಕಾರಣ ಆ ಜಾಗಕ್ಕೆ ಇಂತಿಷ್ಟು ಹಣ ಎಂದು ಕೊಡುತ್ತಿದ್ದರು. ಅದನ್ನು ಹುಲ್ಲಬಂದಿ ಎಂದು ಕರೆಯುತ್ತಾರೆ.

ಅದಕ್ಕೆ ಕರೀ ಓಬಕ್ಕಳು, "ನೀನು ಈಗ ಬರದೇ ಹೋದರೆ, ನಾನು ಕರಡಿ ಬುಳ್ಳಪ್ಪನ ಬಳಿ ಹುಲ್ಲು ಬಂದಿಯನ್ನು ಕೇಳಲು ಹೋದಾಗ ಆತ ನನ್ನ ಸೀರೆ ಬಿಚ್ಚಿ ಮಾನ ಭಂಗ ಮಾಡಿದ ಎಂದು ಢಂಗೂರ ಹೊಡೆಸುತ್ತೇನೆ. ಅಲ್ಲಿಗೆ ನಿನ್ನ ಮರ್ಯಾದೆ ಹೋಗುವುದಿಲ್ಲವೋ" ಎಂದು ಹೆದರಿಸುತ್ತಾಳೆ. ಆಗ ಕರಡಿ ಬುಳ್ಳಪ್ಪನು "ಅಯ್ಯೋ ಮನೆಹಾಳಿಯೇ, ನೀನು ಹಾಗೆ ಮಾಡಿದರೆ ಇಡೀ ನಮ್ಮ ಕುಲಕ್ಕೆ ಅಪಚಾರವಾಗುತ್ತದೆ. ನಿನ್ನೊಡನೆ ಬರಲು ನಾನು ತಯಾರಿದ್ದೇನೆ. ಆದರೆ ನೀನು ನನ್ನ ಹೆಂಡತಿಯರಾದ ಬಾಲಮ್ಮ-ನಾಗಮ್ಮರನ್ನು ಒಪ್ಪಿಸಬೇಕು" ಎಂದು ಹೇಳುತ್ತಾನೆ. ಕರೀಓಬಿಯು ಕರಡಿ ಬುಳ್ಳಪ್ಪನ ಮನೆಗೆ ಹೋಗುತ್ತಾಳೆ. ದೊರೆಸ್ವಾಮಿ ಬಂದಿರುವುದನ್ನು ನೋಡಿದ ಕರಡಿ ಬುಳ್ಳಪ್ಪನ ಹೆಂಡತಿಯರು, ಸಂತೋಷದಿಂದ ಬಗೆ ಬಗೆಯ ಅಡುಗೆಗಳನ್ನು ಮಾಡಿ ಊಟಕ್ಕೆ ಕರೆಯುತ್ತಾರೆ. ಆದರೆ ಕರೀಓಬಿಯು ಉಣ್ಣಲು ನಿರಾಕರಿಸುತ್ತಾಳೆ. ಬಾಲಮ್ಮ ನಾಗಮ್ಮರು ಅದಕ್ಕೆ ಕಾರಣವೇನೆಂದು ಕೇಳಿದರು. ಅದಕ್ಕೆ ಕರೀಓಬಿಯು, 'ನೀವು ಉಂಡು ಬಿಟ್ಟ ಎಂಜಲನ್ನು ಕೊಟ್ಟರೆ ಉಣ್ಣುತ್ತೇನೆ" ಎಂದಳು. ಬಾಲಮ್ಮ-ನಾಗಮ್ಮರು ಆಶ್ಚರ್ಯದಿಂದ ನಾವು ಉಂಡ ಎಂಜಲನ್ನು ನಿಮಗೆ ಇಕ್ಕುವುದು ಸಾಧ್ಯವೇ ಇಲ್ಲ" ಎಂದು ಹೇಳಿ ಕರೀಓಬಿಯನ್ನು ಊಟಮಾಡುವಂತೆ ಒತ್ತಾಯಿಸುತ್ತಾರೆ. ಆ ಹೊತ್ತಿನಲ್ಲಿ ಕರಡಿ ಬುಳ್ಳಪ್ಪನು ತನ್ನ ಮನೆಗೆ ಹಿಂದಿರುಗುತ್ತಾನೆ. ಇವರುಗಳ ನಡುವೆ ನಡೆಯುತ್ತಿದ್ದ ವಾದವನ್ನು ಕಂಡು, ಹೆಂಡತಿಯರಲ್ಲಿ ವಿಷಯವೇನೆಂದು ಕೇಳುತ್ತಾನೆ. ಅವರು ಕರೀಓಬಿಯ ಹಠವನ್ನು ಆತನಿಗೆ ವಿವರಿಸುತ್ತಾರೆ. ಅದಕ್ಕೆ ಕರಡಿಬುಳ್ಳಪ್ಪನು "ಅಯ್ಯೋ ಮಂಗ ಮುಂಡೇರಾ...., ಅವಳು ಬಿಟ್ಟುಕೊಡುವಂತೆ ಕೇಳುತ್ತಿರುವುದು ನನ್ನನ್ನು. 'ಉಂಡ ಎಂಜಲು' ಅಂದರೆ, ಇಷ್ಟು ದಿನ ನೀವು ನಿಮ್ಮ ಗಂಡನ ಜೊತೆ ಹಂಚಿಕೊಂಡಿರುವ ಬದುಕು. ಅದನ್ನು ನೀವು ಈ ಕರೀಓಬಿಗೆ ಬಿಟ್ಟುಕೊಡಲು ತಯಾರಿರುವಿರಾ?" ಎಂದು ಕೇಳುತ್ತಾನೆ. ಅದಕ್ಕೆ ಬಾಲಮ್ಮ-ನಾಗಮ್ಮರಿಗೆ ಸಿಟ್ಟು ಬಂದು, ಕರೀ ಓಬಿಯನ್ನು ಮನ ಬಂದಂತೆ ಬಯ್ಯುತ್ತಾರೆ. ಅದಕ್ಕೆ ಕರೀಓಬಕ್ಕಳು, "ಕರಡಿಬುಳ್ಳಪ್ಪನನ್ನು ಬಿಟ್ಟು ಕೊಡದಿದ್ದರೆ, ಕರಡಿಬುಳ್ಳಪ್ಪನ ಮನೆಗೆ ಹುಲ್ಲ ಬಂದಿ ಕೇಳಲು ಹೋದಾಗ, ನನ್ನ ಮಾನಭಂಗ ಮಾಡಿದರು ಎಂದು ಊರಿಗೆಲ್ಲ ಢಂಗೂರ ಸಾರುತ್ತೇನೆ. ಆಗ ನಿಮ್ಮ ಕುಲದ ಮರ್ಯಾದಿ ಹೋಗುವುದಿಲ್ಲವೇ" ಎಂದು ಅವರನ್ನು ಬೆದರಿಸಿ ಅಲ್ಲಿಂದ ಹೊರಟು ಬಿಡುತ್ತಾಳೆ. ಅದಕ್ಕೆ ಕರಡಿ ಬುಳ್ಳಪ್ಪನ ಹೆಂಡತಿಯರು ತಮ್ಮ ಕುಲದ ಮರ್ಯಾದೆಯನ್ನು ಕಳೆದುಕೊಳ್ಳಬಾರದೆಂದು ತೀರ್ಮಾನಿಸಿ, ತಾವು ತಮ್ಮ ಗಂಡನನ್ನು ಕರೀಓಬಕ್ಕಳಿಗೆ ಬಿಟ್ಟುಕೊಡಲು ನಿರ್ಧರಿಸಿದರು. ಸಮಾಧಾನ ಹೊಂದದ ಕರಡಿ ಬುಳ್ಳಪ್ಪ ತನ್ನ ಮಾವಂದಿರಿಗೆ ಈ ವಿಷಯವನ್ನು ತಿಳಿಸುತ್ತಾನೆ. ಅವರು, "ಹುಲ್ಲು ಬಂದಿ ಕಟ್ಟುವ ಕೆಲಸವಾದ್ರೂ ಇಲ್ಲವಾಗುತ್ತದೆ" ಎಂದು ಅಪಹಾಸ್ಯ ಮಾಡಿ, ಕರೀಓಬಕ್ಕಳ ಮಾತಿಗೆ ಒಪ್ಪುವಂತೆ ಹೇಳುತ್ತಾರೆ. ಕರಡಿಬುಳ್ಳಪ್ಪನು ಕರೀಓಬಿಯ ಮನೆಗೆ ಹೋಗುತ್ತಾನೆ. ಕರೀಓಬಿಯು ಪನ್ನೀರನ್ನು ಕೊಟ್ಟು ಅವನನ್ನು ಶಯ್ಯಾಗೃಹದ ಒಳಗೆ ಕರೆಯುತ್ತಾಳೆ. ಆದರೆ ಕರಡಿಬುಳ್ಳಪ್ಪನು ಒಳಗೆ ಹೋಗದೇ, ಶರತ್ತೊಂದನ್ನು ಅವಳ ಮುಂದಿಡುತ್ತಾನೆ. "ದಿನವೊಂದರಲ್ಲಿ ನಾನು ಹೇರು ಕಟ್ಟಿಕೊಂಡು ಹೋಗಿ ಉಳುಮೆ ಮಾಡಿದಷ್ಟು ಜಾಗವನ್ನು ನನಗೆ ಬಿಟ್ಟುಕೊಡುವುದಾದರೆ, ನಾನು ನಿನ್ನೊಡನೆ ಬದುಕು ನಡೆಸಲು ಸಿದ್ಧನಿದ್ದೇನೆ" ಎಂದು ಹೇಳುತ್ತಾನೆ. ಇದಕ್ಕೆ ಕರೀಓಬಿಯು ಒಪ್ಪುತ್ತಾಳೆ. ಕರಡಿಬುಳ್ಳಪ್ಪನು ದಿನವೊಂದರಲ್ಲಿ ಕತ್ತಲಾಗುವುದರೊಳಗೆ, ಚಿತ್ರದುರ್ಗ, ಹಿರಿಯೂರು, ಶಿರಾ,

ಪಾವಗಡ, ತುಮಕೂರು ಸುತ್ತಮುತ್ತಲಿನ ಜಾಗಗಳಲ್ಲಿ ಹೊನ್ನಾರು ಹೊಡೆದುಕೊಂಡು ಬಂದು ಆ ಎಲ್ಲಾ ಜಾಗಗಳನ್ನು ತನಗೆ ಬಿಟ್ಟುಕೊಡುವಂತೆ ಹೇಳುತ್ತಾನೆ. ಕರೀಓಬಿಯು ಕೊಟ್ಟ ಮಾತಿನಂತೆ ಆ ಜಾಗಗಳನ್ನು ಕರಡಿಬುಳ್ಳಪ್ಪನಿಗೆ ಬಿಟ್ಟು ಕೊಡುತ್ತಾಳೆ. ಕರಡಿಬುಳ್ಳಪ್ಪನು ಕರೀಓಬಿಯೊಡನೆ ಸಂಬಂಧವನ್ನು ಬೆಳೆಸುತ್ತಾನೆ. ಮುಂದೆ ಇವರಿಗೆ ಮಕ್ಕಳಾಗುತ್ತವೆ. ಕರೀಓಬಿಯು ತಾನು ಕೊಟ್ಟಿದ್ದ ಜಾಗದಲ್ಲಿ ತನ್ನ ಮಕ್ಕಳಿಗೆ ಪಾಲು ಕೇಳುತ್ತಾಳೆ. ಆದರೆ ಇದಕ್ಕೆ ಕರಡಿ ಬುಳ್ಳಪ್ಪ ಒಪ್ಪುವುದಿಲ್ಲ. ಬದಲಾಗಿ, ಡೆಲ್ಲಿಯಿಂದ ತಂದು ಮಾಯಚಂದ್ರದಲ್ಲಿಟ್ಟಿದ್ದ 'ಕರಿಯಮ್ಮ ತಾಯಿ'ಯ ಪೂಜಾರಿಕೆಯನ್ನು ಅವರಿಗೆ ವಹಿಸಿಕೊಡುವುದಾಗಿ, ಹಾಗೂ ನಿನ್ನ ಹೆಸರು ಉಳಿಯಲು 'ಕರೇಓಬೇನಳ್ಳಿ' ಎಂಬ ಕಟ್ಟೆ ಮನೆಯನ್ನು ಕರಡಿಗೊಲ್ಲರಿಗಾಗಿ ನಿರ್ಮಿಸುವುದಾಗಿ ಹೇಳುತ್ತಾನೆ. ಈಗಲೂ ಶಿರಾ, ಪಾವಗಡ, ತುಮಕೂರು ತಾಲೂಕಿನ ಅನೇಕ ಕಡೆ ಕರಡಿಗೊಲ್ಲರು ಹೆಚ್ಚಾಗಿದ್ದು ಆ ಪ್ರದೇಶಗಳನ್ನು ಕರಡಿಬುಳ್ಳಪ್ಪನ ಜಾಗಗಳು ಎಂದು ಹೇಳುತ್ತಾರೆ. ಕರೀಓಬಕ್ಕನ ಮಕ್ಕಳ ಹೆಸರುಗಳು ಈ ಭಾಗದಲ್ಲಿ ಎಲ್ಲಿಯೂ ದೊರೆತಿಲ್ಲ. ಕರಡಿ ಬುಳ್ಳಪ್ಪನ ಸಮಾಧಿ ಹಾಗೂ ಅವನ ಮಕ್ಕಳಾದ ಚಿತ್ತಮುತ್ತಿ–ಮಾರಮುತ್ತಿಯರ ಸಮಾಧಿಗಳು ಇಲ್ಲಿವೆ ಎಂಬುದು ತಿಳಿದುಬಂದಿದೆ.

ಈವರೆಗಿನ ಅಧ್ಯಯನಕಾರರು ನೀಡಿರುವ ಕೆಲವು ಐತಿಹ್ಯಗಳು:

ಕರಡಿಗೊಲ್ಲರ ಹುಟ್ಟಿನ ಕುರಿತಾದಂತೆ ಈಗಾಗಲೇ ಅಧ್ಯಯನ ನಡೆಸಿರುವ ಅಧ್ಯಯನಕಾರರು ತಮ್ಮ ಕೃತಿಗಳಲ್ಲಿ ಈ ಸಮುದಾಯದ ಬಗೆಗೆ ಹಲವಾರು ಐತಿಹ್ಯಗಳನ್ನು, ಕತೆಗಳನ್ನು ನೀಡಿದ್ದಾರೆ. ಈ ಕೃತಿಯನ್ನು ತೌಲನಿಕವಾಗಿ ಅಭ್ಯಸಿಸಲು ಅಗತ್ಯವಾದ ಕೆಲವೊಂದನ್ನು ಯಥಾವತ್ತಾಗಿ ಸಂಗ್ರಹಿಸಿ ಇಲ್ಲಿ ನೀಡಲಾಗಿದೆ.

'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು'[೩]

"ಕಾಟಮ್ಮ ಎಂಬ ಕಾಡುಗೊಲ್ಲರ ಹೆಂಗಸಿಗೆ ಚಿತ್ತಯ್ಯ– ಕಾಟಯ್ಯ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಕಾಟಮ್ಮ ಎಂಬ ಒಬ್ಬಳು ಹೆಣ್ಣಮಗಳೂ ಇದ್ದರು.

೩. ತೀ.ನಂ. ಶಂಕರನಾರಾಯಣ, *ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೯೯೪.*

ಚಿತ್ತಯ್ಯ ಹಾಗೂ ಕಾಟಯ್ಯ ದನಗಳನ್ನು ಮೇಯಿಸಲು ಕಾಡಿಗೆ ಹೋಗುತ್ತಿದ್ದರು. ಅವರಿಗೆ ತಂಗಿ ಕಾಟಮ್ಮಳು ದಿನಾ ಬುತ್ತಿಯನ್ನು ಕೊಂಡು ಹೋಗುತ್ತಿದ್ದಳು. ಪ್ರತಿನಿತ್ಯ ಒಂದು ಕರಡಿ ಎದುರಾಗಿ ಆ ಬುತ್ತಿಯನ್ನು ತನಗೆ ಕೊಡುವಂತೆ ಕೇಳುತ್ತಿತ್ತು. ಅದರ ಕಾಟವನ್ನು ತಡೆಯಲಾರದೆ ಕಾಟಮ್ಮ ಒಂದು ದಿನ ಸಗಣಿ ಉಂಡೆಯನ್ನು ಬುತ್ತಿ ಕಟ್ಟಿ, ಅದನ್ನು ಕರಡಿಗೆ ಕೊಟ್ಟಳು. ಮೋಸ ಹೋದ ಕರಡಿಯು ಕಾಟಮ್ಮಳಿಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ಅವಳನ್ನು ಹೊತ್ತೊಯ್ದು ತನ್ನ ಗವಿಯಲ್ಲಿ ಇಟ್ಟುಕೊಂಡಿತು. ಅಲ್ಲಿ ಅವಳಿಗೆ ಎರಡು ಕರಡಿ ಮರಿಗಳು ಜನಿಸಿದವು. ಎಷ್ಟು ಹುಡುಕಿದರು ಸಿಗದ ಕಾಟಮ್ಮ ಒಂದು ದಿನ ಅಣ್ಣಂದಿರಿಗೆ ಗವಿಯ ಹತ್ತಿರ ಸಿಕ್ಕಿದಳು. ಅವಳನ್ನು ಊರಿಗೆ ಕರೆತಂದು ಚಿತ್ತಯ್ಯ ಎಂಬುವನಿಗೆ ಮದುವೆ ಮಾಡಿದರು. ಕರಡಿ ಗವಿಗೆ ಬಂದುನೋಡಿದಾಗ ಕಾಟಮ್ಮ ಇಲ್ಲದಿರುವುದು ತಿಳಿದು, ಮತ್ತೆ ಮೋಸ ಮಾಡಿದಳೆಂದು ಬಳೆಗಾರನ ವೇಷವನ್ನು ಧರಿಸಿ ಹಲವಾರು ವರ್ಷಗಳು ಹುಡುಕಿತು. ಇತ್ತ ಮದುವೆಯಾದ ನಂತರ ಕಾಟಮ್ಮಳಿಗೆ ಹುಟ್ಟಿದ ಮಕ್ಕಳೆಲ್ಲಾ ಸತ್ತು ಹೋಗಿದ್ದವು. ಕರಡಿಯು ಬಳೆಗಾರನ ವೇಷದಲ್ಲಿ ಕಾಟಮ್ಮನ ಮನೆಯ ಹತ್ತಿರ ಬಂದಾಗ ಕಾಟಮ್ಮಳು ಬಂದಿರುವುದು ಕರಡಿಯೇ ಎಂದು ಗುರುತು ಹಿಡಿಯುತ್ತಾಳೆ. ಕಾಟಮ್ಮನ ಕೈಯಲ್ಲಿ ಒಂದು ಬಳೆಯೂ ಇಲ್ಲದಿರುವ ಕಾರಣ ಅಣ್ಣಂದಿರು ಬಳೆಯನ್ನು ತೊಡುವಂತೆ ಆಕೆಗೆ ಬಲವಂತ ಮಾಡುತ್ತಾರೆ. ಆಗ ಅವಳು ಕರಡಿಯ ಮುಂದೆ ಕೂತು ಬಳೆ ತೊಡಿಸುವಂತೆ ಕೈ ನೀಡಿದಾಗ ಅವಳ ಕೈಯನ್ನು ಕರಡಿಯು ಬಲವಾಗಿ ಹಿಸುಕಿತು. ಆಗ ಕಾಟಮ್ಮ ತನ್ನ ತಪ್ಪನ್ನು ಒಪ್ಪಿಕೊಂಡು ಕ್ಷಮಿಸುವಂತೆ ಬೇಡಿಕೊಳ್ಳುತ್ತಾಳೆ. ಆಗ ಕರಡಿಯು "ನೀನು ಕರಡಿ ಮರಿಗಳನ್ನು ಕೊಂದಿರುವ ಕಾರಣ ನಿನ್ನ ಮಕ್ಕಳು ಸತ್ತು ಹೋಗಿದ್ದಾರೆ. ಮುಂದೆ ನಿನಗೆ ಹುಟ್ಟುವ ಮಕ್ಕಳಿಗೆ 'ಕರಡಿಬುಳ್ಳಪ್ಪ' ಎಂದು ಹೆಸರಿಟ್ಟರೆ ಒಳ್ಳೆಯದಾಗುವುದು ಎಂದು ಹೇಳಿ ಅಲ್ಲಿಂದ ಹೊರಟು ಹೋಯಿತು. ನಂತರದ ವರ್ಷದಲ್ಲಿ ಕಾಟಮ್ಮನಿಗೆ ಒಂದು ಗಂಡು ಮಗು ಜನಿಸುತ್ತದೆ. ಆ ಮಗುವಿಗೆ 'ಕರಡಿ ಬುಳ್ಳಪ್ಪ' ಎಂದು ಹೆಸರಿಟ್ಟರು. ಇವರೇ ಮುಂದೆ ಕರಡಿಗೊಲ್ಲ ವಂಶಸ್ಥರೆಂದು ಕರೆಯಿಸಿಕೊಂಡರು". ತೀ. ನಂ. ಶಂಕರನಾಯಣ ಅವರು ಸಂಗ್ರಹಿಸಿದ ಈ ಕಥೆಗೆ ಭಿನ್ನವಾದ ಪಠ್ಯವನ್ನು ನಾವು ಪ್ರಸ್ತುತ ಕೃತಿಯಲ್ಲಿ ನೀಡಿದ್ದೇವೆ. ಮೀರಾಸಾಬಿಹಳ್ಳಿ ಶಿವಣ್ಣ ಅವರು ಕರಡಿಗೊಲ್ಲರ ಹುಟ್ಟಿನ ಕುರಿತಂತೆ ತಮ್ಮ ಲೇಖನವೊಂದರಲ್ಲಿ ಇದಕ್ಕೆ ಪೂರಕವಾದ ಕಥೆಯೊಂದನ್ನು

ನೀಡಿದ್ದಾರೆ. ಎಸ್. ಶಿವಣ್ಣ ಅವರು ತಮ್ಮ 'ಕಾಡುಗೊಲ್ಲರ ಸಾಂಸ್ಕೃತಿಕ ವೀರರು' ಎಂಬ ಕೃತಿಯಲ್ಲಿ ಕರಡೇರು ಗೊಲ್ಲರ ಕುರಿತ ಇನ್ನೊಂದು ಕಥೆಯನ್ನು ನೀಡಿದ್ದಾರೆ. ಈ ಎಲ್ಲಾ ಪಠ್ಯಗಳಲ್ಲೂ ಕರಡಿಯಂಥ ಕಾಡು ಪ್ರಾಣಿಗೂ ಮನುಷ್ಯನಿಗೂ ಸಂಬಂಧ ಕಲ್ಪಿಸಿದುದು ಮಾತ್ರ ಸಮಾನ ಅಂಶವಾಗಿ ಕಾಣಿಸಿಕೊಳ್ಳುತ್ತದೆ.

ತೀ.ನಂ. ಶಂಕರನಾರಾಯಣನವರು ಮಾರನವರಗೊಲ್ಲರ ಕುರಿತಂತೆಯೂ ಒಂದು ಕಥೆ[೪]ಯನ್ನು ತಮ್ಮ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಕೃತಿಯಲ್ಲಿ ನೀಡಿದ್ದಾರೆ. ಕರಡಿಗೊಲ್ಲರಲ್ಲಿ ಅಣ್ಣ ತಮ್ಮಂದಿರಿಬ್ಬರು ಒಬ್ಬ ಸಾಹುಕಾರನ ಬಳಿ ಸಾಲ ಮಾಡಿದರು. ಎಷ್ಟು ವರ್ಷವಾದರೂ ಅದನ್ನು ತೀರಿಸಲಿಲ್ಲ. ಬಡ್ಡಿ ಬೆಳೆಯುತ್ತಲೇ ಹೋಯ್ತು. ಕೊನೆಗೆ ಸಾಹುಕಾರ ಅವರಿಬ್ಬರನ್ನು ಕರೆಸಿ ತನ್ನ ಸಾಲವನ್ನು ಬಡ್ಡಿ ಸಮೇತ ತೀರಿಸಬೇಕೆಂದು ಕಟುವಾಗಿ ಹೇಳಿದ. ಆಗ ಅವರು ತಮ್ಮ ಬಳಿ ಹಣವಿಲ್ಲವೆಂದೂ ತಮ್ಮ ಹೆಂಗಸರ ಬಳಿ ಇದ್ದ ಚಿನ್ನದ ಆಭರಣಗಳನ್ನು ಕೊಡುವುದಾಗಿ ಹೇಳಿ ಅದರಂತೆಯೇ ತಮ್ಮ ಹೆಂಗಸರ ಬಳಿಗೆ ಹೋಗಿ ಆಭರಣಗಳನ್ನು ಕೊಡಬೇಕೆಂದು ಕೇಳಿದರು. ಆ ಹೆಂಗಸರು ಆಭರಣಗಳನ್ನು ಕೊಡಲು ಮೊದಲು ಒಪ್ಪಲಿಲ್ಲ. ಆದರೆ ತಮ್ಮ ಗಂಡಂದಿರ ಬಲವಂತಕ್ಕಾಗಿ ಅವುಗಳನ್ನು ಕೊಡಬೇಕಾಯಿತು. ಆ ಆಭರಣಗಳನ್ನು ತೆಗೆದುಕೊಂಡು ಅಣ್ಣ ಮತ್ತು ತಮ್ಮ ಸಾಹುಕಾರನ ಮನೆಗೆ ಬಂದರು. ಸಾಹುಕಾರ ಚಿಂತಾಲನ್ನು ಇಟ್ಟುಕೊಂಡು ಸಿದ್ದವಾಗಿದ್ದ. ಆಭರಣಗಳನ್ನು ತೂಕ ಹಾಕಿದಾಗ ಸ್ವಲ್ಪ ಮಾತ್ರ ತೂಕ ಕಡಿಮೆ ಇರುವುದು ಕಂಡು ಬಂದಿತು. ಅಣ್ಣ ಮತ್ತು ತಮ್ಮನ ಬಳಿ ಬೇರೆ ಯಾವ ಆಭರಣವೂ ಉಳಿದಿರಲಿಲ್ಲ. ಆಗ ತಮ್ಮ ಹೆಂಡಿರ ಕೊರಳಿನ ಮಾಂಗಲ್ಯವನ್ನು ತೆಗೆದುಕೊಂಡು ಬಂದು ತೂಕಕ್ಕೆ ಹಾಕಬೇಕೆಂದು ಸಾಹುಕಾರ ಅವರಿಗೆ ಹೇಳಿದ. ಅದಕ್ಕೆ ಅಣ್ಣ ಒಪ್ಪಿಕೊಂಡು ತನ್ನ ಹೆಂಡತಿಯ ಕೊರಳಿನ ಮಾಂಗಲ್ಯವನ್ನು ತಂದು ಹಾಕಿದ. ತೂಕ ಸರಿಹೋಯಿತು. ಆದರೆ ತಮ್ಮ ಮಾತ್ರ ತನ್ನ ಹೆಂಡತಿಯ ಮಾಂಗಲ್ಯವನ್ನು ತೂಕಕ್ಕೆ ಹಾಕಲು ಒಪ್ಪದೆ ತನ್ನ ಹಟ್ಟಿಗೆ ಹಿಂದಿರುಗಿ ಬಂದ. ಹೆಂಡತಿಯ ತಾಳಿಯನ್ನು ಮಾರಿ ಸಾಲ ತೀರಿಸಿ ಮರ್ಯಾದೆಯನ್ನು ಉಳಿಸಿಕೊಂಡ ಅಣ್ಣನ ಬಗ್ಗೆ ಹಟ್ಟಿಯವರಿಗೆ ಹೆಚ್ಚಿನ ಅಭಿಮಾನ ಉಂಟಾಯಿತು. ಕರೇಓಬೇನಹಳ್ಳಿಯ ಮಾರಮ್ಮನನ್ನು ಪೂಜಿಸುವ ಎಲ್ಲಾ ಕರಡಿ ಗೊಲ್ಲರೂ ಮದುವೆಯಲ್ಲಿ ಹೆಣ್ಣಿಗೆ ತಾಳಿ ಕಟ್ಟಕೂಡದೆಂದು ಕೇವಲ ಹಾರವನ್ನು ಮಾತ್ರ ಹಾಕಬೇಕೆಂದು ತೀರ್ಮಾನಮಾಡಿ ಅಣ್ಣನನ್ನು ಗೌರವಿಸಿದರು. ಆದರೆ ತಮ್ಮ ತನ್ನ ಹೆಂಡತಿಯ ಮಾಂಗಲ್ಯವನ್ನು ತೆಗೆಯದಿದ್ದುದರಿಂದ ಅವನು ಮಾರಮ್ಮನನ್ನು ಪೂಜಿಸಕೂಡದೆಂದು ಆಜ್ಞೆ ಮಾಡಿದರು. ಅವನ ಹೆಸರು ಮಾರಮುತ್ತಿ ಎಂದು ಇದ್ದುದರಿಂದ ಅವನ ವಂಶಸ್ಥರನ್ನು ಮಾರನವರ ಗೊಲ್ಲರು ಎಂದು ಕರೆಯುವ ಪದ್ಧತಿ ಬಳಕೆಗೆ ಬಂದಿತು. ಮಾರನವರ ಗೊಲ್ಲರಲ್ಲಿ ಮದುವೆಯ ಸಂದರ್ಭದಲ್ಲಿ ಹೆಣ್ಣಿಗೆ ತಾಳೀ ಕಟ್ಟುವ ಸಂಪ್ರದಾಯ ಮುಂದುವರೆದುಕೊಂಡು ಬಂದಿದೆ. ಆದ್ದರಿಂದ ಅವರನ್ನು ತಾಳಿ ಕಟ್ಟುವ ಕರಡಿಗೊಲ್ಲರೆಂದು ಕರೆಯುತ್ತಾರೆ.

'ಕಾಡುಗೊಲ್ಲರ ಸಾಂಸ್ಕೃತಿಕ ವೀರರು'[೫]

ಈ ಕೃತಿಯಲ್ಲಿ ಕೊಡಲಾದ ಒಂದು ಕಥೆಯು ನಾವು ನೀಡಿರುವ ಗೀತ ಸಾಹಿತ್ಯದೊಂದಿಗೆ ಹೆಚ್ಚು ಸಾಮ್ಯತೆಯನ್ನು ಹೊಂದಿದೆ. ಆದರೆ ಇನ್ನೊಂದು ಕಥೆಯು ಇದಕ್ಕೆ ಸಂಪೂರ್ಣವಾಗಿ ಭಿನ್ನವಾಗಿದೆ. ಅದರಲ್ಲೂ ಈ ಕಥೆಯು ಪುರಾಣ ವಸ್ತುವನ್ನು ಒಳಗೊಂಡಿರುವುದು ಗಮನಾರ್ಹ ಸಂಗತಿಯಾಗಿದೆ.

೪. ತೀ.ನಂ. ಶಂಕರನಾರಾಯಣ, ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೯೪.

೫. ಶಿವಣ್ಣ ಎಸ್.*ಕಾಡುಗೊಲ್ಲರ ಸಾಂಸ್ಕೃತಿಕ ವೀರರು*, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭಾಷಾಭಿವೃದ್ಧಿ ಯೋಜನೆ, ತುಮಕೂರು ವಿಶ್ವವಿದ್ಯಾಲಯ, ತುಮಕೂರು ೨೦೧೧

"ಕಾಡಿನಲ್ಲಿದ್ದ ಜಾಂಬವಂತನಿಗೆ ಅತಿಯಾದ ಸೆಕೆಯಾಗಿ ತನ್ನ ಮೈಯೆಲ್ಲ ಬೆವರುತ್ತದೆ. ಮೈಯ ಬೆವರನ್ನೆಲ್ಲ ಒರೆಸಿಕೊಂಡಾಗ ಜಾಂಬುವಂತನ ಕೈಗೆ ಒಂದು ಉಂಡೆ ಗಾತ್ರದ ಮಣ್ಣು ಸಿಕ್ಕುತ್ತದೆ. ಆ ಮಣ್ಣಿನಿಂದ ಒಂದು ಹೆಣ್ಣಿನ ರೂಪ ಮಾಡಿದ ಜಾಂಬುವಂತ ಅದಕ್ಕೆ ಜೀವಕಳೆ ಕೊಡುತ್ತಾನೆ. ತನ್ನ ಬೆವರಿಂದ ಜನಿಸಿದರಿಂದ ಜಾಂಬುವತಿ ಎಂದು ಹೆಸರಿಡುತ್ತಾನೆ. ಹೀಗೆ ಕಾಲ ಉರುಳುತ್ತಾ ಬೆಳೆದ ಹೆಣ್ಣು ಮಗು ಜಾಂಬುವತಿ ಋತುಮತಿಯಾಗುತ್ತಾಳೆ. ಅಷ್ಟೊತ್ತಿಗಾಗಲೇ ಜಾಂಬವಂತನಿಗೆ ವೃದ್ಧಾಪ್ಯ ಮುಗಿದು ಸಾವು ಹತ್ತಿರವಾಗುತ್ತದೆ. ಆಗ ಜಾಂಬವಂತನಿಗೆ ಮಗಳು ಜಾಂಬವಂತಿಯ ಚಿಂತೆ ಕಾಡುತ್ತದೆ. ಅದೇ ಸಮಯಕ್ಕೆ ಸರಿಯಾಗಿ ಕೃಷ್ಣನಿಗೆ ಜಾಂಬುವಂತನ ಬಳಿಯಿದ್ದ ಶಮಂತಕ ಮಣಿ ಬೇಕಾಗುತ್ತದೆ. ಅದನ್ನು ಹೇಗಾದರೂ ಪಡೆಯಲು ಕೃಷ್ಣ ಹಂಬಲಿಸುತ್ತಾನೆ. ಆಗ ಜಾಂಬವಂತ, "ನನ್ನ ಮಗಳು

ಜಾಂಬುವತಿಯನ್ನು ಮದುವೆಯಾಗುವುದಾದರೆ ನಾನು ನಿನಗೆ ಶಮಂತಕ ಮಣಿ ಕೊಡುತ್ತೇನೆ" ಎನ್ನುತ್ತಾನೆ. ಅದಕ್ಕೆ ಕೃಷ್ಣ ಒಪ್ಪಿ ಜಾಂಬುವತಿಯನ್ನು ಮದುವೆಯಾಗುತ್ತಾನೆ. ಮದುವೆಯಾದ ಕೆಲವು ದಿನಗಳಲ್ಲಿ ಜಾಂಬುವಂತ ತೀರಿಕೊಳ್ಳುತ್ತಾನೆ. ಜಾಂಬುವಂತನ ತಿಥಿ ಸಂಸ್ಕಾರಗಳು ಮುಗಿದ ಕೆಲವೇ ದಿನಗಳಲ್ಲಿ ಜಾಂಬುವತಿಗೆ ಒಂದು ಗಂಡುಮಗು ಜನಿಸುತ್ತದೆ. ಆಗ ಕೃಷ್ಣ ನಾನು ಬಂದ ಕೆಲಸ ಮುಗಿಯಿತು ನಾನು ಹೊರಡುತ್ತೇನೆ ಎನ್ನುತ್ತಾನೆ. ಅಯ್ಯೋ ದೇವರೆ ನೀನು ಹೋದರೆ ನಾನೇನು ಮಾಡ್ಲಿ. ಮಗುನ ಹೇಗೆ ಸಾಕಲಿ ಎಂದು ಜಾಂಬುವತಿ ಕೇಳುತ್ತಾಳೆ. ಹೇಗೋ ನೀನು ಜಾಂಬವಂತನ ಬೆವರಿಂದ ಹುಟ್ಟಿದವಳು. ಜಾಂಬುವಂತ ಕರಡಿಯಾಗಿದ್ದವನು. ಕರಡಿವಂಶದವರಾಗಿದ್ದರಿಂದ ಈನಮ್ಮ ಮಗನಿಗೆ 'ಕರಡಿಬುಳ್ಳಪ್ಪ' ಎಂದು ನಾಮಕರಣ ಮಾಡೋಣ. ಕರಡಿ ಬುಳ್ಳಪ್ಪನ ಸಂತತಿಯು ಮುಂದೆ 'ಕರಡೇರಗೊಲ್ಲ'ರಾಗಿ ಬೆಳೆಯಲಿ" ಎಂದು ಕೃಷ್ಣ ಹೇಳುತ್ತಾನೆ.

ಕಾಡುಗೊಲ್ಲರ ಕಾವ್ಯಗಳು[೬]

"ಚಿತ್ತಮುತ್ತಿ, ಚಂದಮುತ್ತಿ ಅಣ್ಣತಮ್ಮಂದಿರು. ಪಶುಪಾಲನೆ ಮಾಡಿಕೊಂಡಿದ್ದರು. ಚಂದಮುತ್ತಿ ಮಗಳೇ ಅಕ್ಕಮಂಚಿ ಕಾಟಮ್ಮ. ಈಕೆಯನ್ನು ಸೋದರಮಾವ ಮ್ಯಾಕೆ ಮಾರಗೊಂಡನಿಗೆ ಕೊಡುವುದೆಂದು ಮಾತಾಗಿತ್ತು. ಒಮ್ಮೆ ಪೇಟೆಗೆ ಮೊಸರು ಮಾರಲು ಹೋಗಿ ತಡವಾಗಿ ಮನೆಗೆ ಹಿಂದಿರುಗುತ್ತಿದ್ದ ಅಕ್ಕಮಂಚಿ ಕಾಟಮ್ಮ ಕತ್ತಲಾಗಿದ್ದರಿಂದ ಕಣ್ಣು ಕಾಣದೆ ಗುಂಡಿಯಲ್ಲಿ ಬಿದ್ದವಳನ್ನು ಬಂಟನಗವಿಯ ಕರಡಿ ಹೊತ್ತುಕೊಂಡು ಹೋಗಿ ಗವಿಯಲ್ಲಿ ಕೂಡಿ ಹಾಕಿ ತನ್ನನ್ನೇ ಮದುವೆಯಾಗುವಂತೆ ಪಟ್ಟು ಹಿಡಿಯಿತು. ಕಾಟಮ್ಮನಿಗೆ ಅಡಿಗೆ ಮಾಡಿಕೊಳ್ಳಲು ಬೆಂಕಿ ತರಹೋಗಿ ಮೈಸುಟ್ಟುಕೊಂಡು ಕೂದಲು ಇಲ್ಲವಾದವು. ಕರಡಿ ಮಲೆನಾಡಿಗೆ ಹೋಗಿ ಮೈಯಲ್ಲಿ ಕೂದಲು ಬಂದ ನಂತರ ಬರುತ್ತೇನೆ ನಾನು ಬರುವವರೆಗೂ ತನ್ನ ಮರಿಗಳನ್ನು ಕಾಪಾಡು ಎಂದು ಹೇಳಿ ಗವಿಗೆ ಗುಂಡುದಬ್ಬಿ ಹೋಯಿತು. ಕಾಟಮ್ಮನಿಗೋಸ್ಕರ ಹುಡುಕುತ್ತಿದ್ದ ಮ್ಯಾಕೆ ಮಾರಗೊಂಡನಿಗೆ ಆಕಸ್ಮಾತ್ ಸುಳಿವು ಸಿಕ್ಕು, ಗುಂಡು ದಬ್ಬಿ ಗವಿ ಹೊಕ್ಕು ಕರಡಿಮರಿಗಳನ್ನು ಕೊಂದು ಕಾಟಮ್ಮನನ್ನು ಕರೆದುಕೊಂಡು ಬಂದು ಮದುವೆಯಾದ. ಮಲೆನಾಡಿನಿಂದ ಹಿಂದಿರುಗಿದ ಕರಡಿ ತನ್ನ ಮಕ್ಕಳನ್ನು ಕೊಂದ ಸೇಡು ತೀರಿಸಿಕೊಳ್ಳಲು ಬಂದಾಗ ಮಾರಗೊಂಡನ ಕೈಗೆ ಸಿಕ್ಕು ಹತವಾಯಿತು. ನಂತರ ಅವರಿಗೆ ಹುಟ್ಟಿದ ಮಕ್ಕಳೆಲ್ಲ ಕರಡಿ ಆಕಾರದಲ್ಲಿ ಹುಟ್ಟತೊಡಗಿದ್ದರಿಂದ ದೇವರು ಕೇಳಿದಾಗ ಕರಡಿಯನ್ನು ಕೊಂದ ಪಾಪದಿಂದ ಹೀಗಾಗಿದೆ, ಹುಟ್ಟುವ ಮಕ್ಕಳಿಗೆ ಕರಡಿಯ ಹೆಸರು ಇಡಿ, ಶಾಪ ವಿಮೋಚನೆಯಾಗುತ್ತದೆ ಎಂದು ಬಂತು. ನಂತರ ಹುಟ್ಟಿದ ಮಕ್ಕಳಿಗೆ ಕಲ್ಡೆಪ್ಪ, ಕಲ್ಡಿದೊಡ್ಡ, ಕಲ್ಡಿ ಭಡವ, ಕಲ್ಡಿ ಮಾರ

೬. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಕಾವ್ಯಗಳು, ಪ್ರಚಾರ ಪುಸ್ತಕ ಮಾಲೆ ೩೧೧ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ೨೦೦೯

ಇತ್ಯಾದಿ ಹೆಸರಿಟ್ಟರು. ಇವರ ಸಂತತಿಯೇ 'ಕಲ್ಡೇರ ಗೊಲ್ಲರು' ಎಂದು ಹೆಸರಾಯಿತು. ಕರಡಿಗೊಲ್ಲರ ಗುಂಪೇ ಮುಂದೆ ತಾಳಿಕಟ್ಟದ, ತಾಳಿಕಟ್ಟುವ ಗುಂಪುಗಳಾಗಿ ಒಡೆದ ಕಥೆ ಸ್ವಾರಸ್ಯಕರವಾಗಿದೆ. ಹರತಿಕೋಟೆ ಪಾಳೆಯಗಾರನ ಮಗಳು ಕರಿಓಬಿ ಎಂಬವಳು ಕಪ್ಪೆ ಕಲಕದ ನೀರು, ಬಿಸಿಲಿಗೆ ಬಾಡದ ಹೂವು, ನಾಲ್ಕು ಏಣಿನ ಹಸಿರು ಕಲ್ಲುಕಂಭ, ತಲೆಗೆ ಮೆತ್ತನೆಯ ಕಲ್ಲು, ಕಾಯಿಸದೇ ಆಗಿರೋ ತುಪ್ಪ, ಒಂಟಿಕೊಂಬಿನ ಮೇಕೆ ಹೋತ ತಂದುಕೊಟ್ಟವರನ್ನು ವಿವಾಹ ಆಗ್ತೀನಿ. ಈ ಒಗಟು ಬಿಡಿಸದೆ ಸೋತವರು ಸಾವಿರ ವರಹ ದಂಡ ಕೊಡಬೇಕು ಎಂಬ ಕರಾರು ಹಾಕಿ ಹೇಮಾಹೇಮಿಗಳನ್ನು ಸೋಲಿಸಿ ಏಳು ಕೊಪ್ಪರಿಗೆ ಹೊನ್ನು ಸಂಪಾದಿಸಿದ್ದಳು. ಆದರೆ ಕಲ್ಡಿ ಬುಳ್ಳಣ್ಣ ಎಂಬ ಗೊಲ್ಲ ಇಂಥ ಸಾವಿರ ಒಗಟು ನನ್ನ ಜೇಬಿನಾಗೆ ಅದಾವೆ. ಕಪ್ಪೆ ಕಲಕದ ನೀರು ಅಂದರೆ ಎಳನೀರು, ಬಿಸಿಲಿಗೆ ಬಾಡದ ಹೂವು ಅಂದರೆ ನವಿಲುಗರಿ, ನಾಲ್ಕು ಏಣಿನ ಹಸಿರು ಕಲ್ಲುಕಂಭ ಅಂದರೆ ಮುಂಗುರವಳ್ಳಿ, ತಲೆಗೆ ಮೆತ್ತನೆ ಕಲ್ಲು ಎಂದರೆ ತೋಳು ದಿಂಬು, ಕಾಯಿಸದೇ ಆಗಿರೋ ತುಪ್ಪ ಎಂದರೆ ಜೇನುತುಪ್ಪ, ಒಂಟಿಕೊಂಬಿನ ಮೇಕೆ ಹೋತ ಎಂದರೆ ಕೋಳಿಹುಂಜ ಎಂದು ಒಗಟು ಬಿಡಿಸಿದ. ಮದುವೆಯಾಗು ಎಂದು ಬೆನ್ನು ಬಿದ್ದಳು. ಆದರೆ ಅಷ್ಟೊತ್ತಿಗೆ ಕಲ್ಡಿ ಬುಳ್ಳಣ್ಣನಿಗೆ ಮದುವೆಯಾಗಿತ್ತು. ಬಾಲಮ್ಮ- ನಾಗಮ್ಮ ಅಂತ ಇಬ್ಬರು ಹೆಂಡಿರಿದ್ದರು. ಅವರನ್ನು ಕಾಡಿ ಬೇಡಿ ಒಪ್ಪಿಸಿ ಮದುವೆಯಾದಳು. ಕರಿಯೋಬಿ ಬಂದು ನೆಲೆಸಿದ ಈ ಹಟ್ಟಿ ನಂತರ 'ಕರಿಯೋಬೇನಹಳ್ಳಿ' ಎಂದು ಹೆಸರಾಯಿತು. ಇಲ್ಲೇ ಈಕೆಯ ಸಮಾಧಿ ಇದೆ. ಇದು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನಲ್ಲಿದೆ. ಆದರೆ ಕರಿಯೋಬಿಗೆ ಮಕ್ಕಳಾಗಲಿಲ್ಲ.ಇನ್ನೊಬ್ಬ ಹೆಂಡತಿ ನಾಗಮ್ಮನಿಗೂ ಮಕ್ಕಳಿರಲಿಲ್ಲ. ಬಾಲಮ್ಮನಿಗೆ ಚಿತ್ತಮುತ್ತಿ ಮತ್ತು ಮಾರಮುತ್ತಿ ಅಂತ

ಇಬ್ಬರು ಗಂಡು ಮಕ್ಕಳು. ಹಿರಿಯವನಾದ ಚಿತ್ತುಮುತ್ತಿಯನ್ನು ದತ್ತು ತೆಗೆದುಕೊಂಡಳು. ಅವನು ದೊಡ್ಡವನಾದ ಮ್ಯಾಲೆ ನಾಯಕ (ಬ್ಯಾಡರು)ಕುಲದಲ್ಲಿ ಹೆಣ್ಣು ತೆಗೆದು ಮದುವೆ ಮಾಡುತ್ತಾಳೆ. ಕಿರಿಯವನಾದ ಮಾರಮುತ್ತಿಗೆ ಗೊಲ್ಲರ ಕುಲದಿಂದ ಹೆಣ್ಣೂ ತೆಗೆದು ಮದುವೆ ಮದುವೆ ಮಾಡುತ್ತಾಳೆ. ಇಬ್ಬರಿಗೂ ಏಳೇಳು ಮಕ್ಕಳಾಗಿ, ಅವರೂ ವಯಸ್ಸಿಗೆ ಬಂದು ಅವರಿಗೂ ಮದುವೆಯಾಗಿ ತಲಾ ಏಳೇಳು ಮಂದಿ ಸೊಸೆಯರೂ ಮನೆ ತುಂಬುತ್ತಾರೆ.

ಒಮ್ಮೆ ಆ ಹಳ್ಳಿಗೆ ವ್ಯಾಪಾರಕ್ಕೆ ಬಂದ ಮುತ್ತಿನ ಶೆಟ್ಟಿಯ ಬಳಿಯಿದ್ದ ಮುತ್ತಿನ ವಸ್ತ್ರ ಕಂಡು ನಮ್ಮತ್ತೆ ಏಳು ಕೊಪ್ಪರಿಗೆ ವರಹ ಸಂಪಾದಿಸಿದರೇನು ಇಂಥ ಒಂದು ಮುತ್ತಿನ ವಸ್ತ್ರ ಸಂಪಾದಿಸಲಿಲ್ಲ ಎಂದು ಹಾಸ್ಯ ಮಾಡಿ ನಕ್ಕರು. ಕರಿಯೋಬಜ್ಜಿ ಮಕ್ಕಳ ಬಳಿ ದುಃಖ ತೋಡಿಕೊಂಡಳು. ಅಷ್ಟರಲ್ಲಿ ಮುತ್ತಿನಶೆಟ್ಟಿ ಬೆಲೆಬಾಳುವ ತನ್ನ ವಸ್ತ್ರ ಕೊಳ್ಳುವವರಿಲ್ಲದೇ ಬೇರೆ ಊರಿಗೆ ಹೋಗುತ್ತಿದ್ದ. ಕರೆಯೋಬಜ್ಜಿ ಮಕ್ಕಳು ಹೋಗಿ ಶೆಟ್ಟಿಯನ್ನು ತಡೆದು, ಅಲ್ಲೇ ಹಟ್ಟಿಹಾಕಿಕೊಂಡು ಇದ್ದ ತನ್ನ ಬಂಧುಗಳೊಂದಿಗೆ ಶೆಟ್ಟಿಯ ಎತ್ತಿನ ಕೊರಳು ಕೊಯ್ದು ಮುತ್ತಿನವಸ್ತ್ರ ಅಪಹರಿಸಿ ತಂದರು. ಶೆಟ್ಟಿ ಹಾಕಿಸಿದ ಪಂಚಾಯಿತಿಯಲ್ಲಿ ಇವರು ದಂಡಕ್ಕೊಳಗಾಗಿ ತಮ್ಮಲ್ಲಿರುವ ಸಮಸ್ತವನ್ನು ಕಟ್ಟಿಕೊಟ್ಟರೂ ಅದು ಸರಿತೂಗದೆ ಕರಿಯೋಬಜ್ಜಿಯ ಸಾಕುಮಗ ಚಿತ್ತುಮುತ್ತಿಯ ಸೊಸೆಯರೆಲ್ಲ ತಮ್ಮ ಕೊರಳ ಮಾಂಗಲ್ಯ ತೆಗೆದುಕೊಟ್ಟರೂ ಸಮನಾಗಲಿಲ್ಲ! ಆದರೆ ಮಾರಮುತ್ತಿಯ ಸೊಸೆಯರೆಲ್ಲ ಮಾಂಗಲ್ಯ ತೆಗೆಯಲು ನಿರಾಕರಿಸಿದರು. ಇದೇ ಕಾರಣವಾಗಿ ಅಸಮಾಧಾನಗಳು ಬೆಳೆದು ಅಣ್ಣತಮ್ಮಂದಿರು ಬೇರೆಯಾದರು.

ಅರ್ಥಕೋಶ

ಬಂದುಲ = ಕಡಸೋರೆ, ಬಾನೆ, ಮಡಕೆ,
ಕೆಂದಾವು = ಕೆಂಪು ಬಣ್ಣದ ಹಸು
ಗುಜ್ಜರಿ = ಕಡಗೋಲು, ಮಂತು
ಗುದಿಯಗ್ಗ= ಜೋಡಿಯಾಗಿ ನೈದಿರುವ ಹಗ್ಗ
ಬೆಟ್ಟು = ಬೆರಳು
ದೂಳುಸಂಜೆ = ಹೊತ್ತು ಮುಳುಗುವ ಸಮಯ
ಒಬ್ಬಿ = ಗವಿ
ನೆಲ್ಲು= ಭತ್ತ
ಸಕ್ಕಂದ = ಸುಂದರವಾದ
ನಿಸ್ತ್ರೆ = ಹೆಂಗಸು
ಬತ = ಶೀಲ, ಮಾನ
ಮಗ = ಮೊಗ, ಮುಖ
ತೆಂಗಿನ ಬುಲ್ಡೆ = ತೆಂಗಿನ ಬುಲ್ಡೆ
ತರಗು = ಒಣಗಿದ ಎಲೆ
ವಜ್ಜುರ = ಸಮುದ್ರ
ಸಿಕ್ಕುಟ್ಟ = ಚಿಕ್ಕ ಗುಟ್ಟ
ಸಿಂತೋಲು = ತಕ್ಕಡಿ
ಮಡಗು = ಇಡು
ಕುಂಭ = ಮಡಕೆ
ಕಲಿ = ಕಲೆ, ಜೊತೆ ಸೇರು

ವಕ್ತೃ ವಿವರ

ಕೆಂಗಮ್ಮ:

ಕೆಂಗಮ್ಮ ಕಾಡುಗೊಲ್ಲ ಸಮುದಾಯದವರು. ಅದರಲ್ಲೂ ಮಾರನವರ ಗೊಲ್ಲ ಬೆಡಗಿನವರು. ನಾವು ಈ ಕೃತಿಯಲ್ಲಿ ಸಂಗ್ರಹಿಸಿದ ಕಾಟಮ್ಮನ ಹಾಡನ್ನು ಕೆಂಗಮ್ಮ ಹಾಡಿದ್ದಾರೆ. ಇವರಿಗೆ ಸುಮಾರು ೮೫ ವರ್ಷ ವಯಸ್ಸು. ಪಡಸಾಲೆಹಟ್ಟಿ ಗೌಡನ ಮನೆತನದವರು. ಇವರ ಊರು ತುಮಕೂರು ಜಿಲ್ಲೆ, ಮದುಗಿರಿ ತಾಲೂಕು, ಪಡಸಾಲ ಹಟ್ಟಿ. ತಮ್ಮ ಸಮುದಾಯದ ಕುರಿತಂತೆ ಇತರ ನೆನಪಿನಲ್ಲಿ ಹಲವಾರು ಹಾಡುಗಳ ಸಂಗ್ರಹವಿದೆ. ಇವರ ಹಟ್ಟಿಯು ಬೆಟ್ಟಗುಡ್ಡಗಳಿರುವ ಪ್ರದೇಶದಿಂದ ಆವೃತವಾಗಿದೆ. ಪೆನಗುಂಡೆ ಬೆಟ್ಟ, ಅಡ್ಡ ಗುಟ್ಟೆ, ಅವರಗಲ್ಲು ಬೆಟ್ಟ, ಒನಕೆ ಗುಂಡ್ಲು ಮೊದಲಾದ ಹೆಸರುಗಳಿಂದ ಈ ಬೆಟ್ಟಗಳನ್ನು ಕರೆಯಲಾಗುತ್ತದೆ. ಈ ಬೆಟ್ಟಗಳಿಗೆ ಹೋಗಿ ತಮ್ಮ ಹಸುಕರುಗಳಿಗೆ ಬಾದೆ ಹುಲ್ಲು ತರುವುದು ಇವರ ದಿನ ನಿತ್ಯದ ಕಾಯಕ. ದಿನಾ ರಾತ್ರಿ ಸುಮಾರು ಎಂಟು ಹತ್ತು ಜನಕ್ಕೆ ರಾಗಿ ಬೀಸುವುದು ಇವರ ದಿನ ನಿತ್ಯದ ಕೆಲಸಗಳಲ್ಲಿ ಒಂದು. ಇವರ ತಂದೆ ಚಿತ್ತೇ ಗೌಡ. ತಾಯಿ ದೊಡ್ಡಮ್ಮ. ಇವರ ತಾಯಿ ತಂದೆಯರಿಗೆ ಒಟ್ಟು ಒಂಭತ್ತು ಮಂದಿ ಮಕ್ಕಳು. ಅದರಲ್ಲಿ ಆರು ಗಂಡು ಮೂರು ಹೆಣ್ಣು ಮಕ್ಕಳು. ಎಂಟನೆಯವರೇ ಕೆಂಗಮ್ಮ. ಇವರಿಗೆ ಹದಿನಾರು ವರ್ಷ ತುಂಬಿದಾಗಲೇ ತಂಬುಗನ ಹಟ್ಟಿ ಕರಿಯಣ್ಣನವರ ಜೊತೆ ವಿವಾಹವಾಯಿತು. ಇವರಿಗೆ ಮೂರು ಜನ ಮಕ್ಕಳು. ಅದರಲ್ಲಿ ಮೂರು ಜನರು ಈಗಾಗಲೇ ತೀರಿಕೊಂಡಿದ್ದು, ಉಳಿದ ಮೂರು ಜನರಲ್ಲಿ ಒಂದು ಗಂಡು ಇಬ್ಬರು ಹೆಣ್ಣು ಮಕ್ಕಳು ಬದುಕಿದ್ದಾರೆ. ಕೆಂಗಮ್ಮ ತಮ್ಮ ಅತ್ತೆಯಂದಿರಾದ ಬೊಮ್ಮಕ್ಕ, ಸಿತ್ತಮ್ಮರ ಜೊತೆ ರಾಗಿ ಬೀಸುತ್ತಾ ಬೀಸೋ ಹಾಡುಗಳನ್ನು ಕಲಿತರು. ಚಿತ್ರದೇವರು, ಕರಿಯಮ್ಮ ಇವರ ಮನೆ ದೇವರುಗಳು. ಇವರು ಈ ದೇವರುಗಳ ಮೇಲೆ ಹಲವಾರು ಪದಗಳನ್ನು ಹಾಡುತ್ತಾರೆ. ಸೋಬಾನೆ ಪದಗಳು, ಜನಪದ ಕತೆಗಳು, ಒಗಟು ಕಥೆಗಳು, ಮೈ ನರೆಯುವಾಗ ಹಾಡುವ ಪದಗಳು, ಚಿತ್ರದೇವರು ಬೇಟೆಯಾಡಿದ ಪದಗಳು ಮೊದಲಾದವು ಇನ್ನೂ ಇವರ ನೆನಪಿನಲ್ಲಿವೆ. ಒಟ್ಟಿನಲ್ಲಿ ಕೆಂಗಮ್ಮ ಕಾಡುಗೊಲ್ಲ ಸಮುದಾಯದ ಒಬ್ಬ ಹಿರಿಯ ಕಲಾವಿದರು.

ದೊಡ್ಡಮ್ಮ:

ದೊಡ್ಡಮ್ಮನವರು ಮೂಲತಃ ಮೆರೆಯರನವರ ಗೊಲ್ಲರ ಬೆಡಗಿನವರಾಗಿದ್ದು ಇವರನ್ನು ಕರಡಿಗೊಲ್ಲರ ಮನೆತನಕ್ಕೆ ಕೊಟ್ಟು ಮದುವೆ ಮಾಡಲಾಗಿದೆ. ಇವರಿಗೆ ಸುಮಾರು ೫೫ ವರ್ಷ ವಯಸ್ಸು. ಮೇಲೆ ಹೇಳಲಾದ ಕೆಂಗಮ್ಮ (ವಕ್ತೃ) ಅವರ ಮಗಳಾಗಿರುವ ದೊಡ್ಡಮ್ಮ ಹಲವಾರು ಪದಗಳನ್ನು ನೆನಪಿನಲ್ಲಿರಿಸಿಕೊಂಡ ಕಾಡುಗೊಲ್ಲ ಕಲಾವಿದೆ. ಅದರಲ್ಲೂ ಮಂಗಳಾರತಿ ಪದ, ದೇವರ ಪದ, ರಾಜ ವಿಕ್ರಮನ ಕುರಿತ ಪದ, ಭಜನೆ ಪದ, ಸೋಬಾನೆ ಪದಗಳನ್ನು ಹೆಚ್ಚಾಗಿ ಹಾಡುತ್ತಾರೆ. ಹಲವಾರು ಕಷ್ಟಗಳನ್ನು ಕಂಡುಂಡ ದೊಡ್ಡಮ್ಮನವರು "ಎಂತೆಂಥಾ, ಸತ್ಯವಂತ ಮಹಾರಾಜರಿಗೆಲ್ಲ ಕಷ್ಟಗಳು ಬಂದಿವೆ. ಅದರಲ್ಲಿ ನಮ್ಮದ್ಯಾವಲೆಕ್ಕ" ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ. ಕೆಂಗಮ್ಮನವರು ಹಾಡಿರುವ ಕಾಟಮ್ಮನ ಪದಗಳನ್ನು ಬಿಡಿಸಿ ಬರೆಯಲು ಸರಳವಾಗುವಂತೆ ವಿವರಣೆಗಳನ್ನು ನೀಡಿದ್ದಾರೆ.

ಚಿತ್ತಮ್ಮ:

ಚಿತ್ತಮ್ಮ ಇವರದ್ದು ಕರಡೇರು ಗೊಲ್ಲ ಮನೆತನ. ಇವರಿಗೆ ಸುಮಾರು ೭೦ವರ್ಷ ವಯಸ್ಸು. ಈ ಕೃತಿಯಲ್ಲಿ ಬರುವ ಕಾಟಮ್ಮನ ಕುರಿತಾದ ಹಲವಾರು ವಿಚಾರಗಳ ಕುರಿತ ಮಾಹಿತಿಯನ್ನು ಇವರು ನೀಡಿದ್ದಾರೆ. ಇವರ ಊರು ಡಿ ಹೊಸಹಳ್ಳಿ ಗೊಲ್ಲರ ಹಟ್ಟಿ. ಕುಣಿಗಲ್ ತಾಲೂಕು. ಇಡೀ ರಾತ್ರಿ ಜುಂಜಪ್ಪನ ಹಾಡುಗಳನ್ನು ಹಾಡುವ ಕಲಾವಿದರು ಇವರು. ಅಲ್ಲದೇ, ತಿಮ್ಮಪ್ಪ, ಕಾವಲಮ್ಮ, ರಂಗಪ್ಪ ಹೀಗೆ ತನ್ನ ಕುಲದ ದೇವರುಗಳ ಮೇಲೆ ಅನೇಕ ಪದಗಳನ್ನು ಸರಾಗವಾಗಿ ಹಾಡುತ್ತಾರೆ. ಹಟ್ಟಿಯ ದೇವರುಗಳ ಉತ್ಸವದ ಸಂದರ್ಭದಲ್ಲಿ ಇವರು ಮಂಗಳಾರತಿ ಪದಗಳನ್ನು ಹಾಡುತ್ತಾರೆ.

ಗೌಡ ಚಿಕ್ಕಣ್ಣ:

ಗೌಡ ಚಿಕ್ಕಣ್ಣ ಇವರು ಹಿರಿಯೂರು ತಾಲೂಕಿನ ಪಿಲಾಲಿ ಗ್ರಾಮದ ಸರಸ್ವತಿ ಹಟ್ಟಿಯವರು. ಇವರ ತಂದೆ ಚಿಕ್ಕ ಬಾಲಪ್ಪ. ತಾಯಿ ತಿಮ್ಮಕ್ಕ. ಗೌಡ ಚಿಕ್ಕಣ್ಣನವರು ಪಿಲಾಲಿ ಸರಸ್ವತಿ ಹಟ್ಟಿಯ ಗೌಡರಾಗಿದ್ದು, ಹಟ್ಟಿಯ ಯಾವುದೇ ನ್ಯಾಯ ತೀರ್ಮಾನಗಳು ಇವರ ಮುಖಾಂತರವೇ ನಡೆಯುತ್ತದೆ. ಇವರು ಸ್ವತಃ ಕಲಾವಿದರೂ ಹೌದು. ತಮ್ಮ ಕುಲದೇವರುಗಳ ಮೇಲೆ ಅನೇಕ ಪದಗಳನ್ನು ಹಾಡುತ್ತಾರೆ. ಇವರು ಕಾಡುಗೊಲ್ಲರಲ್ಲಿ ಬರುವ ಕಂಬೇರುಗೊಲ್ಲ ಬೆಡಗಿನವರು. ಚಿತ್ರದೇವರ ಮೇಲೆ, ಬಾಲಯ್ಯನ ಮೇಲೆ, ಈರು ದೊಡ್ಡಣ್ಣನ ಮೇಲೆ ಅನೇಕ ಪದಗಳನ್ನು ಹಾಡುತ್ತಾರೆ. ಮಾರನವರ ಗೊಲ್ಲರ ಬೆಡಗಿನ ಹಾಡುಗಳನ್ನು ಹಾಗೂ ಕರಡಿಬುಳ್ಳಪ್ಪ ಕಟ್ಟೆಮನೆ ರಚಿಸಿಕೊಂಡ ಕತೆಯನ್ನು ಹೇಳಿದ್ದಾರೆ.

ಶಿವಣ್ಣ ಪಿ.ಸಿ:

ಶಿವಣ್ಣ ಪಿ.ಸಿ. ಅವರು ಪಾವಗಡ ತಾಲೂಕಿನ ಜಂಗಮರ ಹಳ್ಳಿ ಗೊಲ್ಲರ ಹಟ್ಟಿಯಲ್ಲಿ ಹುಟ್ಟಿದರು. ಇವರ ತಂದೆ ಪೂಜಾರಿ ಚಿತ್ತಪ್ಪ. ಹಿರಿಯೂರಿನ ಸಿವಿಲ್ ಕೋರ್ಟ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಮಾರನವರ ಬೆಡಗಿನವರು. ತಮ್ಮ ಬೆಡಗಿನ ಬಗ್ಗೆ ಹಲವಾರು ವಿಚಾರಗಳನ್ನು ತಿಳಿದುಕೊಂಡಿದ್ದಾರೆ. ಸ್ವತ: ಕಾಡುಗೊಲ್ಲ ಕಲಾವಿದರನ್ನು ಸಂಪರ್ಕಿಸಿ ಅನೇಕ ವಿಷಯಗಳನ್ನು ಕಲೆಹಾಕಿದ್ದಾರೆ. ನಮ್ಮ ಈ ಕೃತಿಯಲ್ಲಿ ಬರುವ ಕರಡಿಗೊಲ್ಲ ಹಾಗೂ ಮಾರನವರ ಗೊಲ್ಲರ ಕಟ್ಟೆಮನೆ ಹಾಗೂ ಗುಡಿಕಟ್ಟುಗಳು ಇರುವ ಸ್ಥಳಗಳ ಕುರಿತಂತೆ ಮಾಹಿತಿಯನ್ನು ನೀಡಿದ್ದಾರೆ. ನಮ್ಮ ಜೊತೆ ಕ್ಷೇತ್ರಕಾರ್ಯದಲ್ಲಿ ಪಾಲ್ಗೊಂಡು ನಂದಿಹಳ್ಳಿ ಗುಡಿಕಟ್ಟನ್ನು ಪರಿಚಯಿಸಿದ್ದಾರೆ.

ನಾಗಪ್ಪ. ವಿ:

ಇವರು ಮಾರನವರ ಬೆಡಗಿನವರು. ಇವರಿಗೆ ೮೦ ವರ್ಷ ವಯಸ್ಸು. ಇವರು ಕಾಡುಗೊಲ್ಲ ಸಮುದಾಯದ ಬಗ್ಗೆ ಅಪಾರವಾದ ಜ್ಞಾನ ಹೊಂದಿದ್ದಾರೆ. ತೀರಾ ಹಿಂದುಳಿದ ಕಾಡುಗೊಲ್ಲರನ್ನು ಮುಖ್ಯವಾಹಿನಿಗೆ ತರಲು 'ಕಾಡುಗೊಲ್ಲರ ಕ್ಷೇಮಾಭಿವೃದ್ಧಿ ಸಂಘ'ವನ್ನು ಸ್ಥಾಪಿಸಿ, ಈ ಸಂಘದ ಅಧ್ಯಕ್ಷರು ಇವರೇ ಆಗಿದ್ದಾರೆ. ಈಗಲೂ ಯುವಕರಂತೆ ಸದಾ ಕ್ರಿಯಾಶೀಲರಾಗಿ ಓಡಾಡಿಕೊಂಡು ಇರುವ ಇವರು ಈ ಸಮುದಾಯದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ತಮಗೆ ಕೆಲಸ–ಕಾರ್ಯಗಳಲ್ಲಿ ಬೆಂಬಲವಾಗಿರುವ ಡಾ. ಕಾಟಪ್ಪ, ಡಾ. ಗುರುಲಿಂಗಯ್ಯ, ಶ್ರೀ ಚಂಗಾವರದ ಕರಿಯಪ್ಪನವರನ್ನು ಸದಾ ಸ್ಮರಿಸಿಕೊಳ್ಳುತ್ತಾರೆ. ಇವರು ಮಾರನವರ ಗೊಲ್ಲರ ನೆಲೆಗಳಾದ ಪಾಲೇನಳ್ಳಿ, ಮಸ್ಕಲ್ಲು, ಹಾಗೆಯೇ ಚಿತ್ರದೇವರ ಕುರಿತಾದಂತೆ ಹಲವಾರು ಮಾಹಿತಿಗಳನ್ನು ನೀಡಿದ್ದಾರೆ.

ಚಿತ್ತಯ್ಯ ಸಿ:

ಇವರು ಕರಡಿಗೊಲ್ಲ ಬೆಡಗಿನವರು. ಇವರಿಗೆ ೬೭ ವರ್ಷ ವಯಸ್ಸು. ಹುಟ್ಟಿದ್ದು ಹಿರಿಯೂರು ತಾಲೂಕಿನ ಮ್ಯಾಕಲೂರು ಹಳ್ಳಿಯಲ್ಲಿ. ಇವರು ಕರಡಿಬುಳ್ಳಪ್ಪನ ಕುರಿತಾದಂತಹ ಅನೇಕ ಮಾಹಿತಿಗಳನ್ನು ತಿಳಿಸಿಕೊಟ್ಟಿದ್ದಾರೆ. ೧೯೯೬ರಲ್ಲಿ ಕಾಡುಗೊಲ್ಲರ ಸಮಾವೇಶವೊಂದಕ್ಕಾಗಿ ಜನರನ್ನು ಸಂಘಟಿಸಲು ಹೋದಾಗ ದೊರೆತ ಮಾಹಿತಿಗಳನ್ನು ಇಲ್ಲಿ ನೀಡಿದ್ದಾರೆ. ಅದರಂತೆ, "ಹಿಂದೆ ಪುರಾತತ್ವ ಇಲಾಖೆಯವರು ಹಳೆಯ ಗುಡಿಗೋಪುರಗಳ ಸರ್ವೆ ನಡೆಸುವ ಸಂದರ್ಭದಲ್ಲಿ ಮಸ್ಕಲ್ಲು ಚಿತ್ರದೇವರ ಗುಡಿಯ ಪಕ್ಕದಲ್ಲಿ ಒಂದು ಪೆಟ್ಟಿಗೆ ಸಿಗುತ್ತದೆ. ಆ ಪೆಟ್ಟಿಗೆಯಲ್ಲಿ ತಾಮ್ರ ಹಿತ್ತಾಳೆಯ ಹಾಳೆಗಳ ಮೇಲೆ ಕಾಡುಗೊಲ್ಲರ ದೇವರ ಕುರಿತಂತೆ ಹಾಗೂ ಕರಡಿ ಬುಳ್ಳಪ್ಪನ ಮಕ್ಕಳು ಸಮಾಧಿಯಾದ ಜಾಗದ ಕುರಿತಂತೆ ಬರೆದಿರಲಾಗಿತ್ತು" ಇಂಥ ಅಪರೂಪದ ವಿಚಾರಗಳನ್ನು ಇವರು ತಿಳಿಸಿಕೊಟ್ಟಿದ್ದಾರೆ.

ರಂಗದಾಮಪ್ಪ:

ಇವರು ಪಾವಗಡ ತಾಲೂಕು ಕೆಂಚಮ್ಮನಹಳ್ಳಿಯವರು. ಇವರಿಗೆ ಸುಮಾರು ೪೫ ವರ್ಷಗಳಾಗಿದ್ದು, ಇವರು ಹುಟ್ಟುಕಲಾವಿದರು. ಇವರು ಈ ಕೃತಿಯಲ್ಲಿ ನೀಡಲಾದ ಕರೇಓಬೇನಳ್ಳಿ ಕಟ್ಟೆಮನೆ ಕುರಿತ ಬಿಡಿ ಗೀತೆಗಳನ್ನು ಹಾಡಿದ್ದಾರೆ. ಉಳಿದಂತೆ ಚಿತ್ರದೇವರು, ಮಾರಮ್ಮ ದೇವರುಗಳ ಮೇಲೂ ಪದಗಳನ್ನು ಹಾಡುತ್ತಾರೆ.

ದಾಸಪ್ಪ:

ಇವರು ಹಿರಿಯೂರು ತಾಲೂಕು ಯಣ್ಣೆಗೇರ ಗೊಲ್ಲರಹಟ್ಟಿಯವರು. ಇವರಿಗೆ ಸುಮಾರು ೫೦ ವರ್ಷ. ಇವರು ನಂದಿಹಳ್ಳಿ ಗುಡಿಕಟ್ಟಿನ ದೇವರಾದ ರಂಗಪ್ಪನ ಆರಾಧಕರು. ಈ ಕೃತಿಯಲ್ಲಿ ನೀಡಲಾದ ನಂದಿಹಳ್ಳಿ ರಂಗಪ್ಪನ ಕುರಿತ ಬಿಡಿ ಗೀತೆಗಳನ್ನು ಹಾಡಿದ್ದಾರೆ. ಅವುಗಳನ್ನು ಈ ಕೃತಿಯಲ್ಲಿ ನೀಡಲಾಗಿದೆ.

ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, ಕಾಡುಗೊಲ್ಲರ ಜಾನಪದ ಗೀತೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨. ಈಶ್ವರಪ್ಪ ಎಂ.ಜಿ., ಮ್ಯಾಸಬೇಡರು, ಐಬಿಎಚ್ ಪ್ರಕಾಶನ ಗಾಂಧಿನಗರ ಬೆಂಗಳೂರು, ೧೯೮೨

೩. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಜಾನಪದ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ ಸಂಶೋಧನಾ ಗ್ರಂಥ.

೪. ಗಂಗಾಧರಯ್ಯ ಪಿ.ಎಂ., ಕಾಡುಗೊಲ್ಲರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭಾಷಾಭಿವೃದ್ಧಿ ಯೋಜನೆ ತುಮಕೂರು ವಿಶ್ವವಿದ್ಯಾಲಯ, ತುಮಕೂರು ೨೦೧೧

೫. ಗುರುಲಿಂಗಯ್ಯ ಎಂ, ನಾಗಪ್ಪ ವಿ., ಕಾಡುಗೊಲ್ಲ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು, ೨೦೦೮.

೬. ಚಲವರಾಜು, ಜುಂಜಪ್ಪ ಮೌಖಿಕ ಮಹಾಕಾವ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಪಾರ್ವತಮ್ಮ ಸಿ., ಆದಿವಾಸಿ ಸಮುದಾಯಗಳ ಅಭಿವೃದ್ಧಿ, ಹೊನ್ನಾರು ಮಾಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೭

೮. ಪ್ರಭಾಕರ ಎ.ಎಸ್, ಹಾಲಮ್ಮ ಹಾಗೂ ಸಂಗಡಿಗರು ಹಾಡಿದ ಮ್ಯಾಸಬೇಡರ ಕಥನಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೯

೯. ಮಲ್ಲಿಕಾರ್ಜುನ ಕಲಮರಹಳ್ಳಿ, ಗೊಲ್ಲರ ಇತಿಹಾಸ ಕಥನ, ಮಂಟಪ ಮಾಲೆ ೨೫೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೧೧.

೧೦. ಮೀರಾಸಾಬಹಳ್ಳಿ ಶಿವಣ್ಣ, ಕಾಡುಗೊಲ್ಲ ಬುಡಕಟ್ಟು ವೀರರು, ಸಿ.ವಿ.ಜಿ ಪಬ್ಲಿಕೇಷನ್ ಬೆಂಗಳೂರು.೨೦೦೫

೧೧. ಮೀರಾಸಾಬಿಹಳ್ಳಿ ಶಿವಣ್ಣ, ಕಾಡುಗೊಲ್ಲರ ಕಾವ್ಯಗಳು, ಪ್ರಚಾರ ಪುಸ್ತಕ ಮಾಲೆ ೩೧೧ ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ೨೦೦೯

೧೨. ಮೈತ್ರಿ ಕೆ.ಎಂ., ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೨

೧೩. ಮೋಹನ್ ಕುಮಾರ್ ಎನ್., ಕಾಡುಗೊಲ್ಲರ ಕೋಲಾಟದ ಪದಗಳು, ವಿಸ್ತರಣೆ ಹಾಗೂ ಸಲಹಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ೨೦೧೩

೧೪. ವಿಜಯ್ ಪೂಣಚ್ಚ ತಂಬಂಡ, ಕೆಳವರ್ಗದ ಪ್ರತಿಭಟನೆ–ಸಬಾಲ್ಟರ್ನ್ ಚರಿತ್ರೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೯

೧೫. ವಿರೂಪಾಕ್ಷಿ ಪೂಜಾರಹಳ್ಳಿ, ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೨

೧೬. ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಚಿನ್ನ ಹಗರಿ ಪ್ರಕಾಶನ, ಕೂಡ್ಲಿಗಿ. ಬಳ್ಳಾರಿ ಜಿಲ್ಲೆ, ೨೦೦೭

೧೭. ಶಂಕರನಾರಾಯಣ ತೀ.ನಂ., ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ೧೯೯೪.

೧೮. ಶಿವಣ್ಣ ಎಸ್., ಕಾಡುಗೊಲ್ಲರ ಸಾಂಸ್ಕೃತಿಕ ವೀರರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,ಕನ್ನಡ ಭಾಷಾಭಿವೃದ್ಧಿ ಯೋಜನೆ, ತುಮಕೂರು ವಿಶ್ವವಿದ್ಯಾಲಯ, ತುಮಕೂರು ೨೦೧೧

೧೯. ಸ.ಚಿ.ರಮೇಶ್, ಅಲೆಮಾರಿಗಳ ಸ್ಥಿತಿಗತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೫

೨೦. ಸ.ಚಿ.ರಮೇಶ್, ದಕ್ಷಿಣ ಭಾರತೀಯ ಜಾನಪದ ಕೋಶ –ಸಂಪುಟ –೧, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೧

೨೧. ಸಣ್ಣವೀರಣ್ಣ ದೊಡ್ಡಮನಿ, ಕಿಳ್ಳೇಕ್ಯಾತರು, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು ೨೦೦೮.

೨೨. ಸವಿತಾ ನಾಯಕ, ಬುಡಕಟ್ಟು ಮಹಿಳೆಯರ ಪ್ರಸಾಧನ ಕಲೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೨

೨೩. ಹನುಮಂತಪ್ಪ ತಾರಿಹಳ್ಳಿ (ಸಂ), ಕರ್ನಾಟಕದ ಬುಡಕಟ್ಟು ಸಮುದಾಯಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦

ಕಾಡುಗೊಲ್ಲರ ಬೆಡಗಿನ ಪದಗಳು ■ ಶ್ವೇತಾ ಎಂ.ಬಿ., ಮೋಹನಕುಮಾರ್ ಎನ್.

ಕರ್ನಾಟಕದಲ್ಲಿ ಹಲವು ಬುಡಕಟ್ಟು ಸಮುದಾಯಗಳಿವೆ. ಪ್ರತಿಯೊಂದು ಬಡುಕಟ್ಟಿಗೂ ತನ್ನದೆಯಾದ ವಿಶಿಷ್ಟ ಸಂಸ್ಕೃತಿ, ಪರಂಪರೆಗಳು ಇರುತ್ತವೆ. ಪ್ರಾದೇಶಿಕವಾಗಿ ವೈವಿಧ್ಯತೆ ಇರುವಂತೆ ಪ್ರತಿಯೊಂದು ಬುಡುಕಟ್ಟುಗಳಲ್ಲಿ ಆಹಾರ, ಆಚಾರ-ವಿಚಾರ, ಉಡುಗೆ-ತೊಡುಗೆ, ನಂಬಿಕೆ-ನಿಷೇಧ, ರೂಢಿ ಪದ್ಧತಿಗಳಲ್ಲೂ ವಿವಿಧತೆ ಕಂಡುಬರುತ್ತದೆ. ಆಧುನಿಕತೆಯ ಪ್ರಭಾವದಿಂದ ಬುಡಕಟ್ಟು ಸಮುದಾಯಗಳ ಬದುಕಿನಲ್ಲಿ ವಿಶಿಷ್ಟ ಬದಲಾವಣೆಗಳಾಗಿವೆ. ಹೀಗಾಗಿ ಆ ಸಮುದಾಯಗಳಲ್ಲಿರುವ ಕಲೆ, ಸಾಹಿತ್ಯ, ಸಾಂಸ್ಕೃತಿಕ ಸಂಗತಿಗಳು ಕಣ್ಮರೆಯಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಈ ನಡುವೆಯೂ ಕಾಡಿನ ಸಂಸ್ಕೃತಿ ಮತ್ತು ನಾಡಿನ ಸಂಸ್ಕೃತಿಗಳನ್ನು ಸಮನ್ವಯಗೊಳಿಸಿಕೊಂಡೂ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬರುತ್ತಿರುವ ಅನೇಕ ಬುಡಕಟ್ಟುಗಳಲ್ಲಿ ಕಾಡುಗೊಲ್ಲ ಸಮುದಾಯವೂ ಒಂದಾಗಿದೆ. ಕಾಡುಗೊಲ್ಲ ಸಮುದಾಯಗಳಲ್ಲಿ ಕೆಲವು ಪ್ರತ್ಯೇಕ ಪಂಗಡಗಳಿವೆ. ಪ್ರತಿ ಬೆಡಗುಗಳಲ್ಲೂ ಜಾರಿಯಲ್ಲಿರುವ ವಿಶಿಷ್ಟ ಆಚರಣೆಗಳ ಜೊತೆಗೆ ಮೌಖಿಕ ಸಾಹಿತ್ಯವೂ ಅಪಾರ ಪ್ರಮಾಣದಲ್ಲಿದೆ. ಅದನ್ನು ಸಂಗ್ರಹಿಸುವ, ವಿಶ್ಲೇಷಿಸುವ ಪ್ರಯತ್ನಗಳು ಈವರೆಗೂ ನಡೆದೇ ಇವೆ. ಅಂಥ ಪ್ರಯತ್ನಗಳಲ್ಲಿ ಎಂ.ಬಿ. ಶ್ವೇತಾ ಮತ್ತು ಎನ್. ಮೋಹನಕುಮಾರ್ ಅವರು ಸಂಗ್ರಹಿಸಿದ 'ಕಾಡುಗೊಲ್ಲರ ಬೆಡಗಿನ ಪದಗಳು' ಗಮನಾರ್ಹವಾದವಾಗಿವೆ. ಸುದೀರ್ಘ ಪ್ರಸ್ತಾವನೆಯಲ್ಲಿ ಕಾಡುಗೊಲ್ಲ ಸಮುದಾಯಗಳ ಪ್ರತ್ಯೇಕ ಪಂಗಡಗಳು, ಅವುಗಳ ನಡುವಿನ ವೈಶಿಷ್ಟ್ಯತೆ ಇತ್ಯಾದಿ ಅಂಶಗಳ ಕುರಿತು ಚರ್ಚಿಸಲಾಗಿದೆ. ಕಾಡುಗೊಲ್ಲ ಬೆಡಗಿನ ಪದಗಳು ಅಧ್ಯಯನಕ್ಕೆ ಯೋಗ್ಯವಾಗಿದ್ದು, ಉತ್ತಮ ಆಕರವಾಗಬಲ್ಲ ಕೃತಿಯನ್ನು ಸಂಪಾದಿಸಿಕೊಟ್ಟ ಎಂ.ಬಿ. ಶ್ವೇತಾ ಮತ್ತು ಶ್ರೀ ಎನ್. ಮೋಹನಕುಮಾರ್ ಅವರು ಅಭಿನಂದನಾರ್ಹರು.

■ **ಪ್ರೊ. ಅಂಬಳಿಕೆ ಹಿರಿಯಣ್ಣ**
ಕುಲಪತಿ

ISBN 978-93-83149-14-8

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ